ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 16

೧೬ ಫೆಬ್ರವರಿ ೧೯೫೮

★

ಪುಟ ೧೦ ಬೆಲೆ: ೧೩ ನ. ಪೈಸೆ

★

ಭಾರತ-ವಿಯಟ್ನಾಂಗಳ ನಡುವೆ ಐಕ್ಯತೆಯನ್ನು ವಿಶ್ವದ ಯಾವ ಶಕ್ತಿಯೂ ತಡೆಯಲಾರದು

ಬೆಂಗಳೂರಿನಲ್ಲಿ ಡಾ|| ಹೋ-ಚಿ-ಮಿನ್ಹ್‌ರವರು

ವಿಯಟ್ನಾಂ ಅಧ್ಯಕ್ಷ ಡಾ| ಹೋ-ಚಿ-ಮಿನ್ಹ್‌ರವರು ಬೆಂಗಳೂರು ನಗರಕ್ಕೆ ಫೆಬ್ರವರಿ ೧೧ರಂದು ಸಂಜೆ 5ಕ್ಕೆ ವಿಮಾನದಲ್ಲಿ ಆಗಮಿಸಿದರು. ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲರೂ, ಮುಖ್ಯ ಮಂತ್ರಿಗಳೂ ಮತ್ತು ಸರಕಾರೀ ಅಧಿಕಾರಿಗಳು ಹೋ-ಚಿ-ಮಿನ್ಹ್‌ರವರಿಗೆ ಸ್ವಾಗತ ನೀಡಿದರು.

ವಿಮಾನ ನಿಲ್ದಾಣದಿಂದ ರೆಸಿಡೆನ್ಸಿ ಭವನಕ್ಕೆ ಆಗಮಿಸಿದಾಗ ಕಮ್ಯೂನಿಸ್ಟ್ ಪಕ್ಷದ ಪರವಾಗಿ ಮತ್ತು ವಿವಿಧ ಕಾರ್ಮಿಕ, ಸಾಂಸ್ಕೃತಿಕ ಸಂಘಗಳ ಪರವಾಗಿ ಹೋ ಚಿ ಮಿನ್ಹ್‌ರವರಿಗೆ ಹಾರವನ್ನರ್ಪಿಸಿ ಸ್ವಾಗತಿಸಲಾಯಿತು. ಅಂದು ಸಂಜೆ ನಗರ ಸಭೆಯ ಪರವಾಗಿ ಡಾ| ಹೋರವರಿಗೆ ಮಾನಪತ್ರವನ್ನು ಸಮರ್ಪಿಸಿ ಗೌರವಿಸಲಾಯಿತು.

ಹೋ-ಚಿ-ಮಿನ್ಹ್‌ರವರ ಭಾಷಣ

ಡಾ| ಹೋ ಚಿ ಮಿನ್ಹ್ ನಗರಸಭೆಯ ಮಾನಪತ್ರಕ್ಕೆ ಉತ್ತರವನ್ನೀಯುತ್ತಾ 'ಉಭಯ ರಾಷ್ಟ್ರಗಳಲ್ಲೂ ಇನ್ನೂ ಉಳಿದಿರುವ ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿಕೊಂಪೆಗಳ ಬಂಧನದಿಂದ ಭಾರತ ಹಾಗೂ ವಿಯಟ್ನಾಂ ವಿಮೋಚನೆ ಹೊಂದಿ ಪೂರ್ಣ ಸಂಘಟಿತ ರಾಷ್ಟ್ರಗಳಾಗುವುದನ್ನು ವಿಶ್ವದಲ್ಲಿ ಯಾವ ರಾಷ್ಟ್ರವೇ ಆಗಲಿ, ಯಾವ ಶಕ್ತಿಯೇ ಆಗಲಿ ತಡೆಯಲು ಸಾಧ್ಯವಿಲ್ಲ" ಎಂದು ತಿಳಿಸಿದರು.

"ನಾನು ಭಾಷಣ ಬರೆದು ತಂದಿಲ್ಲ ಆದರಿಂದಾಗಿ ಹೃದಯಾಂತರಾಳದಿಂದ ಮಾತನಾಡಲು ನನಗೆ ಅನುಮತಿ ಕೊಡಿ" ಎಂದು ತಿಳಿಸಿ ತಮ್ಮ ಭಾಷಣವನ್ನಾರಂಭಿಸಿದರು.

ಅವರು ತಮ್ಮ ಭಾಷಣದಲ್ಲಿ ವಿಯಟ್ನಾಂ ಸ್ವಾತಂತ್ರ್ಯ ಸಾಧನೆಗಷ್ಟೇ ಅಲ್ಲದೆ ಅದರ ಪ್ರಗತಿಗೂ ಭಾರತ ಸಹಾಯ ನೀಡುತ್ತಿದೆಯೆಂದೂ ಅದಕ್ಕಾಗಿ ಭಾರತಪ ಜನತೆಗೆ ಹಾಗೂ ನಾಯಕರಿಗೆ ತಮ್ಮ ಕೃತಜ್ಞತೆಯನ್ನು ಬಹಿರಂಗವಾಗಿ ವ್ಯಕ್ತಪಡಿಸುವುದಾಗಿಯೂ ತಿಳಿಸಿದರು. ಭಾರತದ ಸ್ವಾತಂತ್ರ್ಯಕ್ಕೆ ಮತ್ತು ಈಗ ರಾಷ್ಟ್ರದ ಏಳಿಗೆಗಾಗಿ ದುಡಿಯುತ್ತಿರುವ ಭಾರತದ ಜನರು ನಿಜವಾದ ವೀರರು. ಬಹಳ ಹಿಂದಿನಿಂದಲೂ ನಮ್ಮೆರಡು ರಾಷ್ಟ್ರಗಳ ನಡುವೆ ಸ್ನೇಹ ಸಹಕಾರಗಳಿವೆ, ವಿದೇಶಿಯರ ಆಕ್ರಮಣದ ಕಾರಣ ಅವು ಕಣ್ಮರೆಯಾದಂತೆ ಇತ್ತು. ಆದರೆ ನಮ್ಮಿರ್ವರ ದೃಢಪ್ರಯತ್ನಗಳಿಂದ ನಾವು ನಮ್ಮ ದೇಶಗಳಿಂದ ವಸಾಹತುಶಾಹಿಯನ್ನು ಒದ್ದೋಡಿಸಿದ ಮೇಲೆ ಸ್ನೇಹಸಹಕಾರ ಪುನರಾರಂಭವಾಗಿದೆಯೆಂದು ತಿಳಿಸಿದರು.

ಉಭಯ ರಾಷ್ಟ್ರಗಳಲ್ಲೂ ಕೆಲವು ಭಾಗಗಳು ಹೊರಗಿನ ಹತೋಟಿಯಲ್ಲಿದೆಯೆಂದೂ ಎರಡು ರಾಷ್ಟ್ರಗಳೂ ಪೂರ್ಣವಾಗಿ ಸ್ವಾತಂತ್ರ್ಯ ಹೊಂದಬೇಕಾದುದು ಅಗತ್ಯವೆಂದೂ ತಿಳಿಸಿದರು. ಭಾರತ ಸಾಧಿಸುತ್ತಿರುವ ಪ್ರಗತಿಯನ್ನು ಪ್ರಶಂಸಿಸಿದರು. ಪಂಚಶೀಲತತ್ವ ರೂಪುಗೊಳ್ಳಲು ಭಾರತ ವಹಿಸಿದ ಪಾತ್ರವನ್ನು ಮೆಚ್ಚಿ ತಮಗೆ ನೀಡಿದ ಸ್ವಾಗತಕ್ಕಾಗಿ ವಂದನೆಗಳನ್ನು ಅರ್ಪಿಸಿದರು.

ಈ ಸಮಾರಂಭವು ನಗರದ ಸುಂದರ ವನವಾದ ಲಾಲ್‌ಬಾಗಿನ ಗ್ಲಾಸ್ ಹೌಸಿನಲ್ಲಿ ನಡೆಯಿತು. ಗಂಧದ ಮರದಿಂದ ಕೆತ್ತಲ್ಪಟ್ಟ ಸುಂದರವಾದ ಕ್ಯಾಸ್ಕೆಟ್ಟಿನಲ್ಲಿ ಮಾನಪತ್ರವನ್ನು ನಗರದ ಮೇಯರರು ಹೋರವರಿಗೆ ಅರ್ಪಿಸಿದರು. ಡಾ| ಹೋರವರು ಪ್ರತಿಯಾಗಿ ಮಹಾತ್ಮ ಗಾಂಧಿ ಮತ್ತು ನೆಹರೂರವರ ಚಿತ್ರಗಳನ್ನು ಮೇಯರರಿಗಿತ್ತರು. ಲಾಲ್‌ಬಾಗಿಗೆ ಭೇಟಿ ಇತ್ತುದರ ಜ್ಞಾಪಕಾರ್ಥವಾಗಿ ಗ್ಲಾಸ್ ಹೌಸ್ ಬಳಿ ಸಣ್ಣ ಸಸಿಯೊಂದನ್ನು ನೆಟ್ಟರು.

ಸಾರ್ವಜನಿಕ ಸಮಾರಂಭದ ನಂತರ ನಗರದ ಟೌನ್ ಹಾಲಿನಲ್ಲಿ ಡಾ| ಹೋ ಚಿ ಮಿನ್ಹ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ವೀಕ್ಷಿಸಿದರು.

ಮಾರನೆಯ ದಿನ ಅಧ್ಯಕ್ಷ ಡಾ| ಹೋ ಚಿ ಮಿನ್ಹ್‌ರವರು ಮುಖ್ಯ ಕೈಗಾರಿಕೆಗಳಿಗೆ ಭೇಟಿ ಇತ್ತು ವಿಮಾನದಲ್ಲಿ ಪ್ರಯಾಣ ಬೆಳೆಸಿದರು. ತೆರೆದ ವಾಹನದಲ್ಲಿ ಡಾ| ಹೋ ಚಿ ಮಿನ್ಹ್‌ರವರು ವಿಮಾನ ನಿಲ್ದಾಣದಿಂದ ಆಗಮಿಸಿದಾಗ ರಸ್ತೆಯ ಇಕ್ಕೆಲಗಳಲ್ಲಿ ಸಹಸ್ರಾರು ಜನರು ನಿಂತು ಸ್ವಾಗತಿಸಿದರು.

★



ಡಾ|| ಹೋ-ಚಿ-ಮಿನ್ಹ್ ಬೆಂಗಳೂರಿಗೆ ಆಗಮಿಸಿದಾಗ ವಿಮಾನ ನಿಲ್ದಾಣದಲ್ಲಿ

(ಪಡಿಯಚ್ಚು: 'ಪ್ರಜಾವಾಣಿ' ಕೃಪೆಯಿಂದ)

★

ಪಾರ್ಲಿಮೆಂಟ್ ಅಧಿವೇಶನ ಆರಂಭ

ಭಾರತ ಪಾರ್ಲಿಮೆಂಟಿನ ಉಭಯ ಸಭೆಗಳ ಬಜೆಟ್ ಅಧಿವೇಶನವು ಫೆಬ್ರವರಿ 1ರಿಂದ ಆರಂಭವಾಗಿದೆ ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರ ಭಾಷಣದಿಂದ ಸಭಾಧಿವೇಶನದ ಕಾರ್ಯಕಲಾಪಗಳು ಆರಂಭವಾಗಿವೆ.

ಈ ಬಾರಿಯ ಅಧಿವೇಶನವು ಸ್ವಾರಸ್ಯಕರವಾಗಿರುವುದು. ಚಾಗ್ಲಾ ಸಮಿತಿಯ ವರದಿಯು ಬೆಳಕಿಗೆ ತಂದಿರುವ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ಅಲ್ಲದೆ ಅರ್ಥಸಚಿವ ಟಿ. ಟಿ. ಕೆ. ರವರ ನಿರ್ಗಮನವೂ ಈ ಬಾರಿ ಬರುವುದಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮದಲ್ಲಿ, ಎರಡು ವರ್ಷಗಳು ಮುಕ್ತಾಯದಲ್ಲಿ ಉದ್ಭವಿಸಿರುವ ಆರ್ಥಿಕ ಪರಿಸ್ಥಿತಿಯನ್ನು ಕುರಿತು ಮತ್ತು ಯೋಜನೆಯ ತಿರುಳನ್ನು ಕಾರ್ಯಗತ ಮಾಡುವುದು ಹೇಗೆ ಎನ್ನುವ ವಿಷಯವು ಪ್ರಾಮುಖ್ಯವಾಗಿ ಬರಲಿದೆ.

ದೇಶದಾದ್ಯಂತ ಅದರಲ್ಲೂ ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ತೀವ್ರ ವಿವಾದವನ್ನೆಬ್ಬಿಸಿರುವ ರಾಷ್ಟ್ರಭಾಷಾ ಪ್ರಶ್ನೆಯು ಚರ್ಚೆಗೆ ಬರಲಿದೆ. 30 ಮಂದಿಯನ್ನೊಳಗೊಂಡ ಪಾರ್ಲಿಮೆಂಟರಿ ಸಮಿತಿಯು ರಾಷ್ಟ್ರಭಾಷಾ ಸಮಿತಿಯ ವರದಿಯ ಬಗ್ಗೆ ಪರಿಶೀಲನೆ ನಡೆಸಿ ಮಾಡಿರುವ ವರದಿಯೂ ಸಹ ಚರ್ಚೆಗೆ ಬರಲಿದೆ.

ಚಾಗ್ಲಾ ಸಮಿತಿ ವರದಿ

ಚಾಗ್ಲಾ ಸಮಿತಿಯ ವರದಿಯು ಈಗಾಗಲೇ ಸರಕಾರಕ್ಕೆ ತಲುಪಿ ಮಂತ್ರಿಮಂಡಲದಲ್ಲಿ ಚರ್ಚೆಯಾಗಿದೆ. ಉಭಯ ಸಭೆಗಳ ಮುಂದೆಯೂ ಅದು ಇನ್ನೆರಡು ದಿನಗಳಲ್ಲಿ ಚರ್ಚೆಗೆ ಇಡಲಾಗುವುದು.

ಮಂತ್ರಿಮಂಡಲದಲ್ಲಿ ಬಹುತೇಕ ಸದಸ್ಯರು ವರದಿಯಲ್ಲಿನ ಅಂಶಗಳ ಬಗ್ಗೆ ತಮ್ಮ ಅತೃಪ್ತಿಯನ್ನು ವ್ಯಕ್ತಗೊಳಿಸಿದ್ದಾರೆಂದು ತಿಳಿದು ಬಂದಿದೆ. ಚಾಗ್ಲಾ ವರದಿಯಲ್ಲಿ ಜೀವವಿಮಾ ಕಾರ್ಪೊರೇಷನ್ ಸಾಧಾರಣ ವ್ಯಾಪಾರ ನಿಯಮಗಳಿಗೆ ವಿರುದ್ಧವಾಗಿ ಮುಂಧ್ರಾ ಷೇರುಗಳನ್ನು ಕೊಂಡಿದೆಯೆಂದೂ, ಅರ್ಥಸಚಿವರು ಹಾಗೂ ಅರ್ಥಸಚಿವ ಶಾಖೆಯ ಇತರ ಮುಖ್ಯ ಅಧಿಕಾರಿಗಳೂ ಇದಕ್ಕೆ ಜವಾಬ್ದಾರರಾಗಿರುವರೆಂದು

(ಕೊನೇ ಪುಟ ನೋಡಿ)

ಬೆಂಗಳೂರು ಸಿವಿಲ್ ಸ್ಟೇಷನ್ ಕೋ-ಒಪರೇಟಿವ್ ಸೊಸೈಟಿಯಲ್ಲಿ—

ಅಯೋಗ್ಯ ಆಡಳಿತೆ-ಸುಳ್ಳು ಲೆಕ್ಕದ ವರದಿ-ಹಣದ ದುರುಪಯೋಗ!

ಬೆಂಗಳೂರಿನ ಸಿವಿಲ್ ಸ್ಟೇಷನ್ ಕೋ-ಒಪರೇಟಿವ್ ಸೊಸೈಟಿ(ಲಿ.)ಯಲ್ಲಿ, ಸ್ವೇಚ್ಛಾಧಿಕಾರ, ದುರಾಡಳಿತೆ ಹಾಗೂ ಸುಳ್ಳು ಲೆಕ್ಕ ಪತ್ರಗಳನ್ನು ತೋರಿಸುವುದು ಮತ್ತು ಸಂಘದ ಹಣವನ್ನು ತಿಂದು ಹಾಕಿರುವ ವಿಷಯ 1955ರಲ್ಲಿ ಬೆಳಕು ಕಂಡಿತು. ಸರಕಾರದ ಮೌನದಿಂದ ಇದೇನು ಮುಚ್ಚಿಹೋದರೂ, ಈ ಸಹಕಾರಿ ಸಂಸ್ಥೆಯಲ್ಲಿ ಭಾಗಿಗಳಾಗಿದ್ದ ಸಾರ್ವಜನಿಕರು ಅಂದಿನಿಂದಲೂ, ಈ ವಿಷಯವಾಗಿ ಒಂಟಿಯಾಗಿ ಹೋರಾಡುತ್ತಿದ್ದಾರೆ.

1955ರಲ್ಲಿ ಸರಕಾರವು, ಡೆಪ್ಯೂಟಿ ರಿಜಿಸ್ಟ್ರಾರ್ ಶ್ರೀ ಬಿ. ಟಿ. ಪೀತಾಂಬರ್ ರಾವ್ ರವರನ್ನು ಈ ಸಹಕಾರಿ ಸಂಸ್ಥೆಯ ಲೆಖ್ಖ ಪತ್ರ ಪರಿಶೀಲನೆಗೆ ನೇಮಕ ಮಾಡಿತು. ಅವರು ಸಹಕಾರಿ ಸಂಸ್ಥೆಯ ಅವ್ಯವಸ್ಥೆ ಮತ್ತು ದುರಾಡಳಿತೆ ಕಂಡು, ಈ ಸಂಸ್ಥೆಯನ್ನು ಕೂಡಲೇ ಮುಚ್ಚಿಬಿಡಬೇಕು ಎಂದು (ನಂ.1227) ತಾ. 22—7—55ರಂದು ಮಾಡಿದ ವರದಿಯಲ್ಲಿ, ಕೋ-ಒಪರೇಟಿವ್ ರಿಜಿಸ್ಟ್ರಾರ್‌ರವರಿಗೆ ತಿಳಿಸಿದ್ದಾರೆ.

"ಈ 'ಲಿಕ್ವಿಡೇಷನ್' ಕ್ರಮ ಜರುಗಿಸಲು, ನಿಷ್ಪಕ್ಷಪಾತಿಯಾಗಿಯೂ, ನಿರ್ಭೀತಿಯಿಂದಲೂ, ನ್ಯಾಯವಾಗಿಯೂ ದುಡಿಯುವ 'ಲಿಕ್ವಿಡೇಟರ'ರನ್ನು ನೇಮಿಸಬೇಕು. ಇವರು ಇದಕ್ಕೆ ಸಂಬಂಧಪಟ್ಟ ಯಾವನೇ ಅಧಿಕಾರಿಯಾಗಿರಬಾರದು" ಎಂದು ಶ್ರೀ ಬಿ. ಟಿ. ಪೀತಾಂಬರ್ ರಾವ್ ರವರು ಕೊನೆಯದಾಗಿ ಹೇಳಿದ್ದಾರೆ.

ಆ ಕೂಡಲೇ ಸಹಕಾರಿ ಸಂಸ್ಥೆಯ ಡೈರೆಕ್ಟರರೊಬ್ಬರು, ಷೇರುದಾರರ ಸರ್ವ ಸದಸ್ಯರ ಸಭೆ ಕರೆದು, ಇಲ್ಲಿ ಸರ್ವಾನುಮತದಿಂದ, ಈ ಸಂಸ್ಥೆಯನ್ನು ಮುಚ್ಚಿಬಿಡಬೇಕೆಂಬ ನಿರ್ಣಯ ಸ್ವೀಕರಿಸಲ್ಪಟ್ಟಿತು. ಇದು ನಡೆದದ್ದು 30—5—56ರಂದು.

ಸರಕಾರದಿಂದ ಸುಳ್ಳು ಭರವಸೆಗಳು

ಆದರೆ ಸರಕಾರ ಆ ಮೇಲೆ ಈ ಸಂಸ್ಥೆಯನ್ನು ಮುಚ್ಚುವ ಭರವಸೆ ಮಾತ್ರ ಕೊಡುತ್ತಾ ಬಂದಿದೆ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವ ಆಶ್ವಾಸನೆ ಇತ್ತಿದೆ. 1954—55 ಮತ್ತು 1955—56ರಂದು, ಆಗ ಸಹಕಾರ ಮಂತ್ರಿಯಾಗಿದ್ದ ನಾಗಣ್ಣ ಗೌಡರು ಈ ಬಗ್ಗೆ ಕ್ರಮವಹಿಸುವ ಆಶ್ವಾಸನೆಯಿತ್ತುದು ಕಾರ್ಯರೂಪಕ್ಕೆ ಬರಲಿಲ್ಲ. ಅಲ್ಲದೆ, ಮತ್ತೆ ಸಹಕಾರಿ ಮಂತ್ರಿಯಾಗಿದ್ದ, ಶ್ರೀ ಭೀಮಪ್ಪ ನ್ಾಯಕರು, ಈ ಸಂಸ್ಥೆಯ ವಿಚಾರಣೆಗಾಗಿ ಪುನಃ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಿದರೂ, ಆ ವಿಚಾರಣೆಯ ವರದಿ ಕಸದ ಬುಟ್ಟಿಗೆ ಎಸೆಯಲ್ಪಟ್ಟಂತೆ ಕಾಣುತ್ತಿದೆ. ಇತ್ತೀಚೆಗೆ, ಈ ಸಂಸ್ಥೆಯ ಷೇರುದಾರರು ಮುಖ್ಯ ಮಂತ್ರಿಗಳನ್ನು ಈ ಬಗ್ಗೆ ಹಲವಾರು ಭಾರಿ ಕಾಣಲು ಯತ್ನಿಸಿದರೂ ಅವರನ್ನು ಒರಟಾಗಿ ತಿರಸ್ಕರಿಸಲಾಗಿದೆ ಎಂದೂ ನಮಗೆ ತಿಳಿದುಬಂದಿದೆ.

ಶ್ರೀ ಬಿ. ಟಿ. ಪೀತಾಂಬರ್ ರಾವ್ ರಿತ್ತ ವರದಿಯಲ್ಲಿ, ಸಹಕಾರ ಸಂಸ್ಥೆಯ ಲೆಖ್ಖಪತ್ರಗಳನ್ನೂ ಪರಿಶೀಲಿಸಿ, ಇದರಲ್ಲಿರುವ ಮೋಸವನ್ನು ಅಂಕೆ-ಅಂಶಗಳ ಸಮೇತ, ಆಡಿಟರ್ ಶ್ರೀ ವಿ. ಬಿ. ಭಟ್‌ರವರು 1950—51ರಲ್ಲಿ ಹೊರಗೆಡಹಿದ ಅಂಶವನ್ನು ಎತ್ತಿಹಿಡಿಯಲಾಗಿದೆ. ಅವರ ಆಡಿಟ್ ವರದಿಯಲ್ಲಿ 'ದುರಾಡಳಿತೆ ಹಾಗೂ ಲೆಖ್ಖಪತ್ರಗಳ ನ್ಯೂನತೆ, ಕ್ಲೋಸಿಂಗ್ ಸ್ಟಾಕ್‌ಗಳ ಸುಳ್ಳು ಹಾಗೂ ತಪ್ಪು (ಡೈರೆಕ್ಟರುಗಳಿಂದ) ಮಾನ್ಯತೆ, ಬ್ಯಾಲಾನ್ಸ್ ಶೀಟಿನಲ್ಲಿ ಸುಳ್ಳು ಲಾಭದ ತೋರಿಕೆ, ಸೇಲ್ಸ್ ಮ್ಯಾನುಗಳು ಪೂರ್ತಿಹಣವನ್ನು ಸಲ್ಲಿಸದಿರುವುದು, ಇವೆಲ್ಲವು ಹಲವಾರು ವರುಷಗಳಿಂದ ನಡೆದು ಬಂದಿವೆ. ಇದು ತಿಳಿದೂ ಆಗಿನ ಆಡಿಟರ್‌ಗಳಾಗಲೀ ಡೈರೆಕ್ಟರುಗಳಾಗಲೀ ಈ ಬಗ್ಗೆ ಏನೊಂದು ಕ್ರಮವೆಸಗಿಲ್ಲ' ಎಂದು ತಿಳಿಸಲಾಗಿದೆ.

★ ಈ ಸಹಕಾರಿ ಸಂಘದ ಆಡಳಿತೆಯು 1943ರಿಂದ 1950ರ ವರೆಗಿನ ಲೆಖ್ಖ ಪತ್ರದಲ್ಲಿ ಲಾಭವನ್ನೆ ತೋರಿದೆ. ಆದರೆ, 1950—51ನೇ ಸಾಲಿನಲ್ಲಿ ಅಕಸ್ಮಾತ್ತಾಗಿ ರೂ. 58,110-12-1 ನಷ್ಟವನ್ನು ತೋರಲಾಗಿದೆ. ಇದು ನಂಬಲಸಾಧ್ಯ.

★ ತಾ. 31—3—49ರಲ್ಲಿ, ಬ್ಯಾಲಾನ್ಸ್ ಶೀಟಿನಲ್ಲಿ ರೂಪಾಯಿ 88,325—2—5 ಸ್ಟಾಕ್ ಮೌಲ್ಯ ತೋರಿದ್ದರೂ ಆವಾಗ ನಿಜವಾದ ಸ್ಟಾಕಿನ ಮೌಲ್ಯ ರೂ. 65,886-7-11 ಮಾತ್ರವಾಗಿತ್ತು. ಆವಾಗಲೇ ರೂ. 22,438—10—6ರಷ್ಟು ಹೆಚ್ಚುವರಿಯನ್ನು ತೋರಲಾಗಿತ್ತು. ಅಂದರೆ, 1949—50ರ ಬಹಳ ಹಿಂದಿನಿಂದಲೇ ಈ ಸುಳ್ಳು ಲೆಖ್ಖ ಹಾಗೂ ಮೌಲ್ಯವನ್ನು ತೋರಿಸುವ ಸಂಪ್ರದಾಯವನ್ನು ಬಳಸಲಾಗಿತ್ತು ಎಂಬುದು ಇದರಿಂದ ವ್ಯಕ್ತವಾಗುತ್ತದೆ.

★ 1943ರಿಂದ 50ರ ವರೆಗಿನ ಏಳು ವರುಷಗಳಲ್ಲಿ ಕೆ. ಕೆ. ನಾಯರ್ ಅಂಡ್ ಕಂಪೆನಿಯವರು, ಸಂಸ್ಥೆಯ ಲೆಖ್ಖ ಪತ್ರಗಳ ಆಡಿಟ್ ಮಾಡುತ್ತಿದ್ದರು. ಇಷ್ಟು ವರುಷಗಳಲ್ಲೂ ನಷ್ಟದ ಸೊಲ್ಲೆತ್ತಲಾಗಲಿಲ್ಲ. ಆದರೆ, 1950—51ರಿಂದ ಆರಂಭವಾಗಿ 1954—55ರಲ್ಲಿ, ಒಮ್ಮೆಲೇ ರೂ. 1,51,463-0-3ರಷ್ಟು ನಷ್ಟವನ್ನು, ಈ ಸಿವಿಲ್ ಸ್ಟೇಷನ್ ಕೋ-ಒಪರೇಟಿವ್ ಸಂಸ್ಥೆಯ ಲೆಖ್ಖ ಪತ್ರಗಳಲ್ಲಿ ತೋರಿಸಲಾಯಿತು. ಇದನ್ನು ಯಾರಾದರೂ, ಹೇಗೆ ನಂಬಬಹುದು!"

ಆ ಮೇಲೆ ಸಬ್‌ರಜಿಸ್ಟ್ರಾರರು ಇವನ್ನೆಲ್ಲ ಹೊರಗೆಡಹಿ, ಸಂಸ್ಥೆಯು ಮುಚ್ಚಲ್ಪಟ್ಟು ಲೇಣೆ-ದೇಣೆಗಳು ನಡೆಯಬೇಕೆಂದರೂ, ಸರಕಾರ ಈ ಸಲಹೆಗೆ ಕಿವಿಯನ್ನೇಕೆ ಕೊಡಲಿಲ್ಲ? ಈ ಸಂಸ್ಥೆಯು ಇನ್ನೂ ಕಾನೂನು ಪ್ರಕಾರ ಮುಚ್ಚಲ್ಪಟ್ಟಿಲ್ಲವೇಕೆ?

"ಲಿಕ್ವಿಡೇಷನ್" ನಡೆಸಬೇಕೆಂದು ಹೇಳಿ ಮೂರು ವರುಷವಾದರೂ ಅದು, ಯಾಕೆ ನಡೆಸಲ್ಪಟ್ಟಿಲ್ಲ? ಸರಕಾರ ಅಧಿಕಾರಿಯೊಬ್ಬರಾದ ಡೆಪ್ಯೂಟಿ ರಿಜಿಸ್ಟ್ರಾರರೇ ಈ ಸಲಹೆಯನ್ನು ಅಂಕಿ-ಅಂಶಗಳ ಸಮೇತ ಕೊಟ್ಟದ್ದರೂ, ಸರಕಾರ ಹಿಂದೆ ಮುಂದೆ ಏಕೆ ನೋಡುತ್ತಿದೆ? ಎಂಬುದು ಒಂದು ಜಟಿಲ ಪ್ರಶ್ನೆಯಾಗಿದೆ.

ಕೇಂದ್ರವು ಸಹಕಾರಿ ಚಳವಳಿಯನ್ನು ಬೆಳೆಸಬೇಕೆಂದು ಆಣತಿ ಇತ್ತಿದೆ. ಆದರೆ ಇತ್ತ ರಾಜ್ಯದಲ್ಲಿ ಇದ್ದ ಸಹಕಾರಿ ಸಂಸ್ಥೆಯಲ್ಲಿ ಸ್ವಾರ್ಥ, ಮೋಸ, ಹಣದ ದುರುಪಯೋಗ, ಲೆಕ್ಕ ಪತ್ರಗಳ ವಂಚನೆಯೇ ನಡೆಯುತ್ತಿದೆ. ಇದು ಬೆಳಕಿಗೆ ಬಂದರೂ ಸರಕಾರ ಕ್ರಮವೆಸಗಲು ಸಿದ್ಧವಿಲ್ಲ, ಕಾರಣವಿಷ್ಟೆ! ಸರಕಾರವೂ ಈ ಭ್ರಷ್ಟಾಚಾರದಲ್ಲಿ ಅಂತಿಮವಾಗಿ ಭಾಗಿಯಾಗಲೇ ಬೇಕು. ಇಲ್ಲವಾದಲ್ಲಿ, 'ಸಂಸ್ಥೆಯ

ಸಬ್‌ರಿಜಿಸ್ಟ್ರಾರರ ವರದಿ ಬಚ್ಚಿಡಲಾಗಿದೆಯೋ?

ಡೈರೆಕ್ಟರುಗಳೇ ಈ ಭ್ರಷ್ಟಾಚಾರಕ್ಕೆ ನೇರವಾಗಿ ಜವಾಬುದಾರರು' ಎಂದು ಡೆಪ್ಯೂಟಿ ರಿಜಿಸ್ಟ್ರಾರರು ಹೇಳಿದ್ದು, ಇವರ ರಕ್ಷಣೆಗೆ ಸರಕಾರ ಟೊಂಕಕಟ್ಟಿರಬೇಕು.

ಮೈಸೂರು ಸರಕಾರದ ಸ್ವಜನ ಪಕ್ಷಪಾತ, ಭ್ರಷ್ಟ ಆಡಳಿತೆ ಹಾಗೂ ಸಾರ್ವಜನಿಕ ಹಣದ ದುರುಪಯೋಗ, ಕನ್ನಡಿಗರು ಮುಖ ತಗ್ಗಿಸುವಷ್ಟು ಬೆಳೆದಿದೆ. ವಿಧಾನಸೌಧ, ಮಟ್ಟದೊಡ್ಡಿ ಮೊದಲಾದ ಕೋಟಿಗಟ್ಟಲೆ ರೂಪಾಯಿಯನ್ನು ಮುಳುಗಿಸಿರುವ ಹಲವಾರು 'ಮುಂಧ್ರಾ ಪ್ರಕರಣಗಳು' ಮೈಸೂರಿನ ಕಾಂಗ್ರೆಸ್ ಆಡಳಿತೆಯ ವೈಶಿಷ್ಟ್ಯಗಳಾಗಿಯೇ ಉಳಿದಿವೆಯೆಂಬುದು ನಿಜ. ಈ ಬಗ್ಗೆ ವಿಚಾರಣೆಗಳಾದರೂ 'ಮುಂಧ್ರಾ ವಿಚಾರಣೆ'ಯಂತೆ ಅದನ್ನು ಜನತೆಯ ತೀಕ್ಷ್ಣ ವಿಮರ್ಶೆಗೆ ಗುರಿಪಡಿಸಿ, ತನ್ನ ಆಡಳಿತೆಯ ಕೊಳಕು ವಸ್ತ್ರವನ್ನು ಸಾರ್ವಜನಿಕ ಅಭಿಪ್ರಾಯದ ಮಡುವಿನಲ್ಲಿ ತೊಳೆಯುವ ಗೋಜಿಗೆ ಇಲ್ಲಿನ ಕಾಂಗ್ರೆಸ್ಸಿಗರು ಹೋಗಲಿಲ್ಲ. ಇಂದು ಮೈಸೂರಿನ ರಾಜಕೀಯ ಹಾಗೂ ಆಡಳಿತ ಕೊಳೆತು ನಾರುತ್ತಿದೆ. ಇದರ ವ್ಯಾಪಕತೆ, ಸರಕಾರದ ಎಲ್ಲಾ ಖಾತೆಯನ್ನು ಹೊಕ್ಕಿದೆ. ಇದರಿಂದ ಯಾವಾಗ ಮುಕ್ತಿ ದೊರೆಯುವುದೆಂದು ಜನತೆ ಕಾತುರದಿಂದ ಕಾಯುವ ಕಾಲಬಂದಿದೆ. ಆದರೂ ಆಡಳಿತೆಯ ಶುದ್ಧೀಕರಣ ಹಾಗೂ ಪ್ರಜಾಪ್ರಭುತ್ವ ರೀತಿಯಲ್ಲಿ ಆಡಳಿತೆಯನ್ನು ಸರಿಗೊಳಿಸುವ ವಿಚಾರಣಾ ಸಮಿತಿಯ ಸಲಹೆಗಳನ್ನೂ, ಕಾಂಗ್ರೆಸ್ ಅಧಿವೇಶನಗಳ ನಿರ್ಣಯಗಳನ್ನೂ ಜನತೆಯ ಮೇಲೆ ಭಾರಿ ತೆರಿಗೆಯ ಭಾರವನ್ನು ಮೀರಿ ಹೊರಿಸಲ್ಪಡುತ್ತಿವೆ. ಆದರೆ ಕಾಂಗ್ರೆಸ್ ಆಡಳಿತೆ ಇವೆಲ್ಲಕ್ಕೂ ಬದ್ಧವಾಗಿಲ್ಲವೆಂದೂ ಕಾಣುತ್ತಿದೆ.

ಇನ್ನಾದರೂ ನಮ್ಮ ಜನತೆ ಮತಗಳನ್ನಿತ್ತು ಸುಮ್ಮನೆ ಕೂರುವಷ್ಟು ಮೂರ್ಖರಲ್ಲ, ಕಣ್ಣಮುಂದೆ ನಡೆಯುತ್ತಿರುವ ಈ ಕಲುಷಿತ ಪ್ರಕರಣಗಳನ್ನು ಕಂಡೂ ಕಾಣದಂತಿರಲು ಅಂಧರಲ್ಲ, ಕಂಡ ಮೇಲೆ ಯೋಗ್ಯ ಪ್ರತಿಭಟನೆ ಮಾಡದಷ್ಟು ನಿಶ್ಶಕ್ತರಲ್ಲ ಎಂಬುದನ್ನು ನಮ್ಮ ನಿಜಲಿಂಗಪ್ಪ

(೧೦ನೇ ಪುಟ ನೋಡಿ)

ಅಮೆರಿಕದ ಶಾಲೆಗಳೆಂಬ ಕಾಡಿನಲ್ಲಿ....

ನ್ಯೂಯೋರ್ಕಿನ ಶಾಲೆಗಳಲ್ಲಿ ಖೂನಿ—ಹುಡುಗಿಯರ ಮೇಲೆ ಬಲತ್ಕಾರ, ಮೊದಲಾದ ಪಾತಕಗಳನ್ನು 13ರಿಂದ 19ರ ಒಳಗಿನ ಹುಡುಗರು ಮತ್ತು ಇದಕ್ಕೂ ಸಣ್ಣ ವಯಸ್ಸಿನ ಮಕ್ಕಳು ನಡೆಸುತ್ತಾ ಬಂದಿರುತ್ತಾರೆ. ಶಾಲಾ ವಿದ್ಯಾರ್ಥಿಗಳಲ್ಲಿ ಇದೊಂದು ದಿನನಿತ್ಯದ ಅಭ್ಯಾಸವಾಗಿದೆ.

ಇದೇ ಫೆಬ್ರವರಿ, 8ರಂದು, ಇಂಥಾ ನಿತ್ಯಪಾತಕಿಗಳಾದ 544 ಮಂದಿ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರಹಾಕಲಾಗಿದೆ. ನ್ಯೂಯೋರ್ಕ್ ಶಾಲೆಯ 900 ಮುಖ್ಯೋಪಾಧ್ಯಾಯರು, ಶಾಲಾ ಸುಪರಿಡೆಂಟರ ಆಜ್ಞೆಯ ಮೇರೆಗೆ ಈ ಕ್ರಮವನ್ನು ಕೈಗೊಂಡಿದ್ದಾರೆ.

ನ್ಯೂಯೋರ್ಕ್ ಶಾಲೆಯ ಒಂದು ಮಿಲಿಯ ವಿದ್ಯಾರ್ಥಿಗಳಲ್ಲಿ ಹುಟ್ಟಿಕೊಂಡಿರುವ ಈ ಶಿಶು—ಅಪರಾಧಿಗಳ ಪೈಕಿ ಈಗ ಶಾಲೆಯಿಂದ ದಸ್ತಗಿರಿ ಮಾಡಲ್ಪಟ್ಟವರು ಶೇಕಡಾ ಒಂದಕ್ಕಿಂತಲೂ ಕಮ್ಮಿ ಎಂದು ಶಾಲಾ ಸುಪರಿಂಟೆಂಡೆಂಟ್ ಮಿ। ವಿಲಿಯಮ್ ಜೇನ್ಸನ್ ತಿಳಿಸಿದ್ದಾರೆ.

ಈ ಕ್ರಮ ತೆಗೆದುಗೊಳ್ಳುವ ಮೊದಲು ನ್ಯೂಯೋರ್ಕ್ ಶಾಲೆಗಳಲ್ಲಿ ಕೊಲೆ ಹಾಗೂ ಹಿಂಸೆಗಳ ತುಫಾನೇ ಎದ್ದಿತ್ತು ಎಂದೂ, ಅಲ್ಲಿನ ಮೇಯರ್ ಹಾಗೂ ಮಿ॥ ಜೇನ್ಸನ್ನರು ಈ ಬಗ್ಗೆ ಸಮಾಲೋಚಿಸಿ, ಇಂಥಾ ಅಪರಾಧಿಗಳನ್ನು ಇನ್ನೂ ಶಾಲೆಯಲ್ಲಿ ಇಟ್ಟುಕೊಳ್ಳದೆ, ಕೂಡಲೆ ಹೊರಹಾಕಲು ತೀರ್ಮಾನಿಸಿದರೆಂದೂ ವರದಿಯಾಗಿದೆ.

ಈ ಆಜ್ಞೆಯ ಹಿನ್ನೆಲೆಯಲ್ಲಿ, ಎರಡು ಹುಡುಗಿಯರ ಮೇಲೆ ಬಲಾತ್ಕಾರ ನಡೆದ ಹಾಗೂ ಇನ್ನಿಬ್ಬರನ್ನು ಜೀವಂತ ಕೊಯ್ದ ಘಟನೆಗಳನ್ನು ತಿಳಿಸಲಾಗಿದೆ. ಒಂದು ಶಾಲೆಯಲ್ಲಿ ಇಂಥಾ ಉಗ್ರ ಪಾತಕಗಳು ನಡೆದುದರ ವಿಚಾರಣೆಗಾಗಿ ಮುಖ್ಯೋಪಾಧ್ಯಾಯರನ್ನು ಕರೆಯಲು, ಅವರು ಹೆದರಿ ಆತ್ಮಹತ್ಯೆ ಮಾಡಿಕೊಂಡರೆಂದು ಹೇಳಲಾಗಿದೆ. ಇಂಥಾ ಕೆಲವು ಶಾಲೆಗಳಲ್ಲಿ ಪೋಲೀಸು ಬಂದೋಬಸ್ತು ಕೂಡಾ ಮಾಡಲಾಗಿದೆ ಎಂದು ಮುಂಬಾಯಿಯ 'ಫ್ರಿ ಪ್ರೆಸ್ ಜರ್ನಲ್' ವರದಿ ಮಾಡಿದೆ.

ಅಮೆರಿಕಾದ ಶಿಕ್ಷಣ ಕ್ರಮ, ಸಾಹಿತ್ಯ ಸಂಸ್ಕೃತಿಯ ಇದು ಫಲವಾಗಿರಬಹುದೇ? ಅಥವಾ 'ಅಮೆರಿಕದ ಪ್ರಜಾಪ್ರಭುತ್ವ'ದ ವಿಶಿಷ್ಟ ಗುಣಗಳಲ್ಲಿ, ಶಾಲಾ ಮಕ್ಕಳು ಕೊಲೆಗಡುಕರೂ, ಸ್ತ್ರೀಯ ಮೇಲೆ ಬಲಾತ್ಕಾರ ಮಾಡುವವರು ಆಗುವುದೊಂದೂ ನೈಜವಾದ ಬೆಳವಣಿಗೆಯಾಗಿರಬಹುದೇ?

ಅಂತೂ, ಇವಕ್ಕೆಲ್ಲಾ ಅಲ್ಲಿನ ಸಮಾಜ ರಚನೆ, ಮತ್ತು ಹೆಚ್ಚಾಗಿ ಕಾಮ-ಕೊಲೆ ದರೋಡೆಯಂತಹ ಪ್ರಸಂಗಗಳನ್ನು ಬಿಂಬಿಸುವ ಸಾಹಿತ್ಯ ಹಾಗೂ ಚಲಚ್ಚಿತ್ರಗಳೇ ಸಾಕ್ಷಿಯೆಂದು ತಿಳಿಯಲಾಗಿದೆ.

ಇಂಥಾ ಪುಸ್ತಕಗಳಾಗಲೀ ಚಲಚ್ಚಿತ್ರಗಳಾಗಲೀ ಭಾರತಕ್ಕೆ ಬರದಂತೆ, ನಮ್ಮ ಸರಕಾರ ಹೆಚ್ಚಿನ ಜಾಗ್ರತೆ ವಹಿಸಬೇಕಾದುದು ಅದರ ಒಂದು ಮುಖ್ಯ ಕರ್ತವ್ಯವಾಗಿದೆ.

ಫ್ರೆಂಚ್ ಸಾಮ್ರಾಜ್ಯವಾದಿಗಳ ವಿಚಿತ್ರ ದಬ್ಬಾಳಿಕೆ

ಅಲ್ಜೀರಿಯದ ಸ್ವಾತಂತ್ರ್ಯ ಯೋಧರನ್ನು ದಬ್ಬಾಳಿಕೆಯಿಂದ ತುಳಿಯುತ್ತಿರುವ ಫ್ರೆಂಚ್ ಸಾಮ್ರಾಜ್ಯವಾದಿಗಳ ಕ್ರೂರ ಕೃತ್ಯಗಳು ವಿಪರೀತಕ್ಕಿಟ್ಟುಕೊಂಡಿದೆ. ಫೆಬ್ರವರಿ 8ರಂದು ಫ್ರೆಂಚ್ ಸಾಮ್ರಾಜ್ಯವಾದಿಗಳ ವಿಮಾನ ಪಡೆಯೊಂದು ಟ್ಯುನೀಷಿಯ – ಅಲ್ಜೀರಿಯ ಗಡಿ ಪ್ರದೇಶದಲ್ಲಿ ಸ್ವಾತಂತ್ರ್ಯ ಯೋಧರ ಬೇಟೆ ನಡೆಸಲು ಉಪಕ್ರಮಿಸಿ ಟ್ಯುನೀಷಿಯದ ಹಳ್ಳಿಯೊಂದರ ಮೇಲೆ ಬಾಂಬುಗಳ ಮಳೆಗರೆದು ಇಡೀ ಹಳ್ಳಿಯನ್ನೇ ನಿರ್ಮೂಲಗೊಳಿಸಿದೆ. ಸುಮಾರು ನೂರು ಮಂದಿ ಮರಣ ಹೊಂದಿದ್ದಾರೆ.

ಟ್ಯುನೀಷಿಯ ಸರಕಾರ ಈಗಾಗಲೇ ಫ್ರೆಂಚರ ಈ ದುಷ್ಕೃತ್ಯ ಕುರಿತು ವಿಶ್ವಸಂಸ್ಥೆಗೆ ದೂರು ಕೊಟ್ಟಿದೆ. ಫ್ರೆಂಚ್ ರಾಯಭಾರಿ ಕಛೇರಿಗಳನ್ನು ಮುಚ್ಚಬೇಕೆಂದೂ ಟ್ಯುನೀಷಿಯ ಸರಕಾರ ತಿಳಿಸಿದೆ. ಫ್ರೆಂಚ್ ಯುದ್ಧ ನೌಕೆಗಳಿಗೆ ಪ್ರತಿಬಂಧಕಹಾಕಿದೆ. ಫ್ರೆಂಚ್ ಸಾಮ್ರಾಜ್ಯವಾದಿಗಳ ಈ ಕ್ರೂರತೆಯ ವಿರುದ್ಧವಾಗಿ ಜನತೆ ಪ್ರದರ್ಶನಗಳನ್ನು ನಡೆಸಿದೆ.

ವಿಶ್ವಸಂಸ್ಥೆಯು ಈ ಬಗ್ಗೆ ಚರ್ಚೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದು ಸಂಶಯಾತ್ಮಕವಾಗಿದೆ. ಭದ್ರತಾ ಸಮಿತಿಯಲ್ಲಿ ಫ್ರಾನ್ಸ್ ಶಾಶ್ವತ ಸದಸ್ಯ ರಾಷ್ಟ್ರವಾಗಿರುವುದರಿಂದ ವಿಟೋ ಮೂಲಕ ಚರ್ಚೆಯನ್ನು ತಡೆಯಲು ಸಾಕು. ಫ್ರೆಂಚರ ಈ ದುಷ್ಕೃತ್ಯವನ್ನು ವಿಶ್ವದಾದ್ಯಂತ ಎಲ್ಲ ಪ್ರಜಾಪ್ರಭುತ್ವವಾದಿಗಳೂ ಖಂಡಿಸುವುದರಲ್ಲಿ ಸಂಶಯವಿಲ್ಲ.

ಅಲ್ಜೀರಿಯದ ಸ್ವಾತಂತ್ರ್ಯದ ಪ್ರಶ್ನೆ, ಅಲ್ಲಿನ ಜನತೆಯ ಮೇಲೆ ನಡೆಯುತ್ತಿರುವ ಕ್ರೂರ ದಬ್ಬಾಳಿಕೆಯ ಪ್ರಶ್ನೆ ವಿಶ್ವಸಂಸ್ಥೆಯ ಮುಂದೆ ಅನೇಕ ಬಾರಿ ಬಂದಿದ್ದರೂ ಸಹ ಏನೂ ಆಗಿಲ್ಲ. ಸ್ವಾತಂತ್ರ್ಯ ಯೋಧರ ಕಗ್ಗೊಲೆ ನಡೆಯುತ್ತಲೇ ಇದೆ. ಫ್ರೆಂಚ್ ಸಾಮ್ರಾಜ್ಯವಾದಿಗಳ ಈ ಕ್ರೂರ ದಬ್ಬಾಳಿಕೆ ಅಳಿಯಲಿ, ಅಲ್ಜೀರಿಯದ ಜನತೆಗೆ ಸ್ವಾತಂತ್ರ್ಯ ದೊರಕಲಿ ಎಂದು ವಿಶ್ವದ ಎಲ್ಲ ಜನತೆಯೂ ಒತ್ತಾಯಪಡಿಸಬೇಕಾಗಿದೆ. ವಸಾಹತುಶಾಹಿ ಫ್ರೆಂಚರ ವಿರುದ್ಧ ತಮ್ಮ ಬಂಧವಿಮೋಚನಾ ಹೋರಾಟದಲ್ಲಿ ಅಲ್ಜೀರಿಯದ ಜನತೆಗೆ ವಿಜಯ ಲಭಿಸುವುದರಲ್ಲಿ ಸಂಶಯವಿಲ್ಲ. ಟ್ಯೂನಿಸ್‌ನ ಹಳ್ಳಿಯೊಂದರ ಮೇಲೆ ಬಾಂಬು ಸುರಿದು ನಿಶ್ಶಸ್ತ್ರರಾದ ಸಾಮಾನ್ಯ ಜನತೆಯ ಕೊಲೆ ನಡೆಸಿದ ಫ್ರೆಂಚ್ ಸಾಮ್ರಾಜ್ಯವಾದಿಗಳ ಈ ಕ್ರೂರಕೃತ್ಯವನ್ನು ಆಕ್ರಮಣಕಾರಿ ಕೃತ್ಯವೆಂದು ಸಾರಿ ವಿಶ್ವಸಂಸ್ಥೆ ಕ್ರಮತೆಗೆದುಕೊಳ್ಳಲಿ.

ಸಿಲೋನ್ - ರಷ್ಯಾ ವಾಣಿಜ್ಯ ಒಪ್ಪಂದ

ಫೆಬ್ರವರಿ 8ರಂದು ಸಿಲೋನ್ ಮತ್ತು ಸೋವಿಯತ್ ಯೂನಿಯನ್‌ಗಳು ಪ್ರಥಮ ಬಾರಿಗೆ ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡಿವೆ. ಈ ಒಪ್ಪಂದದ ಪ್ರಕಾರ ಸಿಲೋನ್ ಟೀ, ರಬ್ಬರ್ ಮತ್ತು ತೆಂಗಿನ ಪದಾರ್ಥಗಳನ್ನು ಸೋವಿಯತ್ ಯೂನಿಯನ್ನಿಗೆ ರಫ್ತು ಮಾಡುವುದು. ರಷ್ಯವು ಸಿಲೋನಿಗೆ ಪೆಟ್ರೋಲಿಯಂ, ಸಿಮೆಂಟ್, ಹತ್ತಿ ಬಟ್ಟೆಗಳು, ರಸಾಯನಿಕ ಪದಾರ್ಥಗಳು ಮತ್ತು ಯಂತ್ರಗಳನ್ನು ರಫ್ತು ಮಾಡುವುದು. ಎರಡೂ ರಾಷ್ಟ್ರಗಳು ಸುಮಾರು 3,00,000 ಪೌಂಡುಗಳವರೆಗೆ ಸಾಲ ವಿನಿಮಯ ಮಾಡಿಕೊಳ್ಳುವುದು.

ಈ ಒಪ್ಪಂದವು ಒಂದು ವರ್ಷದ ಕಾಲ ಜಾರಿಯಲ್ಲಿರುವುದು. ಸೋವಿಯತ್ ಆರ್ಥಿಕ ನಿಯೋಗವೊಂದು ಸಿಲೋನಿನೊಂದಿಗೆ ಆರ್ಥಿಕ ಸಹಕಾರ ಒಪ್ಪಂದವನ್ನು ಮಾಡಿಕೊಳ್ಳಲು ಚರ್ಚೆ ನಡೆಸಲು ಸಿಲೋನಿಗೆ ಆಗಮಿಸಿದೆ.

ಸಿಲೋನ್-ರಷ್ಯಗಳ ನಡುವೆ ಆಗಿರುವ ಈ ವಾಣಿಜ್ಯ ಒಪ್ಪಂದವು ಶಾಂತಿಯುತ ಸಹಬಾಳ್ವೆಯ ನೀತಿಯಲ್ಲಿ ಮತ್ತೊಂದು ಹೆಜ್ಜೆಯಾಗಿದೆ. ಎರಡು ರಾಷ್ಟ್ರಗಳ ನಡುವೆ ಪರಸ್ಪರ ಸ್ನೇಹ-ಸಂಬಂಧಗಳನ್ನು ಹೆಚ್ಚಿಸಲು ಸಹಾಯಕವಾಗಿದೆ.

ಶೃಂಗ ಸಮ್ಮೇಳನಕ್ಕೆ ಪರಿಸ್ಥಿತಿ ಅನುಕೂಲವಿದೆ

'ವಿಶ್ವದಲ್ಲಿ ಚಿರಶಾಂತಿ ನೆಲೆಸುವಂತೆ ಮಾಡಲು ಹಿಂದೆ ಎಂದಿಗಿಂತಲೂ ಇಂದು ಪರಿಸ್ಥಿತಿಯು ಅನುಕೂಲವಾಗಿದೆ' ಎಂದು ಚೀಣದ ಪ್ರಧಾನಿ ಚೌ-ಎನ್-ಲಾಯ್ ರವರು ಚೀಣದ ಪಾರ್ಲಿಮೆಂಟನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದ್ದಾರೆ.

ಪೂರ್ವ-ಪಶ್ಚಿಮ ರಾಷ್ಟ್ರಗಳ ನಡುವೆ ಶೃಂಗ ಸಮ್ಮೇಳನಕ್ಕಾಗಿ ರಷ್ಯ ಮಂಡಿಸಿರುವ ಸಲಹೆಗಳಿಗೆ ಬೆಂಬಲವನ್ನಿತ್ತು ವಿಶ್ವದಲ್ಲಿ ಶಾಂತಿ ಶಕ್ತಿಗಳು ಇಂದು ಪ್ರಬಲವಾಗಿವೆ. ಶಾಂತಿ ಶಕ್ತಿಗಳು ಎಲ್ಲಿಯವರೆಗೆ ಪ್ರಬಲವಾಗಿರುವುವೋ ಅಲ್ಲಿಯವರೆಗೆ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ಶಾಂತಿಗೆ ಅನುಕೂಲವಾಗುವ ಹಾಗೆ ರೂಢಿಸಿ, ಸಾಮ್ರಾಜ್ಯವಾದಿಗಳು ಆಕ್ರಮಣಕಾರೀ ಯೋಜನೆಯನ್ನು ಕೈಬಿಟ್ಟು ಶಾಂತಿಯುತ ಸಹಬಾಳ್ವೆಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ ಎಂದು ತಿಳಿಸಿದ್ದಾರೆ.

ಅಮೇರಿಕವು ತನ್ನ ಶಸ್ತ್ರಾಸ್ತ್ರಗಳನ್ನು ವಿಸ್ತರಿಸುವ ಹಾಗೂ ಆಕ್ರಮಣಕಾರೀ ಯೋಜನೆಯನ್ನು ಕೈಬಿಡಬೇಕೆಂದು ತಿಳಿಸಿ, ಅಮೆರಿಕವು ಶಾಂತಿಯುತ ಸಂಧಾನಕ್ಕೆ ಇಲ್ಲ ಸಲ್ಲದ ಕ್ಷುಲ್ಲಕ ಅಡ್ಡಿಗಳನ್ನು ತಂದೊಡ್ಡುತ್ತಿದೆ. ಆದರೆ ಇದು ಹೆಚ್ಚು ಕಾಲ ಸಾಗದು ಎಂದು ತಿಳಿಸಿದ್ದಾರೆ.

ಚೌ-ಎನ್-ಲಾಯ್‌ರವರು ತಮ್ಮ ದೀರ್ಘ ಭಾಷಣದಲ್ಲಿ ಅಂತರ್ರಾಷ್ಟ್ರೀಯ ಕುರಿತು ವಿಶೇಷವಾಗಿ ಮಾತನಾಡಿದ್ದಾರೆ.

ರಾಷ್ಟ್ರೀಯ - ಅಂತರ ರಾಷ್ಟ್ರೀಯ ★ ಸಿ. ಆರ್. ಕೆ.

ಕಾಶ್ಮೀರ ಪರಿಸ್ಥಿತಿ

ಕಾಶ್ಮೀರದ ಮಾಜಿ ಪ್ರಧಾನಿ ಶೇಕ್ ಮಹಮ್ಮದ್ ಅಬ್ದುಲ್ಲಾರವರ ಬಿಡುಗಡೆಯಾದ ನಂತರ ಕಾಶ್ಮೀರದ ಪರಿಸ್ಥಿತಿಯನ್ನು ಕುರಿತಾಗಿ ಬೇಕಾದಷ್ಟು ಸುದ್ದಿಗಳು ಬರುತ್ತಿವೆ. ಶೇಕ್ ಅಬ್ದುಲ್ಲಾರವರು ತಮ್ಮ ಹಳೆಯ ನಿಲುವನ್ನು ಕೈಬಿಟ್ಟು, ಕಾಶ್ಮೀರದ ಹೊಸ ಪರಿಸ್ಥಿತಿಗನುಗುಣವಾಗಿ ಮುಂದುವರಿಯುವುದರ ಬದಲು, 'ಪ್ಲೆಬಿಸೈಟ್ ವಾದ'ವನ್ನೇ ಮುಂದೂಡುತ್ತಿದ್ದಾರೆ. ಈವರೆಗೆ ಸಾರ್ವಜನಿಕವಾಗಿ, ರಾಜಕೀಯವಾಗಿ ಬಹಿರಂಗ ಸಭೆಗಳನ್ನು ನಡೆಸದಿದ್ದರೂ ಕೂಡ, ಅವರು ಮಸೀದಿಗಳಲ್ಲಿ ಭಾಷಣಗಳನ್ನು ಮಾಡುತ್ತಿದ್ದಾರೆ. ಶೇಕ್ ಅಬ್ದುಲ್ಲಾರವರಿಗೆ ಹಿಂದೆ ಇದ್ದ ಜನಬೆಂಬಲ ಇಂದಿಲ್ಲವೆಂದು ಸ್ಪಷ್ಟವಾಗಿದೆ. ಕಾಶ್ಮೀರದ ಜನತೆ ತಾವು ಭಾರತದ ಒಂದು ಅಂಗ ರಾಜ್ಯವೆಂದು ಒಪ್ಪಿದ್ದಾರೆ. ಕಾಶ್ಮೀರದ ನಾಯಕರುಗಳೂ ಸಹ ಇದನ್ನೆ ಒತ್ತಿ ಹೇಳುತ್ತ ಬಂದಿದ್ದಾರೆ.

ಡೆಮೊಕ್ರಾಟಿಕ್ ನ್ಯಾಷನಲ್ ಕಾನ್ಫರೆನ್ಸಿನ ನಾಯಕರಾದ ಶ್ರೀ ಜಿ. ಎಂ. ಸಾದಿಕ್‌ರವರು ಇತ್ತೀಚೆಗೆ ದೆಹಲಿಗೆ ಆಗಮಿಸಿದ್ದಾಗ ಕಾಶ್ಮೀರದಲ್ಲಿ ಶೇಕ್ ಅಬ್ದುಲ್ಲರವರ ಬಿಡುಗಡೆಯ ನಂತರ ಇರುವ ಪರಿಸ್ಥಿತಿಯನ್ನು ಕುರಿತು ವಿವರಿಸಿದ್ದಾರೆ. ಶೇಕ್ ಅಬ್ದುಲ್ಲಾರ ಚಟುವಟಿಕೆಗಳನ್ನು ತಾಳ್ಮೆಯಿಂದ ಎದುರುನೋಡಬೇಕೆಂದೂ, ಅವರ ಬಿಡುಗಡೆಯ ನಂತರದಲ್ಲಿ ಜನತೆ ಸರಕಾರದ ವಿರುದ್ಧ ದಂಗೆ ಏಳದಿದ್ದುದೇ ವಾಸ್ತವಿಕ ಪರಿಸ್ಥಿತಿಯನ್ನು ತಿಳಿಸುತ್ತದೆ ಎಂದು ಹೇಳಿದ್ದಾರೆ. ಅಲ್ಲದೆ ಶೇಕ್ ಅಬ್ದುಲ್ಲಾರವರು ನಿಸ್ಸಹಾಯಕರಾಗಿದ್ದಾರೆ, ಅವರ ಕೈಯಲ್ಲೇನೂ ಆಗದು ಎಂದು ಭಾವಿಸುವುದು ತಪ್ಪೆಂದೂ ಎಚ್ಚರಿಸಿದ್ದಾರೆ.

ಕಾಶ್ಮೀರವು ಭಾರತದೊಂದಿಗೆ ಸಂಪೂರ್ಣವಾಗಿ ಸೇರ್ಪಡೆಯಾಗಬೇಕೆಂದೂ, ಆಡಳಿತದಲ್ಲೂ, ರಾಜಕೀಯವಾಗಿಯೂ ಮತ್ತು ಎಲ್ಲ ರೀತಿಯಲ್ಲಿ ಕಾಶ್ಮೀರವೂ ಸಹ ಭಾರತದ ಇತರ ರಾಜ್ಯಗಳಂತೆ ಸಮಾನ ಸ್ಥಾನ ಹೊಂದಬೇಕೆಂದೂ ತಿಳಿಸಿದ್ದಾರೆ. ನ್ಯಾಯಾಂಗ ಮತ್ತು ಎಲೆಕ್ಷನ್ ಕಮಿಷನರ್ ಇವರ ಆಡಳಿತ ವ್ಯಾಪ್ತಿಗೆ ಕಾಶ್ಮೀರವೂ ಸಹ ಒಳಪಡಬೇಕೆಂದು ತಿಳಿಸಿದ್ದಾರೆ.

ಕಾಶ್ಮೀರದ ಪ್ರಶ್ನೆಯನ್ನು ಕುರಿತು, ಚರ್ಚಿಸಲು ವಿಶ್ವಸಂಸ್ಥೆಯ ಪ್ರತಿನಿಧಿಯಾಗಿ ಭಾರತಕ್ಕೆ ಆಗಮಿಸಿರುವ ಡಾ|| ಗ್ರಹಾಂರವರು ಭಾರತದಿಂದ ಪಾಕೀಸ್ತಾನಕ್ಕೆ ಪಾಕೀಸ್ತಾನದಿಂದ ಭಾರತಕ್ಕೆ ಓಡಾಡುತ್ತಿದ್ದಾರೆ. ಇವರ ಸಂಧಾನದಿಂದ ಏನೂ ಆಗುವುದಿಲ್ಲವೆಂಬುದು ಸ್ಪಷ್ಟವಾಗಿದೆ.

ಭಾರತ ಸರ್ಕಾರದ ಆಮದು-ರಫ್ತು ನೀತಿ

ಭಾರತದ ಆರ್ಥಿಕ ತೊಂದರೆಗಳು ನಿವಾರಣೆಯಾಗಲು ದೀರ್ಘ ಕಾಲಾವಧಿಯ ಯೋಜನೆ ಅಗತ್ಯ. ವಿದೇಶೀ ವಿನಿಮಯವನ್ನು ಕೈಗಾರಿಕೆಗಳಿಗೆ ಒದಗಿಸಿಕೊಡಲು ಸರಕಾರವು ತಯಾರಿಸುವುದೆಂದು ಭಾವಿಸುವುದು ತಪ್ಪು. ಭಾರತ ಸರಕಾರದ ಆಮದು ರಫ್ತು ನೀತಿಯಲ್ಲಿ ಯಾವ ಬದಲಾವಣೆಯೂ ಇಲ್ಲ, ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಮೊರಾರ್ಜಿ ದೇಸಾಯಿಯವರು ರಫ್ತು ಸಲಹಾ ಸಮಿತಿಯನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದ್ದಾರೆ.

ಭಾರತದ ಕೈಗಾರಿಕೆಗಳು ಸಾಕಷ್ಟು ವಿದೇಶೀ ವಿನಿಮಯವನ್ನು ಸಂಪಾದಿಸಲು ರಫ್ತು ಹೆಚ್ಚಿಸಬೇಕೆಂದೂ ಸೂಚಿಸಿದ್ದಾರೆ. 1956ರಲ್ಲಿ ಒಟ್ಟು ರಫ್ತು ಮಾಡಿದ ಪದಾರ್ಥಗಳ ಮೊಬಲಗು 619 ಕೋಟಿ ರೂ.ಗಳಾಗಿದ್ದುವೆಂದೂ ಆದರೆ 1957ರಲ್ಲಿ ಈ ಮೊಬಲಗು ಇನ್ನೂ ಕಡಿಮೆಯಾಗಿದೆಯೆಂದೂ ತಿಳಿಸಿದ್ದಾರೆ.

ಮುಂದೆ ಆರು ತಿಂಗಳುಗಳ ಸರಕಾರದ ಆಮದು ನೀತಿಯಲ್ಲಿ ಯಾವ ಬದಲಾವಣೆಯೂ ಇಲ್ಲ ಎಂದು ತಿಳಿಸಿರುವುದರಿಂದ ಪ್ರಸಕ್ತ ಪರಿಸ್ಥಿತಿಯು ಮುಂದುವರಿಯುವುದೆಂದಾಯಿತು. ಅಮೆರಿಕಾ ಮತ್ತಿತರ ದೇಶಗಳಿಂದ ಸಾಲ ದೊರಕಿದ್ದರೂ ಕೂಡ ಅದನ್ನು ಆಮದು ಪದಾರ್ಥಗಳಿಗಾಗಿ ಬಳಸಲು ಸಾಧ್ಯವಿಲ್ಲವೆಂದೂ ತಿಳಿಸಿದ್ದಾರೆ. ವಿದೇಶೀ ವಿನಿಮಯದ ಈ ಬಿಕ್ಕಟ್ಟಿನಿಂದಾಗಿ ದ್ವಿತೀಯ ಯೋಜನೆಯಲ್ಲಿ ಆರಂಭವಾಗಬೇಕಾಗಿದ್ದ ಹಲವು ಕೈಗಾರಿಕೆಗಳು ಆರಂಭವಾಗದೇ ಇದೆ. ಸರಕಾರವು ಈ ಹಿಂದೆ ಅನುಸರಿಸಿದ ದಿವಾಳಿಖೋರತನ ನೀತಿಯಿಂದಾಗಿ ಇಂದು ಈ ಪರಿಸ್ಥಿತಿ ಉಂಟಾಗಿದೆ. ಸರಕಾರವು ಅತ್ಯಗತ್ಯವಾಗಿರುವ ಪದಾರ್ಥಗಳಿಗೆ ಮಾತ್ರ ಆಮದು ರಹದಾರಿಯನ್ನಿತ್ತು, ಇತರೇ ಶ್ರೀಮಂತಿಕೆಯ ಸರಕುಗಳ ಆಮದನ್ನು ಸಂಪೂರ್ಣವಾಗಿ ಕಡಿಮೆ ಮಾಡಬೇಕಾದುದು ಅಗತ್ಯ. ದ್ವಿತೀಯ ಯೋಜನೆಯಲ್ಲಿ ನಮೂದಿಸಲಾಗಿರುವ ಯೋಜನೆಗಳನ್ನು ತೀವ್ರಗತಿಯಿಂದ ಕಾರ್ಯಗತಗೊಳಿಸುವುದಕ್ಕೆ ಅಗತ್ಯವಾದ ಮುಖ್ಯವಾದ ಯಂತ್ರಗಳನ್ನು ತರಿಸಿಕೊಳ್ಳಲು ಸರಕಾರವು ಕ್ರಮ ತೆಗೆದುಕೊಳ್ಳಬೇಕು. ಬಳಕೆಯ ಪದಾರ್ಥಗಳನ್ನು ತಯಾರಿಸಲು ಸಣ್ಣ ಕೈಗಾರಿಕೆಗಳಿಗೆ ಆದಷ್ಟು ಉತ್ತೇಜನ ನೀಡಬೇಕು. ಮನಬಂದಂತೆ ಬೇಕಾದವರಿಗೆ ರಹದಾರಿಗಳನ್ನಿತ್ತು ಇರತಕ್ಕ ವಿನಿಮಯವನ್ನು ಸಹ ಸರಕಾರವು ಪೋಲು ಮಾಡದಿರಲಿ.

ಮದರಾಸಿನಲ್ಲಿ ಮತ್ತೊಂದು ಹೊಸ ಪಕ್ಷ

ಮದರಾಸ್ ರಾಜ್ಯದಲ್ಲಿ ಹೊಸದೊಂದು ಪಕ್ಷ "ನಾಮ್ ತಮಿಳರ್" (ನಾವು ತಮಿಳರು) ಎಂಬುದು ಉದ್ಭವಿಸಿದೆ.

(೯ನೇ ಪುಟ ನೋಡಿ)

ಮುಂಧ್ರಾ ಪಂತರನ್ನು ಭೇಟಿಯಾಗಿದ್ದರೆ?

ಜೀವ ವಿಮಾ ಕಾರ್ಪೊರೇಷನ್ ಮತ್ತು ಮುಂಧ್ರಾರೊಳಗೆ ನಡೆದ ಮೋಸದ ಪ್ರಕರಣದ ವಿಚಾರಣೆಯಲ್ಲಿ "ಸಂಪೂರ್ಣ ಸತ್ಯವನ್ನು ಹೇಳಲಾಗಿಲ್ಲ"ವೆಂದು ಅಟೊರ್ನಿ ಜನರಲ್ ಸೆಟಲ್‌ವಾಡರಂದಿದ್ದರು. ವಿಚಾರಣಾ ಕಮಿಷನ್ ಚೇಯರ್‌ಮೆನ್ ಜಸ್ಟಿಸ್ ಚಾಗ್ಲಾರವರು ಇದನ್ನೇ ಮರು ನುಡಿದಿದ್ದಾರೆ. ಈ ಬಗ್ಗೆ ನವದೆಹಲಿಯ ಕೆಲವು ವರ್ತುಲಗಳಲ್ಲಿ ಚರ್ಚಿಸಲ್ಪಡುವ ಅಂಶಗಳು ಬೆಳಕನ್ನು ಚೆಲ್ಲಲು ಸಮರ್ಥವಾಗಿವೆ.

ಕಾರ್ಪೊರೇಷನಿನೊಡನೆ ವ್ಯವಹಾರ ನಡೆಸುವ ಮೊದಲು, ಯು. ಪಿ.ಯ ಮುಖ್ಯಮಂತ್ರಿ ಶ್ರೀ ಸಂಪೂರ್ಣಾನಂದ ಮತ್ತು ಕಾಂಗ್ರೆಸ್ ನಾಯಕ ಸಿ. ಬಿ. ಗುಪ್ತಾರನ್ನು ಮುಂಧ್ರಾ ಕಂಡಿದ್ದರು. ಕಾನ್ಪುರದಲ್ಲಿ ಹೆಚ್ಚಿನ ಬಂಡವಾಳ ಹಾಕಿರುವ ಮುಂಧ್ರಾ ಅವರನ್ನು ಸಂದರ್ಶಿಸಿರುವುದು ಸಹಜವೇ! ಈ ಯು. ಪಿ. ನಾಯಕರು ತಮ್ಮಿಂದೇನೂ ಸಾಧ್ಯವಿಲ್ಲವೆಂದೂ, ಕೇಂದ್ರದ ಒಳಾಡಳಿತ ಸಚಿವ ಡಾ| ಪಂತರನ್ನು ಕಾಣಬೇಕೆಂಬುದಾಗಿ ಸಲಹೆ ಇತ್ತಿರುವರೆಂದು ಹೇಳಲಾಗುತ್ತಿದೆ. ಈ ಮೇರೆಗೆ ಮುಂಧ್ರಾ ಪಂಡಿತ ಪಂತರನ್ನು ಕಂಡಿರುವುದಾಗಿಯೂ ಇವರೊಳಗೆ ಮಾತುಕತೆ ನಡೆದಿರುವುದಾಗಿಯೂ ತಿಳಿಯಲಾಗಿದೆ. ಹಾಗಾದರೆ ಈ ಮಾತುಕತೆಯಲ್ಲಿ ಏನೆಲ್ಲಾ ನಡೆಯಿತು? ಮುಂಧ್ರಾ ಪ್ರಕರಣದ ಸಾರ್ವಜನಿಕ ವಿಚಾರಣೆ ನಡೆಯುತ್ತಿರುವಾಗ ಇದಕ್ಕೆ ಸಂಬಂಧಪಟ್ಟ ಈ ಮಾತುಕತೆಯಲ್ಲಿ ಅಡಗಿರುವುದು ಅತ್ಯಮೂಲ್ಯವಾದ ಅಂಶವಲ್ಲವೇ? ಇದು ಸಾರ್ವಜನಿಕರಿಗೆ ತಿಳಿಯಬೇಕಾದ್ದು ನ್ಯಾಯವಲ್ಲವೇ?

ಮೇಲಿನ ಈ ಅಂಶಗಳು ರಾಜಧಾನಿಯಲ್ಲಿ ಈ ಬಗ್ಗೆ ಹೆಚ್ಚಿನ ಮಾಹಿತಿ ಇರುವ ವರ್ತುಲಗಳಿಂದ ತಿಳಿದುಬರುತ್ತಿದೆ. ಹಾಗಾದರೆ, ಮುಂಧ್ರಾ ವಿಚಾರಣೆಯಲ್ಲಿ ಸಂಪೂರ್ಣ ಸತ್ಯವನ್ನು ಹೊರಗೆಡಹಲಾಗಿಲ್ಲ ಎಂಬ ಸಂಶಯ ಇದರಿಂದ ದೃಢಪಡುತ್ತದಷ್ಟೆ.

ಪಂತರನ್ನು ಹೊರದೂಡಲು ದೇಭಾರ್ಜಿ-ಮೊರಾರ್ಜಿ ಯತ್ನ!

ಇತ್ತ ಟಿ.ಟಿ.ಕೆ.ಯವರ ರಾಜಿನಾಮೆ ಸುದ್ದಿಯೊಂದಿಗೆ, ಪಂಡಿತ ಪಂತರನ್ನು ಹಿಂದೂಡಿ, ಕೇಂದ್ರ ಮಂತ್ರಿಮಂಡಳದಲ್ಲಿ ತಮ್ಮ ಬೇಳೆ ಬೇಯಿಸಲು ಕಾಂಗ್ರೆಸ್ ಹೈಕಮಾಂಡಿನ ಒಂದು ಶಕ್ತಿಶಾಲಿ ಗುಂಪು ಪ್ರಯತ್ನಿಸುತ್ತಿದೆ ಎಂದು ತಿಳಿಯಲಾಗುತ್ತಿದೆ. ಈ ಗುಂಪಿನ ನಾಯಕರಾದ ಮೊರಾರ್ಜಿ ಮತ್ತು ಧೇಬಾರ್ಜಿಯವರು ಈಗಾಗಲೇ ಪಂಡಿತ ಪಂತರನ್ನು ತೆರೆಯ ಮರೆಗೆ ಸರಿಸುವ ಯತ್ನದಲ್ಲಿ ಜಯಶೀಲರಾಗಿದ್ದಾರೆಂದು ಹೇಳಲಾಗುತ್ತಿದೆ.

ಶ್ರೀ ಪಂತರು ಪ್ರಾಗ್ಜ್ಯೋತಿಷ್ ಪುರದಲ್ಲಿ ನಡೆದ ಕಾಂಗ್ರೆಸ್ ಬಹಿರ್ ಅಧಿವೇಶನದಲ್ಲಿ ಶಬ್ದವೆತ್ತದಿರುವುದೇ ಇದಕ್ಕೆ ನಿದರ್ಶನ. ಕಳೆದ ಮೂವತ್ತು ವರುಷಗಳಲ್ಲಿ ಪಂತರು ಮಾತಾಡದ ಅಧಿವೇಶನ ಇದೊಂದೇ ಎಂದು ಹೇಳಲಾಗಿದೆ.

ಯು. ಪಿ. ಕಾಂಗ್ರೆಸ್ಸಿನ ಯಾದವೀ ಕಲಹ

ಯು. ಪಿ. ಯಲ್ಲಿ ಒಳಗೊಳಗೆ ಕುದಿಯುತ್ತಿರುವ ಕಾಂಗ್ರೆಸ್‌ನೊಳಗಿನ ಯಾದವೀಕಲಹ ಭಗ್ಗೆಂದು ಮೇಲೆ ತೋರಿಕೊಂಡಾಗಲೆಲ್ಲ ಕೇಂದ್ರದಿಂದ ಪಂಡಿತ ಪಂತರನ್ನು ಇಲ್ಲಿಗೆ ರವಾನಿಸಲಾಗುತ್ತಿತ್ತು. ಆದರೆ ಈ ಬಾರಿಯ ಗುಂಪು ಯುದ್ಧವನ್ನು ನಿಲ್ಲಿಸಲು ಪಂಡಿತ ಪಂತರಿಗೂ ಸಾಧ್ಯವಾಗಿಲ್ಲವೆಂದು ಹೇಳಲಾಗಿದೆ.

ಯು. ಪಿ. ಕಾಂಗ್ರೆಸ್ ಸಮಿತಿಯ ಅಧಿಕಾರ ವರ್ಗದ ಚುನಾವಣೆಯಲ್ಲಿ ಪ್ರತಿಯೊಂದು ಸ್ಥಾನಕ್ಕೂ 7ಕ್ಕೂ ಮೀರಿ ಉಮೇದುವಾರರು ಸ್ಪರ್ಧಿಸಿರುವರು. ಇಷ್ಟರ ವರೆಗೆ ಎಂದೂ ಸ್ಪರ್ಧೆಗೆ ಒಳಗಾಗದ ಸಿ. ಬಿ. ಗುಪ್ತರಿಗೂ ಎದುರು ಸ್ಪರ್ಧೆ ನಡೆದಿದೆ. ಸಿ ಬಿ. ಗುಪ್ತಾ, ಸಂಪೂರ್ಣಾನಂದ್, ಮೋಹನ್‌ಲಾಲ್ ಗೌತಮ್ ಹಾಗೂ ಚರಣಸಿಂಗ್ ಮತ್ತಿತರ ಗುಂಪುಗಳೊಳಗಿನ ತೀವ್ರ ಘರ್ಷಣೆಯು ಬೆಳೆಯುತ್ತಾ ಇದೆ.

ಆಳುವ ಗುಂಪು ಹಾಗೂ ಇದರ ವಿರುದ್ಧವಾಗಿರುವ ಗುಂಪು ಈ ಎರಡಕ್ಕೂ ಚುನಾವಣೆ ನಡೆದರೆ ತಮಗೆ ವಿಜಯ ಸಿಗುವ ಸಂಶಯ ಮೂಡಿದ ಪರಿಣಾಮವಾಗಿ ಪರಸ್ಪರ ಒಪ್ಪಿ, ಚುನಾವಣೆಯಿಲ್ಲದೆ ಪಂಡಿತ್ ಪಂತ್ ಮತ್ತು ಸಂಪೂರ್ಣಾನಂದರಿಂದ ಕಾರ್ಯಕಾರಿ ಸಮಿತಿಯು ಆಯ್ಕೆಯಾಗಲಿ ಎಂಬ ಸಿ. ಬಿ. ಗುಪ್ತಾ ನಿರ್ಣಯ, ಪಾಸಾಯಿತು. ಆದರೆ ಇದೀಗ ಇದೇ ಗುಪ್ತಾ, "ಈ ನೇಮಕ ಬೇಡ" ಎಂದು ಹೈಕಮಾಂಡ್‌ಗೆ ತಿಳಿಸಿ, ಅವರ ಆಶೀರ್ವಾದವನ್ನು ಹೊಂದಿ ಅಂತರ್ಯುದ್ಧದಲ್ಲಿ ವಿಜಯಿಗಳಾಗಿದ್ದಾರೆ. ಮುಂದೆ ಹಮಿರ್‌ಪುರದಲ್ಲಿ ನಡೆಯುವ ಉಪಚುನಾವಣೆಯಲ್ಲಿ ಸ್ಪರ್ಧಿಸಿ, ನೇರವಾಗಿ ಕಾಂಗ್ರೆಸ್ ಸಂಸ್ಥೆಯ ಮಾತ್ರವಲ್ಲದೆ ರಾಜ್ಯದ ಆಡಳಿತ ಕ್ಷೇತ್ರದಲ್ಲಿ ಪ್ರವೇಶಿಸಲು ಸರ್ವ ಪ್ರಯತ್ನ ಮಾಡುತ್ತಿದ್ದಾರೆಂದೂ ತಿಳಿಯಲಾಗಿದೆ.

ಈ ಹಿನ್ನೆಲೆಯನ್ನೆಲ್ಲಾ ಗಮನಿಸಿ, ಸಂಪೂರ್ಣಾನಂದರು ಮುಖ್ಯಮಂತ್ರಿ ಪದದಿಂದ ತಪ್ಪಿ, ಮುಂಬಾಯಿಗೆ ಗವರ್ನರರಾಗಿ ಹೋಗುವ ಸಂಭವವಿದೆ. ಕೇಂದ್ರದಲ್ಲಿ ಮುರಾರ್ಜಿ-ದೇಭಾರ್ಜಿ ಒತ್ತಡವನ್ನು ತಡೆಯಲಾರದೆ ಪಂಡಿತಪಂತರು ಯು. ಪಿ. ಯ ಮುಖ್ಯ ಮಂತ್ರಿಯಾಗಿ ಹೋಗಲಿರುವರೆಂದು ತಿಳಿಯಲಾಗಿದೆ.

ಕೇಂದ್ರ ಮಂತ್ರಿಮಂಡಲದ ಪುನರ್ರಚನೆ

ಟಿ. ಟಿ. ಕೆ. ಯ ರಾಜಿನಾಮೆಯೇ ಕಾರಣವಾಗಿ ಕೇಂದ್ರದ ಮಂತ್ರಿಮಂಡಲದ ಪುನರ್ರಚನೆಯಾಗುವುದೆಂದೂ ವರದಿಯಾಗಿದೆ. ಮುಂಧ್ರಾ ಪ್ರಕರಣದ ವಿಚಾರಣಾ ವರದಿಯ ಹಿನ್ನೆಲೆಯಲ್ಲಿ ಕೇಂದ್ರದಲ್ಲೂ, ಒಬ್ಬರನ್ನೊಬ್ಬರು ನುಂಗಲು ನಡೆಸುವ ಯತ್ನದಲ್ಲಿ ಯಾರ್ಯಾರು ವಿಜಯಶಾಲಿಗಳಾಗುವರೆಂದು ಕಾದು ನೋಡಬೇಕಾಗಿದೆ. ಇದರ ಅಂಗವಾಗಿ ಪಂಡಿತಪಂತರನ್ನು ಕೇಂದ್ರದಿಂದ ಹೊರಕ್ಕೆ ನೂಕಲು ಕಾರಸ್ಥಾನ ಹೂಡಿದ ಮೊರಾರ್ಜಿಯೇ ಪಂತರ ನಿರ್ಗಮನದ ನಂತರ ಒಳಾಡಳಿತ ಸಚಿವರಾಗಬಹುದೆಂದು ಊಹಿಸಲಾಗಿದೆ.

ಕಿತ್ತೆಸೆಯಲ್ಪಟ್ಟ ನೌಕರರಿಗೆ ಸರಕಾರದಿಂದ ಆರ್ಥಿಕ ಸಹಾಯ!

ಭಾರತದ ಕಾರ್ಮಿಕ ಚಳವಳಿಯ ಇತಿಹಾಸದಲ್ಲೆ ಮೊತ್ತಮೊದಲನೆಯದಾಗಿ, ಕೆಲಸದಿಂದ ಕಿತ್ತೆಸೆಯಲ್ಪಟ್ಟ ಕಾರ್ಮಿಕರಿಗೆ, ಸರಕಾರವೇ ಆರ್ಥಿಕ ಸಹಾಯ ನೀಡಲು ಮುಂಬಂದಿದೆ. ಇದು ನಡೆದದ್ದು ಕಾರ್ಮಿಕರ ಹಿತವನ್ನೇ ಗುರಿಯಾಗಿಟ್ಟುಕೊಂಡ ಕಮ್ಯೂನಿಸ್ಟ್ ನೇತೃತ್ವದ ಆಡಳಿತೆಯನ್ನು ಹೊಂದಿದ ಕೇರಳದಲ್ಲಿ!

ಕೇರಳ ಸರಕಾರ ಕೇರಳ ಆರ್ಥಿಕ ಸಹಾಯ (ಕೆಲಸದಿಂದ ತೆಗೆದು ಹಾಕಿದ ಅಥವಾ ನಿವೃತ್ತಿಗೊಳಿಸಲ್ಪಟ್ಟ ಕೆಲಸಗಾರರಿಗೆ) ನಿಯಮಗಳು, 1958 ಅನ್ನು ಪ್ರಕಟಿಸಿದೆ. ಈ ಕ್ರಮವು, ಕಾರ್ಮಿಕರು ಮತ್ತು ಮಾಲಿಕರ ನಡುವಿನ ವಿವಾದ ಆರ್ಬಿಟ್ರೇಷನ್ ಅಥವಾ ಎಡ್ಜುಡಿಕೇಷನಿಗೆ ಹಾಕಲ್ಪಟ್ಟಲ್ಲಿ, ಈ ಅವಧಿಯಲ್ಲಿ ಕಾರ್ಮಿಕರು ಆರ್ಥಿಕ ತೊಂದರೆಗೆ ಸಿಲುಕದೆ, ಮಾಲಿಕರೊಡನೆ ಆರ್ಥಿಕ ದೃಷ್ಟಿಯಲ್ಲಿ ಸಮಾನಸ್ಕಂಧರಂತೆ ನಿಲ್ಲುವ ಪರಿಸ್ಥಿತಿಯನ್ನು ಉಂಟುಮಾಡಲು ಸಹಾಯಕವಾಗುವುದು. ಈ ಕಾನೂನಿನ ಸಂಪೂರ್ಣ ಲಾಭವನ್ನು ಕಾರ್ಮಿಕರು ಪಡೆದು, ಅನ್ಯಾಯವಾಗಿ ಕೆಲಸದಿಂದ ತೆಗೆದುಹಾಕಿದುದರ ವಿರುದ್ಧವಾಗಿ ಕೋರ್ಟಿನಲ್ಲಿ ದೀರ್ಘ ಕಾಲದ ವರೆಗೆ ವಿವಾದ ನಡೆದರೂ ತಮ್ಮ ದಿನನಿತ್ಯದ ಜೀವನ ನಡೆಸಲು ಹಾಗೂ ಕಾನೂನಿನ ಲಾಭ ಪಡೆಯಲು ಇದರಿಂದ ಸಾಧ್ಯವಾಗುತ್ತದೆ.

ಒಬ್ಬ ಕಾರ್ಮಿಕನ ಸಂಬಳವು ಮಾಸಿಕವಾಗಿ ರೂ. 300ಕ್ಕೂ ಮಿಕ್ಕದಂತಿರಬೇಕು. ಅಂತಹ ಕಾರ್ಮಿಕನ ಸಂಬಳದ ಶೇ 50ರಷ್ಟನ್ನು ಸರಕಾರ ಸಹಾಯವಾಗಿ ನೀಡುವುದು. ಈ ಸಹಾಯ 6 ತಿಂಗಳ ವರೆಗೆ ಅಥವಾ ತೀರ್ಪು ಪ್ರಕಟವಾಗುವ ವರೆಗೆ — ಯಾವುದು ಬೇಗವಾಗುತ್ತದೋ ಆ ಅವಧಿಯ ತನಕ — ಸಿಗುವುದು.

ಮುಂಧ್ರಾ ಪ್ರಕರಣ—

ಚಾಗ್ಲಾ ಸಮಿತಿಯಿಂದ ವರದಿ ಸಲ್ಲಿಕೆ

ಜೀವವಿಮಾ ಕಾರ್ಪೊರೇಷನ್ ಮುಂಧ್ರಾ ಗುಂಪಿನ ಕೈಗಾರಿಕೆಗಳ ಷೇರುಗಳನ್ನು ಕೊಂಡ ಬಗ್ಗೆ ಉದ್ಭವಿಸಿದ್ದ ಪ್ರಕರಣವನ್ನು ತನಿಖೆ ಮಾಡಲು ನಿಯಮಿತನಾಗಿದ್ದ ಚೀಫ್ ಜಸ್ಟಿಸ್ ಚಾಗ್ಲಾ ಸಮಿತಿಯು ತನ್ನ ಕಾರ್ಯವನ್ನು ಪೂರೈಸಿ ವರದಿಯನ್ನು ಫೆಬ್ರುವರಿ 11ರಂದು ಸರಕಾರಕ್ಕೆ ಸಮರ್ಪಿಸಿದೆ.

ಚಾಗ್ಲಾ ಸಮಿತಿಯ ಮುಂದೆ ನೀಡಲಾದ ಸಾಕ್ಷ್ಯಗಳು, ಭಾರತದ ಅಟರ್ನಿಜನರಲ್ ಎಂ. ಸಿ. ಸೆಟಲ್‌ವಾಡ್, ಜೀವವಿಮಾ ಕಾರ್ಪೊರೇಷನ್ನಿನ ಪರ ವಾದಿಸಿದ ಚೌಧುರಿ ಮತ್ತು ಕೇಂದ್ರ ಅರ್ಥ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಎಚ್. ಎಂ. ಪಟೇಲರ ಪರ ವಾದಿಸಿದ ಕೆ. ಎಂ. ಮುನ್ಷಿ ಇವರುಗಳ ವಾದಗಳಿಂದ ಅನೇಕ ಅಂಶಗಳು ಹೊರಬಿದ್ದಿವೆ. ಎಂ. ಸಿ. ಸೆಟಲ್‌ವಾಡ್‌ರವರು ಈ ಪ್ರಕರಣದಲ್ಲಿ ಸಂಪೂರ್ಣವಾಗಿ ನಿಜಾಂಶ ಹೊರಬಿದ್ದಿಲ್ಲವೆಂದೂ ನಿಜಾಂಶವನ್ನು ಮುಚ್ಚಿಡಲಾಗಿದೆಯೆಂದೂ ಸ್ಪಷ್ಟವಾಗಿ ತಿಳಿಯ ಪಡಿಸಿದ್ದಾರೆ. ವಿಚಾರಣೆಯಿಂದ ಹೊರಬಿದ್ದಿರುವ ಎಲ್ಲ ಅಂಶಗಳನ್ನೂ ಕೂಲಂಕುಶವಾಗಿ ಪರಿಶೀಲಿಸಿದಲ್ಲಿ ಯಾರೊಬ್ಬರಿಗೂ ನಿಜಾಂಶ ಹೊರಬಿದ್ದಿಲ್ಲವೆಂದು ಸ್ಪಷ್ಟವಾಗುತ್ತದೆ. ಪ್ರಕರಣದಲ್ಲಿ ನೇರವಾದ ಹೊಣೆ ಅರ್ಥಸಚಿವ ಟಿ. ಟಿ. ಕೃಷ್ಣಮಾಚಾರಿ ಮತ್ತು ಪ್ರಧಾನ ಕಾರ್ಯದರ್ಶಿ ಪಟೇಲರದೇ ಆಗಿದೆ ಎಂದು ವಾದಿಸಲಾಗಿದೆ. ವರದಿ ಸರಕಾರಕ್ಕೆ ಸಮರ್ಪಿತವಾಗಿ ಶೀಘ್ರವಾಗಿ ಹೊರಬೀಳಲಿದೆ ಮತ್ತು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬರಲಿದೆ.

ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷವನ್ನು ಉದ್ದೇಶಿಸಿ ಪಂಡಿತ್ ನೆಹರೂರವರು ಮುಂಧ್ರ ಪ್ರಕರಣದ ವಿಷಯವಾಗಿ ಮಾತನಾಡುತ್ತಾ, ಚಾಗ್ಲಾ ಸಮಿತಿಯ ವರದಿಯು ಚರ್ಚೆಗೆ ಬರುವುದರಿಂದ ಈಗ ಆ ಬಗ್ಗೆ ಮಾತನಾಡುವುದು ವ್ಯರ್ಥವೆಂದು ತಿಳಿಸಿದ್ದಾರೆ. ವರದಿಯು ಕೈಮುಟ್ಟುವ ವರೆಗೂ ಏನೂ ಹೇಳಲಿಕ್ಕಾಗದೆಂದೂ ಹೇಳಿದ್ದಾರೆ.

ಟಿ. ಟಿ. ಕೆ. ರಾಜಿನಾಮೆಯ ಪ್ರಶ್ನೆ ಬಗ್ಗೆ ಪಂಡಿತ ನೆಹರೂರವರು ಅವರ ರಾಜೀನಾಮೆಯನ್ನು ರಾಜ್ಯಾಂಗ ಘಟನೆಯ ಪ್ರಶ್ನೆಯ ಮೇಲೆ ಒಪ್ಪಿಕೊಳ್ಳಲಾರರೆಂದೂ, ಚಾಗ್ಲಾ ಸಮಿತಿಯ ವರದಿಯ ಆಧಾರದ ಮೇಲೆ ಮಾತ್ರವೇ ಯಾವುದನ್ನೂ ನಿರ್ಣಯಿಸಲಾಗುವುದೆಂದೂ ತಿಳಿದುಬಂದಿದೆ.

ಕಾಂಗ್ರೆಸ್ ಪಾರ್ಲಿಮೆಂಟ್ ಸದಸ್ಯರುಗಳ ನಡುವೆ ಈ ಬಗ್ಗೆ ವಿಶೇಷವಾದ ಟೀಕೆಗಳಿದ್ದುವೆಂದೂ ತಿಳಿದುಬಂದಿದೆ. ಪಂಡಿತ ನೆಹರೂರವರು ಅರ್ಥಸಚಿವ ಟಿ ಟಿ.ಕೆ. ಯವರಿಗೆ ಸಹಬಾಸ್ ಗಿರಿಯನ್ನು ಕೊಟ್ಟಿದ್ದಾರೆ. ವಿದೇಶೀ ನೆರವನ್ನು ಭಾರತಕ್ಕೆ ತರುವುದರಲ್ಲಿ ಟಿ. ಟಿ. ಕೆ. ಮಾಡಿದ ಕೆಲಸವು ಸ್ತುತ್ಯಾರ್ಹವಾಗಿದೆ ಎಂದು ತಿಳಿಸಿದ್ದಾರೆ. ಮುಂಧ್ರಾ ಪ್ರಕರಣದ ನಂತರ ಟಿ. ಟಿ. ಕೆಯವರ ಕಾರ್ಯದ ಬಗ್ಗೆ ನೆಹರೂ ಸಹಬಾಸಗಿರಿ ಕೊಡುತ್ತಿರುವುದು ಇದು ಎರಡನೆಯ ಬಾರಿ. ಅಮೆರಿಕಕ್ಕೆ ಭಾರತದ ವಿದೇಶಾಂಗ ನೀತಿಯನ್ನು ಸ್ವಾತಂತ್ರ್ಯ ಗೌರವಗಳನ್ನು ಡಾಲರುಗಳಿಗಾಗಿ ಮಾರುವಂತಹ ಹೇಳಿಕೆಗಳನ್ನಿತ್ತು ರಾಷ್ಟ್ರದ ಗೌರವಕ್ಕೆ ಕಳಂಕ ತಂದ ಟಿ. ಟಿ. ಕೆ. ಸ್ತುತ್ಯಾರ್ಹರೇ?

ರಾಜಿನಾಮೆ?

ಅರ್ಥ ಸಚಿವ ಟಿ. ಟಿ. ಕೆ. ಸಚಿವ

...ಮೆಂಟಿನಲ್ಲಿ.....

ವಸೂಲಿ

...ಡ್ಯೂಲ್

ತ್ರಲೇ ಬಂದಿರುವ ಡಾ|| ಕೇಸ್ಕರ್‌ರವರು ಈ ಬಾರಿ ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತ ಈ ಪ್ರಶ್ನೆಯ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯಗಳಿರುವುದರಿಂದಾಗಿ ಕ್ರಯ ಪುಟ ಷೆಡ್ಯೂಲನ್ನು ತರುವುದು ನಿಧಾನವಾಗಿದೆಯೆಂದು ತಿಳಿಸಿದ್ದಾರೆ. ಸಧ್ಯದಲ್ಲಿ ಸರಕಾರವು ವಿವಿಧ ವೃತ್ತಪತ್ರಿಕೆಗಳೊಂದಿಗೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಿದ್ದಾರೆ. ಅಂದರೆ ಈಗ ಸಧ್ಯದಲ್ಲಿ ಕ್ರಯ ಪುಟ ಷೆಡ್ಯೂಲ್‌ನ ಯೋಜನೆ ಹಾಗೆಯೇ ಉಳಿಯುವುದೆಂದು ಸ್ಪಷ್ಟವಾಗುತ್ತದೆ ಕಾರಣ ದೊಡ್ಡ ದೊಡ್ಡ ವೃತ್ತಪತ್ರಿಕೆಗಳ ಮಾಲೀಕರುಗಳು ಇದಕ್ಕೆ ತೀವ್ರ ವಿರೋಧವಿದ್ದಾರೆ.

ಮೊದಲ ದಿನವೇ ನಿಲುವಳಿ ಸೂಚನೆಗಳು

ದೆಹಲಿ ಮುನಿಸಿಪಲ್ ಕೆಲಸಗಾರರ ಮತ್ತು ವಿದ್ಯುಚ್ಛಕ್ತಿ ನೌಕರರ ಮುಷ್ಕರವನ್ನು ಕುರಿತು ಹಾಗೂ, ದೆಹಲಿಯ ಉಪಾಧ್ಯಾಯರುಗಳು ನಡೆಸಲಿರುವ ಮುಷ್ಕರ ಮತ್ತು ಜೀವವಿಮಾ ಕಾರ್ಪೊರೇಷನ್ನಿನ ಫೀಲ್ಡ್ ಕೆಲಸಗಾರರು ನಡೆಸಲಿರುವ ಅಸಹಕಾರ ಚಳುವಳಿ ಇವುಗಳ ಕುರಿತಾಗಿ ಕಮ್ಯೂನಿಸ್ಟ್ ಸದಸ್ಯರಾದ ಕೆ. ಟಿ. ಕೆ. ತಂಗಮಣಿ ಮತ್ತು ಹೇಮ್ ಬರುವಾರವರು ಪಾರ್ಲಿಮೆಂಟಿನಲ್ಲಿ ಆರಂಭದ ದಿನವೇ ನಿಲುವಳಿ ಸೂಚನೆಯನ್ನು ತಂದಿದ್ದಾರೆ.

ಸಭಾಪತಿಗಳು ಈ ನಿಲುವಳಿ ಸೂಚನೆ ಕುರಿತು ತಾವು ಪರ್ಯಾಲೋಚಿಸುವುದಾಗಿ ತಿಳಿಸಿದ್ದಾರೆ. ಮತ್ತು ತೀರ್ಮಾನವನ್ನು ಸದಸ್ಯರಿಗೆ ತಿಳಿಸುವುದಾಗಿಯೂ ಹೇಳಿದ್ದಾರೆ.

ಮೈಸೂರು ವಿಧಾನ ಸಭೆಯ ಬಜೆಟ್ ಅಧಿವೇಶನ

ಮೈಸೂರು ರಾಜ್ಯ ವಿಧಾನಸಭೆಯ ಬಜೆಟ್ ಅಧಿವೇಶನವು ಇದೇ ತಿಂಗಳು 22ನೇ ತಾರೀಖಿನಿಂದ ಆರಂಭವಾಗಲಿದೆ.

ಈ ಬಾರಿಯ ಅಧಿವೇಶನದಲ್ಲಿ ಬಜೆಟ್ ಹೊರತಾಗಿ ವಿಶೇಷವಾಗಿ ಚರ್ಚೆಗೆ ಬರುವ ವಿಷಯವೆಂದರೆ 'ಜತ್ತಿ ಸಮಿತಿ ವರದಿ'. ಕಳೆದ ಅಧಿವೇಶನದಲ್ಲಿ ಅಪೂರ್ಣವಾದ ಚರ್ಚೆ ನಡೆದಿದ್ದಿತು. ರಾಜ್ಯದ ಆಯವ್ಯಯ ಪಟ್ಟಿಯನ್ನು ಮಾರ್ಚ್ 2ನೆಯ ವಾರದಲ್ಲಿ ಮಂಡಿಸಲಾಗುವುದೆಂದು ತಿಳಿದು ಬಂದಿದೆ.

ಈ ಅಧಿವೇಶನದಲ್ಲಿ ಜತ್ತಿ ಸಮಿತಿಯ ವರದಿಯ ಮೇಲೆ ಚರ್ಚೆ ಮುಂದುವರಿಯುವುದಾದರೂ, ಸರಕಾರವು ಅದರ ಆಧಾರದ ಮೇಲೆ ಸೂಕ್ತ ಶಾಸನವನ್ನು ಈ ಅಧಿವೇಶನದಲ್ಲಿ ತರುವುದಿಲ್ಲವೆಂಬುದು ಸ್ಪಷ್ಟವಾಗಿದೆ. ಶಾಸನ ಸಭೆಯಲ್ಲಿ ಚರ್ಚೆಯ ನಂತರ ಟೀಕೆಗಳು ಮತ್ತು ಸಲಹೆಗಳನ್ನು ಪರಿಶೀಲಿಸಿ ನಂತರ ಸಮಗ್ರವಾದ ಶಾಸನವೊಂದನ್ನು ತಯಾರಿಸಿ ಮುಂದಿನ ಅಧಿವೇಶನದಲ್ಲಿ ಇರಿಸುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಜಿಲ್ಲಾ ಬೋರ್ಡು ಚುನಾವಣೆಗಳನ್ನು ನಡೆಸಲು ತಿದ್ದುಪಡಿ ಮಾಡಬೇಕೆಂದಿರುವ ಶಾಸನವೂ ಸಹ ಈ ಬಾರಿಯ ಅಧಿವೇಶನದಲ್ಲಿ ಬರುವುದಿಲ್ಲ. ಅದನ್ನು ಸಹ ಮುಂದಕ್ಕೆ ಹಾಕಲಾಗಿದೆ. ಚುನಾವಣೆಯ ನಂತರದಲ್ಲಿ ಎರಡನೆಯ ಬಾರಿಗೆ ಸೇರುತ್ತಿರುವ ಈ ಬಜೆಟ್ ಅಧಿವೇಶನದಲ್ಲಿ ಸರಕಾರದ ಕಾರ್ಮಿಕ ನೀತಿಯ ಕುರಿತು ಕಟುವಾದ ಟೀಕೆ ಬರುವುದಿದೆ.

ಕಾಂಗ್ರೆಸ್ ಪಕ್ಷದಲ್ಲಿ ಜತ್ತಿ ಸಮಿತಿಯ ವರದಿಯ ಮೇಲೆ ಬೇಕಾದಷ್ಟು ಭಿನ್ನಾಭಿಪ್ರಾಯಗಳಿರುವುದರಿಂದ ಅದರ ಸಲಹೆಗಳ ಗತಿ ಏನಾದೀತೆಂದು ಹೇಳಬರುವಂತಿಲ್ಲ. ಕಾಂಗ್ರೆಸ್ಸಿನಲ್ಲಿರು ಒಳಗುಂಪುಗಳ ಪ್ರಾಬಲ್ಯ ಹೆಚ್ಚಾಗಿದ್ದು ನಿಜಲಿಂಗಪ್ಪನವರ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯ ತರಬೇಕೆಂದಿದ್ದ ಯತ್ನ ಸಾಗುತ್ತಿದ್ದರೂ ಈ ಬಾರಿ ಬರುವಂತಿಲ್ಲ ಎಂದು ಕಾಣಬರುತ್ತದೆ.

ಸರಕಾರದ ಗಮನಕ್ಕೆ ಬಂದಿದೆಯೆ?

ಚಿತ್ರದುರ್ಗ ಜಿಲ್ಲೆಯಲ್ಲಿರುವ ಮ್ಯಾಂಗನೀಸ್ ಗಣಿ ಮಾಲೀಕರೊಬ್ಬರು, ಬಹಳ ದೊಡ್ಡ ಶ್ರೀಮಂತರು, ತುಮಕೂರು ಜಿಲ್ಲೆಯ ಬಾಣಸಂದ್ರದ ಬಳಿ ಯಾವ ಲೈಸನ್ಸನ್ನೂ ಪಡೆಯದೆ ಮ್ಯಾಂಗನೀಸನ್ನು ತೆಗೆದು ಮಾರುತ್ತಿದ್ದಾರೆಂದು ತಿಳಿದು ಬಂದಿದೆ. ಪೈನ್ಸ್ ಪ್ರಾಸ್ಪೆಕ್ಟಿಂಗ್ ಲೈಸನ್ಸ್ ಆಗಲೀ ಇವರು ಪಡೆದಿಲ್ಲವೆಂದು ತಿಳಿದು ಬಂದಿದೆ ಈವರೆಗೆ ಈ ಮಹನೀಯರು ಸುಮಾರು 80 ಲಕ್ಷ ರೂ.ಗಳಷ್ಟು ಸರಕನ್ನು ಮಾರಿದ್ದಾರೆಂದು ತಿಳಿದು ಬಂದಿದೆ. ಬಾಣಸಂದ್ರದಲ್ಲಿ ಮ್ಯಾಂಗನೀಸ್ ಅದುರನ್ನು ತೆಗೆದು ಚಿತ್ರದುರ್ಗದ ಹೊಸದುರ್ಗ ತಾಲ್ಲೂಕಿನಲ್ಲಿರುವ ತಮ್ಮ ಇತರ ಗಣಿಗಳ ಹೆಸರಿನಲ್ಲಿ ಬಿಕರಿ ಮಾಡುತ್ತಿರುವರಂತೆ. ಟನ್ 1ಕ್ಕೆ 5 ರೂ.ಯಿಂದ 6 ರೂ.ಗಳವರೆಗೆ ಸಲ್ಲಬೇಕಾಗಿರುವ ರಾಯಲ್ಟಿಯಷ್ಟೂ ಸಹ ತೆತ್ತಿಲ್ಲವಂತೆ. ಮ್ಯಾಂಗನೀಸ್ ಅದುರಿನ ಬೆಲೆ ಟನ್ 1ಕ್ಕೆ ಸುಮಾರು 400 ರೂ. ಗಳವೆ. ಲೈಸನ್ಸ್ ಇಲ್ಲದೆಯೇ ಇವರು ಸುಮಾರು 100 ಎಕರೆಗಳಿಗಿಂತಲೂ ಹೆಚ್ಚು ಪ್ರದೇಶದಲ್ಲಿ 200 ಅಡಿಗಳಷ್ಟು ಅಗೆದಿದ್ದಾರೆಂದು ತಿಳಿದು ಬಂದಿದೆ. ಸರಕಾರದವರಾಗಲಿ ಅಥವ ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟಿನವರಾಗಲೀ ಈ ವಿಷಯವನ್ನು ಗಮನಿಸಿದಂತೆ ಕಾಣಬರುವುದಿಲ್ಲ.

ಈ ಮಹನೀಯರು ಇತ್ತೀಚೆಗೆ ಲೈಸನ್ಸ್ ಪಡೆಯಲು 'ಸಾಹಸ ಮಾಡುತ್ತಿದ್ದಾರೆ. ಅದಕ್ಕಾಗಿ ಲಂಚ ತೆತ್ತು ಲೆಸೆನ್ಸ್ ಪಡೆಯಲು ಬೆಂಗಳೂರು ದೆಹಲಿಗಳ ಯಾತ್ರೆ ನಡೆಸುತ್ತಿರುವರಂತೆ.

ಸರಕಾರವು ಈ ವಿಷಯವನ್ನು ಗಮನಿಸಿ ಕೂಡಲೇ ಸೂಕ್ತಕ್ರಮ ಕೈಗೊಳ್ಳುವುದೇ?

ಚೀಣಾ ಭಾರತಗಳಲ್ಲಿ ಕೈಗಾರಿಕೀಕರಣ ಅಗತ್ಯ

ಚೀಣಾ ಮತ್ತು ಭಾರತ ರಾಷ್ಟ್ರಗಳೆರಡರಲ್ಲಿಯೂ ಕೈಗಾರಿಕೀಕರಣವಾದಲ್ಲಿ ನಿರಂಕುಶ ಪ್ರಭುತ್ವದ ಕಟ್ಟಿನಿಂದ ಸಂಪೂರ್ಣವಾಗಿ ಸ್ವತಂತ್ರರಾಗಬಹುದೆಂದು ಚೀಣಾದ ಸಾಂಸ್ಕೃತಿಕ ಉಪ ಸಚಿವ ಡಾ|| ಟಿಂಗ್ ಸೈಲಿನ್ ಅವರು ಫೆಬ್ರುವರಿ 6ರಂದು ಇಲ್ಲಿ ತಿಳಿಸಿದರು.

ಚೀಣಾ ಮತ್ತು ಭಾರತಗಳೆರಡು ಸ್ವಾತಂತ್ರ್ಯವಾದ ಮೇಲೆ ಎರಡು ರಾಷ್ಟ್ರಗಳು ಅಭಿವೃದ್ಧಿಹೊಂದಲು ಕೈಗಾರಿಕೀಕರಣ ಅವಶ್ಯಕವೆಂದು ಶ್ರೀಯುತರು ನುಡಿದರು.

ನಗರದ ಚೀಣಾ-ಭಾರತ ಮೈತ್ರಿ ಸಂಘದವರು ಏರ್ಪಡಿಸಿದ ಸ್ವಾಗತ ಸಮಾರಂಭದ ಸಂದರ್ಭದಲ್ಲಿ ಡಾ|| ಟಿಂಗ್ ಸೈಲಿನ್ ಅವರು ಮಾತನಾಡುತ್ತಾ, ಎರಡು ರಾಷ್ಟ್ರಗಳು ಧಾಳಿಯಿಂದ ನರಳಿದೆಯೆಂದೂ ಈಗ ಅವುಗಳೆರಡೂ, ರಾಷ್ಟ್ರನಿರ್ಮಾಣ ಮತ್ತು ವಿಶ್ವಶಾಂತಿಗಾಗಿ ದುಡಿಯುತ್ತಿವೆ ಎಂದೂ ಹೇಳಿದರು.

ವಿಧಾನ ಸಭೆಯ ಸ್ಪೀಕರ್ ಶ್ರೀ ಎಸ್. ಆರ್. ಕಂಠಿ ಅವರು ಅಧ್ಯಕ್ಷತೆ ವಹಿಸಿದ್ದರು.

ಸಾವಿರಾರು ವರ್ಷಗಳಿಂದ ಎರಡು ರಾಷ್ಟ್ರಗಳ ನಡುವೆ ಇರುವ ಮೈತ್ರಿಯನ್ನು ಪ್ರಸ್ತಾಪಿಸಿದ ಶ್ರೀಯುತರು ಈ ಪರಂಪರಾಗತ ಗೆಳೆತನವನ್ನು ಕಾಪಾಡಿಕೊಂಡು ಬರಬೇಕೆಂದರು.

ಆಕರ್ಷಣೀಯ, ಸುಂದರವಾದ ಬೆಂಗಳೂರು ನಗರಕ್ಕೆ ಭೇಟಿ ಕೊಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಸಂಘದವರಿಗೆ ತಮ್ಮ ವಂದನೆಗಳನ್ನು ಅರ್ಪಿಸಿದ ಡಾ|| ಟಿಂಗ್ ಸೈಲಿನ್ ಅವರು, ಬೆಂಗಳೂರು ನಗರ ಕೈಗಾರಿಕಾ ನಗರವೆಂದು ಕರೆದು, ಚೀಣಾದ 600 ಮಿಲಿಯನ್ ಜನತೆಯ ಶುಭಾಶಯಗಳನ್ನು ತಿಳಿಸಿದಲ್ಲದೆ, ಮೈತ್ರಿ ಸಂಪ್ರದಾಯ ಮತ್ತು ಚರಿತ್ರೆಯ ಸಾಮಾನ್ಯ ನಂಬಿಕೆ ಇವು ಈ ಎರಡು ರಾಷ್ಟ್ರದ ಜನತೆಯನ್ನು ಒಂದುಗೂಡಿಸಿದೆಯೆಂದು ನುಡಿದರು.

ಶ್ರೀಯುತರು ಕೊನೆಯಲ್ಲಿ "ಭಾರತ-ಚೀಣಾ ಮೈತ್ರಿ ಚಿರಕಾಲ ಬಾಳಲಿ" "ಹಿಂದಿ-ಚೀಣಾ ಭಾಯ್ ಭಾಯ್" ಎಂದು ಹೇಳಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಪ್ರಾರಂಭದಲ್ಲಿ ಶ್ರೀ ಬಿ. ಟಿ. ಪಾರ್ಥಸಾರಥಿ ಅವರು ಚೀಣಾ ಸಾಂಸ್ಕೃತಿಕ ನಿಯೋಗದವರಿಗೆ ಹಾರ್ದಿಕ ಸ್ವಾಗತವನ್ನು ಬಯಸಿ, ಚೀಣಾ ಮತ್ತು ಭಾರತಗಳ ನಡುವೆ ಇರುವ ಬಾಂಧವ್ಯವನ್ನು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ಆರ್. ಕಂಠಿ ಅವರು ಎರಡು ರಾಷ್ಟ್ರಗಳ ನಡುವೆ ಪುರಾತನ ಕಾಲದಿಂದ ಇರುವ ಮಧುರ ಬಾಂಧವ್ಯವನ್ನು ವಿವರಿಸಿ, ಎರಡು ರಾಷ್ಟ್ರಗಳೂ ಸಂಸ್ಕೃತಿಯ ಪ್ರತೀಕಗಳೆಂದು ವರ್ಣಿಸಿದರು. ಈ ಎರಡು ರಾಷ್ಟ್ರಗಳ ಮೈತ್ರಿ ವಿಶ್ವದ ಶಾಂತಿಗಾಗಿಯೂ, ಮುಂದುವರಿಯುವುದೆಂಬ ನಂಬಿಕೆಯನ್ನು ವ್ಯಕ್ತಪಡಿಸಿದರು.

ಐದು ಜನರ ನಿಯೋಗವು ಮುಂಬೈನಲ್ಲಿ ನಡೆದ ಸಂಘದ 3ನೇ ಸಮ್ಮೇಳನದಲ್ಲಿ ಭಾಗವಹಿಸಿದ್ದು ಮೊನ್ನೆ ನಗರಕ್ಕೆ ಆಗಮಿಸಿದ್ದರು.

ನಿಯೋಗದ ನಾಯಕರಾದ ಡಾ|| ಟಿಂಗ್ ಸೈಲಿನ್ ಅವರ ಭಾಷಣವನ್ನು ದುಬಾಷಿ ಮಿಸ್ ಚೂಜಾನ್ ಅವರು ಭಾಷಾಂತರಿಸಿದರು.

ಸದಸ್ಯರೇ ಆದಿಯಾಗಿ ನೂರಾರು ಮಂದಿ ಆಗಮಿಸಿದ್ದರು.

ಏಷಿಯಾದ ಶಾಂತಿಗೆ ಮಹಾ ಅಪಾಯ!

ಭಾರತ ಕಮ್ಯೂನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಅಜಯಕುಮಾರ್ ಘೋಷ್‌ರವರು ಫೆಬ್ರವರಿ ಒಂದರಂದು ಪತ್ರಿಕೆಗೆ ಈ ಕೆಳಗಿನ ಹೇಳಿಕೆಯನ್ನಿತ್ತಿದ್ದಾರೆ:

"ಬಗ್ದಾದ್ ಕೌನ್ಸಿಲಿನಲ್ಲಿ ನಡೆದ ಸಭೆಯು ಏಷ್ಯಾದ ಶಾಂತಿ ಮತ್ತು ಸ್ವಾತಂತ್ರ್ಯಕ್ಕೆ ಮಹತ್ತಾದ ಅಪಾಯವನ್ನು ತಂದೊಡ್ಡಿದೆ. ಅಣು ಅಸ್ತ್ರಗಳು ಮತ್ತು ಕ್ಷಿಪಣಿ ನೆಲೆಗಳನ್ನು ಪಾಕಿಸ್ತಾನ ಅಪೇಕ್ಷಿಸಿರುವುದು, ಅಲ್ಲಿನಜನತೆಯ ಭದ್ರತೆಯಷ್ಟೇ ಅಲ್ಲ ಪಾಕಿಸ್ತಾನದ ನೆರೆಹೊರೆಯ ರಾಷ್ಟ್ರಗಳ ಭದ್ರತೆಗೂ ಘೋರವಾದ ದ್ರೋಹ ಬಗೆದಂತಾಗಿದೆ.

"ಬಗ್ದಾದ್ ಕೌನ್ಸಿಲಿನ ವಿಷಯಗಳಲ್ಲಿ ಅಮೇರಿಕವು ನೇರವಾದ ಆಸಕ್ತಿಯನ್ನು ವಹಿಸಿರುವುದು ಹಾಗೂ ಹೊಸ ಸಂಯುಕ್ತ ಸೇನೆಯೊಂದನ್ನು ಈ ಪ್ರದೇಶದಲ್ಲಿ ಸ್ಥಾಪಿಸಬೇಕೆಂದು ನಿರ್ಣಯ ತಳೆದಿರುವುದು, ಇಲ್ಲಿ ಈಗಾಗಲೇ ಇರುವ ಶೀತಲ ಯುದ್ಧವನ್ನು ಇನ್ನಷ್ಟು ಉಗ್ರಸ್ಥಿತಿಗೆ ಮುಟ್ಟಿಸಿದೆ.

ಅಮೇರಿಕಾ—ಪಾಕ್ ಒಪ್ಪಂದದಿಂದ ಆರಂಭವಾದ ಈ ಬೆಳವಣಿಗೆಯು ಈಗ ಒಂದು ಹೆಜ್ಜೆ ಮುಂದಿಟ್ಟಿದೆ; ಹಾಗೂ ಅಣು ರಾಜಕೀಯ ತಂತ್ರವನ್ನು ನಮ್ಮ ಹೊಸ್ತಿಲ ತನಕ ತಂದಿದೆ.

"ಪಂಡಿತ್ ನೆಹ್ರೂರವರು ಇದರ ವಿರುದ್ಧ ಎಚ್ಚರಿಕೆ ಇತ್ತಿರುವುದೂ ಪ್ರತಿಯೊಬ್ಬ ಭಾರತೀಯನ ದೇಶಪ್ರಿಯ ಭಾವನೆಯ ಪ್ರತಿಧ್ವನಿಯಾಗಿದೆ.

"ಈ ಇತ್ತೀಚೆಗಿನ ಅಪಾಯವನ್ನು ಧಿಕ್ಕರಿಸಿ ನಮ್ಮ ಇಡೀ ದೇಶವೇ ಸರಕಾರದೊಡನೆ ಭುಜಕ್ಕೆ ಭುಜ ಕೊಟ್ಟು ಪ್ರತಿಭಟಿಸಲಿ.

"ಏಷಿಯಾದ ಶಾಂತಿಗೆ ಧಕ್ಕೆ ತರುವ, ಸ್ವಾತಂತ್ರ್ಯ ಭಂಗಗೊಳಿಸುವ, ಏಷಿಯಾದ ಮಣ್ಣಿನಲ್ಲೇ ಅಣುಯುದ್ಧ ಸಿದ್ಧತೆ ನಡೆಸಲು ಅನುವಿದ ಸಾಮ್ರಾಜ್ಯಶಾಹಿಗಳನ್ನು ಬಿಡಬಾರದೆಂದು ದೇಶದ ಸಂಯುಕ್ತ ಒತ್ತಾಯವನ್ನು ಪ್ರತಿಬಿಂಬಿಸಲು, ನಮ್ಮ ಸರ್ವಪಕ್ಷಗಳೂ, ಜನವಿಭಾಗಗಳೂ ಒಂದಾಗಬೇಕೆಂದು, ಕಮ್ಯೂನಿಸ್ಟ್ ಪಕ್ಷವು ಮನವಿ ಮಾಡುತ್ತದೆ."

ಎಡ್ಜುಡಿಕೇಷನ್ ಬೇಕೆ ?

ಕೈಗಾರಿಕೆಯು ಮಟ್ಟದಲ್ಲಿ ಕಾರ್ಮಿಕ-ಮಾಲೀಕ ವಿವಾದಗಳನ್ನು ಪರಿಹರಿಸಲೇ ಬೇಕಾದರೆ ಹಾಗೂ ಕೈಗಾರಿಕಾ ಶಾಂತಿ ಉಳಿಯುವಂತಾಗಬೇಕಾದರೆ, ಎಡ್‌ಜುಡಿಕೇಷನ್ ಇರಲೇಬಾರದು. ಇದರಿಂದ ಕಾರ್ಮಿಕ ವಿವಾದಗಳಲ್ಲಿ ಒಂದು ಸಂಪೂರ್ಣ ಸ್ವೀಕೃತ ಒಪ್ಪಂದವೇ ಆಗುವಂತಿಲ್ಲದೆಂದು ಕೇಂದ್ರದ ಮಾಜಿ ಕಾರ್ಮಿಕ ಮಂತ್ರಿ ಹಾಗೂ ಈಗ ಉತ್ತರ ಪ್ರದೇಶದ ರಾಜ್ಯಪಾಲರಾಗಿರುವ ಶ್ರೀ ಗಿರಿಯರವರ ಅಭಿಪ್ರಾಯ.

"ಎಡ್‌ಜುಡಿಕೇಷನ್ ಇಲ್ಲದಲ್ಲಿ ಅದು ಕೈಗಾರಿಕೆಯಲ್ಲಿ ಸಂಪೂರ್ಣ ಅರಾಜಕತೆಗೆ ದಾರಿ ಮಾಡಿದಂತಾಗುವುದೆಂದು ಪ್ರಚಲಿತ ಕಾರ್ಮಿಕ ಮಂತ್ರಿ ನಂದಾರವರ ಪ್ರತ್ಯುತ್ತರ; ಇದಿಷ್ಟೇ ಅಲ್ಲದೆ,' ಇಂಥಾ ಹೆಜ್ಜೆಯನ್ನು ಇಡುವಾಗ ಕಾರ್ಮಿಕ ಮಂತ್ರಿತ್ವಕ್ಕೆ ತಿಲಾಂಜಲಿ ಕೊಡಬೇಕಾದೀತು—ಎಂದು ನಂದಾರವರು ತಮ್ಮ ಹೆದರಿಕೆ ವ್ಯಕ್ತಪಡಿಸಿದ್ದಾರೆ. ಅಂತೂ ರಾಜಿನಾಮೆಯ ಭಯ ಚೆನ್ನಾಗಿದೆ ಈ ಕೇಂದ್ರ ಮಂತ್ರಿಗಳಿಗೆ. ಟಿ. ಟಿ. ಕೆ. ಯ ಪ್ರಕರಣದ ನಂತರದ ಪ್ರತಿಕ್ರಿಯೆ ಇದಾಗಿರಲಾರದಷ್ಟೇ?

ಪಂಜಾಬಿನಲ್ಲಿ ಗೋಲಿಬಾರು

ಪಂಜಾಬಿನ ಜುಲುಂದರಿನಲ್ಲಿ ಹಿಂದಿ ಸಮ್ಮೇಳನದ ಅಂಗವಾಗಿ ನಡೆದ ಮೆರವಣಿಗೆಯ ಮೇಲೆ, ಗುರುದ್ವಾರದ ಬಳಿ, ಅಕಾಲಿ ಪಂಥೀಯರ ಗುಂಪೊಂದು ಕಲ್ಲು ಬೀರಿದ ಪರಿಣಾಮವಾಗಿ ಘರ್ಷಣೆ ನಡೆಯಿತು. ಈ ಘರ್ಷಣೆ ಉಗ್ರ ಪರಿಸ್ಥಿತಿಗೆ ಹೋಗದಂತೆ ತಡೆಯಲು ಪೋಲೀಸು ಮಧ್ಯೆ ಪ್ರವೇಶಿಸಿತು. ಇವರಿಗೂ ಕಲ್ಲುಗಳು ಬಿತ್ತೆಂದು ಹೇಳಲಾಗಿದೆ. ಅಂತೂ ಪೋಲೀಸರು ಅಶ್ರುವಾಯು ಉಪಯೋಗಿಸಿದರೆಂದೂ, ಆ ಮೇಲೆ, ಮೇಲಕ್ಕೆ ಗುಂಡು ಹಾರಿಸಿದರೆಂದೂ, ಇದರ ಫಲವಾಗಿ ಇಬ್ಬರು ಮರಣಹೊಂದಿ, ಇನ್ನು ಹಲವರಿಗೆ ಜಖಂ ಆಗಿದೆ ಎಂದು ವರದಿಯಾಗಿದೆ.

ಪ್ರದೇಶ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಾಮಕೃಷನ್ ಮತ್ತು ಶ್ರೀ ಮಿಲ್ಖಿರಾಮ್‌ರವರು, ಕೂಡಲೇ ಈ ಬಗ್ಗೆ ಒಂದು ಸ್ವತಂತ್ರ ನ್ಯಾಯ ವಿಚಾರಣೆ ನಡೆಯಬೇಕೆಂದು ಸರಕಾರವನ್ನು ಒತ್ತಾಯಿಸಿದ್ದಾರೆ.

ಅಕ್ಕಿಯ ಮೇಲೆ ಎಕ್ಸ್‌ರೇ ಪ್ರಯೋಗ

ಮುಂಬಾಯಿಯಲ್ಲಿನ ಟ್ರೊಂಬೆಯ ಬಯಾಲಜಿ ಶಾಖೆಯು, ತನ್ನ ಇತ್ತೀಚೆಗಿನ ಪ್ರಯೋಗದಲ್ಲಿ, ಎಕ್ಸ್‌ರೇ ಕಿರಣವನ್ನು ಉಪಯೋಗಿಸಿ ಬಹುಬೇಗನೆ, ಭತ್ತದ ತೆನೆ ಮಾಗುವಂತೆ ಮಾಡಿದೆ ಎಂದು ಎಟಾಮಿಕ್ ಎನರ್ಜಿ ಕಮಿಷನಿನ ಚೇಯರ್‌ಮನ್ ಶ್ರೀ ಹೋಮಿ. ಜೆ. ಬಾಬಾ ಹೇಳಿದ್ದಾರೆ.

....ಮನೆ ಮುರಿದ ಮಗ....

(೭ನೇ ಪುಟದಿಂದ)

ಪಡೆದದ್ದು ಸಾಕು! ಇಲ್ಲಿಗೆ ಮಾತ್ರ ಬರ್‍ಬೇಡ!

ಶಾರದೆ "ಅಯ್ಯೋ—ರಾಜಣ್ಣಂಗೆ ಹಂಗೆ ಹೇಳ್‌ಬೇಡಮ್ಮಾ" ಎಂದು ಹೇಳುತ್ತ ಓಡಿ ಬರುತ್ತಾಳೆ. ರಾಜು ತಾಯಿಯ ಮುಖವನ್ನೇ ನೋಡಿ ನಿಂತಿದ್ದಾನೆ. ಪಾರ್ವತಮ್ಮನೂ ಮಗನ ಮುಖವನ್ನೇ ನೋಡುತ್ತಿದ್ದಾಳೆ. ಸೋಮಪ್ಪ ಹಿಂದೆ ನಿಂತಿದ್ದಲ್ಲೆ ನಿಂತುಕೊಂಡಿದ್ದಾನೆ. ಒಂದೆರಡು ನಿಮಿಷ ನಿಶ್ಶಬ್ದ. ರಾಜು ಪಕ್ಕನೆ ತಿರುಗಿ ಹೋಗುತ್ತಾನೆ. ಪಾರ್ವತಮ್ಮ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಾಳೆ. ಶಾರದೆ ರಾಜು ಹೋದ ದಿಕ್ಕಿಗೇ ನೋಡುತ್ತ ನಿಂತಿದ್ದಾಳೆ. ಅವಳ ಕಣ್ಣುಗಳಲ್ಲಿ ನೀರು ತುಂಬಿದೆ.)

ಸೋಮಪ್ಪ : ಹೋದರೆ ಎಲ್ಲಿ ಹೋಗ್ತಾರೆ? ಮತ್ತೆ ಬಂದೇ ಬರ್‍ತಾರೆ.

— ತೆರೆ —

(ಮುಂದುವರಿಯುವುದು)

ವಿಶೇಷ ಸಮಾಚಾರಗಳು

ಈ ಪ್ರಯೋಗವನ್ನು ಭಾರತಾದ್ಯಂತ ಜಾರಿಗೆ ತರಲು ಶಕ್ಯವಾದಲ್ಲ ವರ್ಷಕ್ಕೆ ಹೆಚ್ಚಿನ ಬೆಳೆ ತೆಗೆಯಲು ಸಾಧ್ಯವಾಗಬಹುದು; ಕ್ರಿಮಿಕೀಟಗಳನ್ನು ನಾಶಮಾಡಲು ರೇಡಿಯೋ ಆಕ್ಟಿವ್ 'ಐಸೋಟೋಪ್ಸ್‌ನ್ನು' ಉಪಯೋಗಿಸಬಹುದು; ಮಾಂಸ, ಹಾಲು, ಹಣ್ಣು ಮತ್ತಿತರ ಆಹಾರ ಪದಾರ್ಥಗಳನ್ನು ರಿಫ್ರಿಜರೇಟರ್ ಬಳಸದೆ, 'ಐಸೋಟೋಪ್'ಗಳ ಉಪಯೋಗದಿಂದ ಒಂದು ನಿರ್ದಿಷ್ಟ ಸಮಯದ ವರೆಗೆ ಹಾಳಾಗದಂತೆ ಜೋಪಾನವಾಗಿಡಬಹುದೆಂದು, ಡಾ। ಬಾಬಾರವರು ಹೇಳಿಕೆ ಇತ್ತಿದ್ದಾರೆ. ಇದು ಅಣುಶಕ್ತಿಯ ಶಾಂತಿಯುತ ಬಳಕೆಯಾಗಿದೆ.

ಕ್ರುಶ್ಚೇವ್—ಐಕ್ ಒಮ್ಮತ?

ನಿರಾಯುಧೀಕರಣ ಹಾಗೂ ನ್ಯೂಕ್ಲಿಯರ್ ಪ್ರಯೋಗ ರದ್ದಿಯಾತಿನ ಬಗ್ಗೆ ಶೃಂಗ ಸಮ್ಮೇಳನವಾಗಬೇಕಾದರೆ, ಮೊದಲೇ ಯೋಗ್ಯ ತಯಾರಿ ನಡೆಯಬೇಕೆಂದು ಐಕರ ಅಭಿಪ್ರಾಯ. ಐಕರು ಈ ಸಂಬಂಧದಲ್ಲಿ, "ಜರ್ಮನಿಯ ಏಕೀಕರಣ"ದಂಥ ಮಹತ್ವದ ಪ್ರಶ್ನೆಗಳು ಮೊದಲು ಇತ್ಯರ್ಥವಾಗಬೇಕೆಂದು ಸಾರಿದ್ದಾರೆ. ಇದಕ್ಕುತ್ತರವಾಗಿ ಕ್ರುಶ್ಚೇವ್‌ರವರು: ಇದು ನ್ಯಾಯ, ಇಬ್ಭಾಗ ಹೊಂದಿದ ರಾಷ್ಟ್ರಗಳಾದ ಜರ್ಮನಿ, ವಿಯತ್‌ನಾಮ್ ಕೊರಿಯಾ ಮೊದಲಾದುವುಗಳ ಏಕೀಕರಣವಾಗಲೇ ಬೇಕು-ಎಂದು ಐಕರೊಡನೆ ಒಮ್ಮತ ತೋರಿದ್ದಾರೆ.

ಆದರೆ ಅತ್ಯಾಶ್ಚರ್ಯಕರವಾದ ಸಂಗತಿಯೆಂದರೆ, ಕ್ರುಶ್ಚೇವ್‌ರವರೂ ಒಮ್ಮತ ತೋರಿದರೂ, ಐಕರು ಸುಮ್ಮನೆ ಕುಳಿತುಕೊಂಡಿರುವುದು!

ದೂರ ಪ್ರಾಚ್ಯದಲ್ಲಿ ನೆಲೆಯಾಗಿ ಮಾರ್ಷಡಿಸಿ, ದಕ್ಷಿಣ ಕೊರಿಯಕ್ಕೆ ನ್ಯೂಕ್ಲಿಯರ್ ಶಸ್ತ್ರಾಸ್ತ್ರ ಸರಬರಾಜು ಮಾಡಿದ ಐಕರು ಕ್ರುಶ್ಚೇವ್‌ರ ಕೊರಿಯಾ ಏಕೀಕರಣದ ಮಾತನ್ನು ಒಪ್ಪದಿದ್ದುದರಲ್ಲಿ ಆಶ್ಚರ್ಯವೆಲ್ಲಿ ಬಂತು.

ಡಲ್ಲೆಸರ 'ಜೋಗುಳ ಭಂಗ'!

"ಕ್ರುಶ್ಚೇವರ ಜೋಗುಳಕ್ಕೆ ಮೈಮರೆತು ಪಶ್ಚಿಮ ಮಲಗದಿರಲಿ-ಎಂದು ಜೋಗುಳ ಭಂಗ ಮಾಡಲು, ಡಲ್ಲೆಸರು ಮುಂದೆ ಬಂದಿದ್ದಾರೆ. ಕ್ರುಶ್ಚೇವರ ಶಾಂತಿ ಪತ್ರಗಳೆಲ್ಲಾ, ವಿಶ್ವವನ್ನು ಮೋಸಪಡಿಸಲು ಅಂತರ್‌ರಾಷ್ಟ್ರೀಯ ಕಮ್ಯೂನಿಸಂ" ಧೋರಣೆಯ ಒಂದಂಗವೆಂದು ಡಲ್ಲೆಸರು ಪ್ರತಿಪಾದಿಸಿದ್ದಾರೆ.

ಆದರೆ, ಅಮೆರಿಕಾದಲ್ಲಿ ಈ ಬಗ್ಗೆ ವಿರೋಧ ಪ್ರತಿಕ್ರಿಯೆಯೇ ಎದ್ದಿದೆ. 'ಶೃಂಗ ಸಮ್ಮೇಳನ' ಅಗತ್ಯವೆಂದು, ಅಂತರ್‌ರಾಷ್ಟ್ರೀಯ ಸಾರ್ವಜನಿಕ ಅಭಿಪ್ರಾಯಗಳನ್ನು ಸಂಗ್ರಹಿಸುವ ಸಂಸ್ಥೆಯೊಂದು ಇತ್ತೀಚೆಗೆ ನಡೆಸಿದ ಮತಗಣನೆಯಲ್ಲಿ ಪಶ್ಚಿಮದ ಎಲ್ಲಾ ರಾಷ್ಟ್ರಗಳಲ್ಲೂ ಬಹುಮತೀಯ ಅಭಿಪ್ರಾಯಪಡಲಾಗಿದೆ, ಬರ್ಲಿನ್ 81- ಪೇರಿಸ್ 64-ವಾಶಿಂಗ್ ಟನ್ ಚಿಕಾಗೊ 54-ರಷ್ಟು ಶೇಕಡಾವಾರುಪರವಾದ ಮತಗಳು, ಶೃಂಗಸಮ್ಮೇಳನದ ಅಗತ್ಯವನ್ನು ಒಪ್ಪಿದೆ.

ಶೃಂಗಸಮ್ಮೇಳನಾ ವಿರೋಧಿ ಡಲ್ಲೆಸ್, ಹಾಗೂ ಸ್ಟೇಟ್ ಇಲಾಖೆ "ದೊರೆ" ಇವರ ಬಂಧು ಅಲ್ಲೆನ್ ಡಲ್ಲೆಸ್ ಇವರಿಬ್ಬರಿಂದಲೇ ಅಮೆರಿಕಾದ ಪ್ರತಿಷ್ಠೆ ವಿಶ್ವದಲ್ಲಿ ಇಳಿಮುಖವಾಗುತ್ತಿದೆ. ಇವರಿಬ್ಬರೂ ಒಂದುಗೂಡಿ ಇತರ ರಾಷ್ಟ್ರಗಳಲ್ಲಿ ವಿದ್ರೋಹ ಕಾರ್ಯಗಳನ್ನು ನಡೆಸುತ್ತಿದ್ದುದೇ ಅಮೆರಿಕಾವನ್ನು ಇತರ ರಾಷ್ಟ್ರಗಳು ದ್ವೇಷಿಸುವಂತಾಗಿದೆ, ಎಂದು ಅಮೆರಿಕಾದ ಪತ್ರಿಕೆಗಳಲ್ಲಿ ಡಲ್ಲೆಸ್ ವಿರೋಧಿ ಲೇಖನಗಳು ಬರುತ್ತಿವೆ.

ಇವೆಲ್ಲವುದರ ಫಲವಾಗಿ ವಿಶ್ವಕ್ಕೆ 'ಆ್ಯಂಟಿ ಕಮ್ಯೂನಿಸಂ"ನ ಜೋಗುಳ ಹಾಡುತ್ತಿರುವ ಡಲ್ಲೆಸರ "ಜೋಗುಳ"ವೇ ನಿಲ್ಲುವ ಸಂದರ್ಭ ಬರಬಹುದೇ?

ಜೀವವಿಮಾ ಕಾರ್ಪೊರೇಷನಿನಲ್ಲಿ ಅಸಹಕಾರ ಚಳವಳಿ!

ದೇಶವಿಡೀ ಜೀವವಿಮಾ ಕಾರ್ಪೊರೇಷನಿನ ಫೀಲ್ಡ್ ಕೆಲಸಗಾರರು (ಇನ್‌ಸ್ಪೆಕ್ಟರ್ ಏಜೆಂಟರು ಮೊದಲಾಗಿ ಕಮಿಷನ್ ಅಲ್ಲದೆ ಸಂಸ್ಥೆಯಿಂದ ನೇರವಾಗಿ ಸಂಭಳಕ್ಕೆ ನೇಮಿತರಾಗಿ ಆಫೀಸು ಹೊರಗಡೆ ಕೆಲಸ ಮಾಡುವವರು) ತಮ್ಮ ದಿನನಿತ್ಯದ ಕೆಲಸ ಕಾರ್ಯಗಳನ್ನು ಬದಿಗೊತ್ತಿ, ಅಸಹಕಾರ ಚಳವಳಿಯನ್ನು ಆರಂಭಿಸಿರುತ್ತಾರೆ. ಫೆಬ್ರವರಿ 10ರಂದು ಆರಂಭವಾದ ಈ ಚಳವಳಿಯಲ್ಲಿ ನಗರದ ವಿಮಾ ಕಾರ್ಪೊರೇನಿನ ಫೀಲ್ಡ್ ಕೆಲಸಗಾರರು ಭಾಗವಹಿಸಿದ್ದಾರೆ.

ನೌಕರರ ಕೆಲಸದ ಸ್ಥಿತಿಗತಿಗಳ ಪರಿಶೀಲನೆಯಾಗಿ ಈ ಸಮಸ್ಯೆಗಳ ಬಗ್ಗೆ ಚರ್ಚೆ ನಡೆದು, ಎರಡನೆ ದ್ವಿಪಕ್ಷ ಸಮ್ಮೇಳನದಲ್ಲಿ, ಎಲ್ಲಾ ಸಮಸ್ಯೆಗಳ ಪರಿಹಾರ ಸೂಚಿಸಲಾಗುವ ತನಕ ಅಸಹಕಾರ ಚಳವಳಿಯು ಮುಂದುವರಿಯುವುದೆಂದು, ಸ್ಥಳೀಯ ನೌಕರರ ಸಂಘದ ಮುಖಂಡರು ತಿಳಿಸಿದ್ದಾರೆ.

ಈ ಚಳುವಳಿಯ ಅಂಗವಾಗಿ. ಬೆಂಗಳೂರು ಡಿವಿಷನಲ್ ಆಫೀಸಿನ ಬಳಿ, ಸಾಮೂಹಿಕ ಮೆರವಣಿಗೆ ಹಾಗೂ ಸಭೆ ಜರಗಿತ್ತು. ಶ್ರೀಮತಿ ಅಹಲ್ಯಾಭಾಯಿ ರಾಮಭದ್ರನ್‌ರವರು ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಸಂಘದ ಕಾರ್ಯದರ್ಶಿ ಶ್ರೀ ಸಿ. ಪಾಪಣ್ಣ ಹಾಗೂ ಉಪಾಧ್ಯಕ್ಷ ಶ್ರೀ ಎಂ. ಎಸ್. ಮೂರ್ತಿಯವರು, ನೌಕರರ ಕೇಳಿಕೆಗಳನ್ನು ವಿವರಿಸಿ ಮಾತಾಡಿದರು.

ಸಂಘದ ನಾಯಕರು ತಮ್ಮ ಭಾಷಣದಲ್ಲಿ, ವಿಮಾ ಕಂಪೆನಿಗಳ ರಾಷ್ಟ್ರೀಕರಣವಾದ ಮೇಲೆ, ಕಾರ್ಪೊರೇಷನಿನ 6000ಮಂದಿ ಫೀಲ್ಡ್ ನೌಕರರು ಒಟ್ಟು 1957ರಲ್ಲಿ ರೂ. 264 ಕೋಟಿಯಷ್ಟು ವ್ಯವಹಾರ ನಡೆಸಿದ್ದುದನ್ನು ಹೇಳುತ್ತಾ, 1955ರಲ್ಲಿ ಬರೇ ರೂ. 250 ಕೋಟಿಯಷ್ಟು ವ್ಯವಹಾರ ಖುಲಾಯಿಸಿರುವುದನ್ನು ಸರಕಾರದ ನೆನಪಿಗೆ ತಂದರು.

ಓದುಗರ ಓಲೆ

ಮಧುಗಿರಿ ಪಾವಗಡದಲ್ಲಿ ಪೋಲೀಸರ ದುರಾಡಳಿತ!

ಪಾವಗಡ ಪೋಲೀಸ್ ಸಬ್ ಇನ್ಸ್‌ಪೆಕ್ಟರು ಭೀಮರೆಡ್ಡಿಯವರು ಶನಿದೇವರ ಪರಿಷೆಯಲ್ಲಿ ಹೂ-ಹಣ್ಣು ಮಾರುವವರೆಲ್ಲಾ ತನ್ನ ಆಜ್ಞೆಯಿಲ್ಲದೆ ವ್ಯಾಪಾರ ಮಾಡಕೂಡದೆಂದು ತಿಳಿಸಿ ಪೋಲಿಗಳ ಗುಂಪನ್ನು ಬಳಸಿಕೊಂಡು ಬಡಬಗ್ಗರ ಮೇಲೆ ಬಿಟ್ಟು ಹೊಡಿಸಲು ಪ್ರಯತ್ನಪಟ್ಟಿದ್ದಾರೆ. ಪೋಲೀಸರನ್ನಲ್ಲ. ಇದು ಆಶ್ಚರ್ಯ—ಈ ಭೀಮರೆಡ್ಡಿಯವರಿಗೆ ಪೋಲಿಗಳು ಇಷ್ಟು ಆಪ್ತ ಬಂಧುಗಳೇ? ಈ ಪೋಲಿಗಳು ಕಳ್ಳಭಟ್ಟಿ ಸಾರಾಯಿ ಇಳಿಸುತ್ತಿರುವುದನ್ನು, ಜೂಜಾಡುವುದನ್ನು ಮುಂತಾದ ಅತ್ಯಾಚಾರಗಳನ್ನು ತಡೆಹಿಡಿಯುವ ಬದಲು ಪ್ರೋತ್ಸಾಹಿಸುತ್ತಿರುವ ಭೀಮರೆಡ್ಡಿಯರನ್ನು ದಂಡಿಸುವವರಿಲ್ಲವೇ? ಇದು ಸರಕಾರದ ಗಮನಕ್ಕೆ ಈಗಾಗಲೇ ಬಂದಿಲ್ಲವೇ? ಈ ಭೀಮರೆಡ್ಡಿಯವರು ಬಡಬಗ್ಗರ, ಪರಸ್ಥಳದವರ ಹಣ್ಣು—ಹೂ ಬುಟ್ಟಿಗಳನ್ನು ತುಳಿದು ಮಣ್ಣುಪಾಲು ಮಾಡಲು ಹುಕುಂ ಪಡೆದಿದ್ದಾರೆಯೇ? ಈಗಲಾದರೂ ಭೀಮರೆಡ್ಡಿಯವರು ತನ್ನ ನಡತೆಯನ್ನು ತಿದ್ದಿಕೊಂಡು, ಪೋಲಿಗಳನ್ನು ಎಚ್ಚರಿಸುವರೇ?

ಇದೇ ರೀತಿ ಮಧುಗಿರಿಯಲ್ಲಿ ಪೋಲೀಸರ ಹಾವಳಿ ಮತ್ತೊಂದು ರೂಪ ತಾಳಿದೆ. ಕಾಂಗ್ರೆಸ್ಸಿನವರ ಕಳ್ಳಭಟ್ಟಿಗಳನ್ನು ಬಿಟ್ಟ ದಫೇದಾರರಿಗೆ ಯಾವ ಶಿಕ್ಷೆಯೂ ಇಲ್ಲವೇ? ಇವನ್ನು ವಿಚಾರಿಸುವುದಕ್ಕೆ ಸಬ್ ಇನ್ಸ್‌ಪೆಕ್ಟರರಿಗೆ ಹಕ್ಕಿಲ್ಲವೇ? ದಫೇದಾರರಾದ ಕೃಷ್ಣಯಂಗಾರ್ ಮತ್ತು ವೆಂಕಟಪ್ಪನವರು ಬಸ್ಸುಗಳಲ್ಲಿ ಮಾಮೂಲುಗಳನ್ನು ತೆಗೆದುಕೊಳ್ಳಲು ಸರ್ಕಾರ ಅವಕಾಶ ಕೊಟ್ಟಿದೆಯೇ? ಇದನ್ನು ಸಬ್ ಇನ್ಸ್‌ಪೆಕ್ಟರು ಕೇಳಬಾರದೆ?

ಈ ಬಗ್ಗೆ ಮೇಲಿನ ಅಧಿಕಾರಿಗಳು ಬೇಗನೆ ವಿಚಾರಣೆ ನಡೆಸಿ ಸರಿಯಾದ ಕ್ರಮ ತೆಗೆದುಕೊಳ್ಳುತ್ತಾರೆಂದ ನಂಬೋಣವೇ?

ಇತಿ,

ಪಿ. ಎನ್, ರೆಡ್ಡಿ

ಮಧುಗಿರಿ

ಸೈಕಲ್ ತೆರಿಗೆ ರದ್ದುಪಡಿಸಲಿ

ಸ್ವಾಮಿ,

ಶಿವಮೊಗ್ಗ ನಗರದಲ್ಲಿ ಬಡವರ ವಾಹನವಾದ ಸೈಕಲ್ ತೆರಿಗೆಯನ್ನು ರದ್ದುಪಡಿಸಬೇಕೆಂದು ಈಗೆ 2-3 ವರ್ಷದಿಂದಲೂ ಒತ್ತಾಯಿಸಲಾಗುತ್ತಿದೆ. ಆದರೆ ಬಡವರ ವಾಹನವಾದ ಸೈಕಲ್ ತೆರಿಗೆಯನ್ನು ರದ್ದುಪಡಿಸಲು ಪೌರಸಭೆಯವರು ಹಿಂದು ಮುಂದು ನೋಡುತ್ತಿದ್ದಾರೆ.

ಸೈಕಲ್ ಬಡವರ ವಾಹನ. ಆದ್ದರಿಂದ ಸೈಕಲ್ ತೆರಿಗೆಯನ್ನು ಖಂಡಿತ ರದ್ದುಗೊಳಿಸಿ ಎಲ್ಲಾ ವರ್ಗದ ಜನರಿಗೂ ಅನುಕೂಲ ಮಾಡಿಕೊಡಬೇಕು.

— ಎನ್. ಗುರುರಾಜ್

ಶಿವಮೊಗ್ಗ

(೯ನೇ ಪುಟ ನೋಡಿ)

ಮನೆ ಮುರಿದ ಮಗ

(ಸಾಮಾಜಿಕ ನಾಟಕ)

ಮೂಲ: ಶ್ರೀ ತೋಪಿಲ್ ಭಾಸಿ. ಅನುವಾದ: ಪಂಡಿತ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ರಾಜು: (ನಗಾಡುತ್ತ ಸೋಮಪ್ಪನೊಡನೆ) ನಮ್ ಹಿರಿಯರು ಹೆಂಡ ಕುಡೀತಿದ್ರು - ನಂತ ಹಂಡೆ! ಅದ್ನೂರು ರಹಸ್ಯ ನಿನ ಅಗ್ತಿದ್ದಿಲ್ಲ. ಈಗ ಅದಿಲ್ಲ. ಈ ಬುಟ್ಟಿ ಸರಾಯಿ ಅಂತಾರಲ್ಲ— ಅದು ಒಂದು ತೊಟ್ಟು ಬಿದ್ರೆ ಸ್ವರ್ಗಕ್ಕೆ ಏರ್ಸಿ ಬಿಡುತ್ತೆ.

ಸೋಮಪ್ಪ: ಅಮ್ಮಾವ್ರ ಮುಂದೆ ಹಿಂಗ್ಯಾತಾಡೋದಿಕ್ಕೆ ನಾಚಿಕೇನೂ ಆಗಲ್ವೆ?

ರಾಜು: (ಪರಿಹಾಸ್ಯದ ಧಾಟಿಯಲ್ಲಿ) ಆಗುತ್ತೇಂತ ಇಟ್ಕೊ - ನಿಂಗೇನಾಗ್‌ಬೇಕೀಗ?

ಸೋಮಪ್ಪ: (ಗಂಭೀರವಾಗಿ) ಎಲ್ಲರನ್ನೂ ಸೋಯಿಸಿ ಒಬ್ಬ ಬದ್‌ಕೋದಾದ್ರೂ ಹೆಂಗೇಂತ?

ರಾಜು: ಹೆಂಗಂದ್ರೆ? ನಾನ್ ಬದ್‌ಕ್ತಾ ಇದೀನಲ್ಲ ಮತ್ತೆ?

ಸೋಮಪ್ಪ: ಹಿಂಗೆ ಎಷ್ಟ್ ದಿನಾಂತ ಇರೋದಿಕ್ಕಾಗುತ್ತೆ?

ರಾಜು: ಎಷ್ಟಾಗುತ್ತೋ ಅಷ್ಟು!

ಸೋಮಪ್ಪ: ಆಗ್ದಂಗಾದ್ರೆ?

ರಾಜು: (ಎಡಗೈಯಲ್ಲಿರುವ ಚೂರಿಯನ್ನು ಬಲಗೈಯಲ್ಲಿ ತೆಗೆದುಕೊಂಡು) ಅಂಥ ಕಾಲ ಬಂದ್ರೆ— ಈ ಚೂರಿ ಬಿಡ್ಸಿ ಇಲ್ಲಿ ಇಳ್‌ಸಿ ಬಿಡೋದು! (ಚೂರಿಯನ್ನೂ ತನ್ನ ಗಂಟಲನ್ನೂ ಮುಟ್ಟಿ ತೋರಿಸುತ್ತಾನೆ.)

ಸೋಮಪ್ಪ: (ಪರಿಹಾಸ್ಯ ಮಟ್ಟನಲ್ಲಿ) ಸಾಧ್ಯವಾದ್ರೆ ಸರೀನೆ! (ಗಂಭೀರವಾಗಿ) ಈ ಚಾಳೀನೆಲ್ಲ ಬಿಟ್ಟು, ಸ್ವಲ್ಪ ಮನೇ ಕಡೆ ನೋಡ್ಬಾರ್ದ? ತಾಯೀ-ತಂಗಿ - ...

ರಾಜು: (ನಡುವೆ ತಡೆದು, ಕೋಪದಿಂದ) ಸಾಕ್ಮಾಡ್ತೀಯೋ ಇಲ್ಲೊ—ನಿನ್ ಉಪದೇಶಾನ! ನಂಗೆ ಹೇಳೋಕೆ ನೀನ್ಯಾರೋ?

ಸೋಮಪ್ಪ: (ದೃಢವಾಗಿ) ನಾನೊಬ್ಬ ಕೆಲಸಗಾರ ನಿಮ್ ಮನೇ ಪಕ್ಕದಲ್ಲಿ ಇರುವವ. ಅಮ್ಮಾವ್ರು ಕರ್ದಾಗ ಓಡಿ ಬಂದು ಏನಾದ್ರೂ ಒಂದಿಷ್ಟು ಚಾಕ್ರಿ ಮಾಡಿ ಕೊಡೋದಿಕ್ಕೆ ನಾವೇ ಕೆಲ ಜನ ಇಲ್ಲಿರೋದು, ನೀವು ಅಣ್ಣ—ತಮ್ಮ ನಿಮ್ ನಿಮ್ ಪಾಡು ನೋಡ್ಕೊಂಡು ಹೋಗ್ತಿರ್‌ತೀರಿ!

ರಾಜು: (ಕೋಪದಿಂದ) ಮುಚ್ಕೋ ಬಾಯಿ! ನೀನ್ಯಾಕೆ ಬಂದ್ಯೋ ಇಲ್ಲಿ?

ಸೋಮಪ್ಪ: ಮನೆಯಲ್ಲಿ ಒಂದು ಕಾಳು ಅಕ್ಕೀನೂ ಇಲ್ಲಾಂತ—ತೆಂಗಿನ್‌ಕಾಯಿ ಕೊಯ್ದು ಅಂಗ್ಡೀ ಕಡೆ ಹೋಗಿ ಅಕ್ಕೀ ತಗೊಂಬಂದಿದೀನಿ! ನೀವು ಬಂದು ಅಮ್ಮಾವ್ರನ್ನ ಸತಾಯಿಸ್ತೀರಿ-ಅಡಿಗೇ ಯಾಕೆ ಆಗ್ಲಿಲ್ಲಾಂತ!

ರಾಜು: (ಗಟ್ಟಿಯಾಗಿ) ನಡೀತೀಯೋ ಇಲ್ಲೋ ಇಲ್ಲಿಂದ? ನಾಯಿ!

(ಪಾರ್ವತಮ್ಮ ಪಕ್ಕನೆ ಬರುತ್ತಾಳೆ.)

ಪಾರ್ವತಮ್ಮ: ಸೋಂಪ! ನೀನೇನೂ ಮಾತಾಡ್ಬೇಡಪ್ಪಾ.

(ರಾಜುವಿನ ಕಡೆಗೆ ತೋರಿಸಿ) ಅವ್‌ನಿಗೆ ಬೋಧಾನೇ ಇಲ್ಲ.

ಸೋಮಪ್ಪ: ನಾನ್ ಮಾತಾಡೋದಿಲ್ಲ. ಯಾರು ಹೆಂಗಿದ್ರೆ ನಂಗೇನಂತೆ?

ರಾಜು: (ತಾಯಿಯ ಕಡೆಗೆ ನೋಡಿ, ಕೋಪದಿಂದ) ಅದಿರ್ಲಿ—ಅಮ್ಮ ಈವತ್ತು ದೊಡ್ ಮಗನ ಮನೆಗೆ ಹೋಗಿದ್ಯಾ?

ಪಾರ್ವತಮ್ಮ: ಹೋಗಿದ್ದೆ.

ರಾಜು: ಯಾಕೆ?

ಪಾರ್ವತಮ್ಮ: ದೊಡ್ ,ಮಗಾಂತ.

ರಾಜು: ಹೋಗಿ ಏನಾಯ್ತು?

ಪಾರ್ವತಮ್ಮ; (ವಿಷಾದದಿಂದ) ಆಗೋದೇನು? ನಿನ್ನ ಅಣ್ಣ ಅಲ್ವೆ ಅವ?

ರಾಜು; ಅವನ ಗ್ರಾಮಸೇವಾ ಸಂಘಕ್ಕೆ ಚಂದಾ ಕೊಡೋದಿಕ್ಕೆ ಒಪ್‌ಕೊಂಡೆ ಅಲ್ವೆ?

ಪಾರ್ವತಮ್ಮ: ಇಲ್ಲ.

ರಾಜು: ರೊಕ್ಕ ಇಲ್ಲದ್ರಿಂದ ಕೊಡೋದಿಕ್ಕೆ ಆಗೋಲ್ಲಾಂತಲ್ವೆ ನೀ ಹೇಳಿದ್ದು?

ಪಾರ್ವತಮ್ಮ: (ಸಿಡುಕಿನಿಂದ) ಹಾಗಂದೇಂತಿರ್‌ಕೊ! ಏನಾಯ್ತೀಗ? ಯಾರ್ಯಾರು ಹೇಳಿದ್ದನ್ನ ಕೇಳ್ಕೊಂಡು ನನ್ನ ದಬಾಯಿಸ್ಬಂದಾಗ್ಲೆ!

ರಾಜು: ಯಾರ್ಯಾರು ಹೇಳಿದ್ದಿಲ್ಲ. ನಿನ್ನ ದೊಡ್ ಮಗನ ದಲ್ಲಾಳಿ ಇದಾನಲ್ಲಾ—ನಾರ್ಣಪ್ಪಾಂತ ಒಬ್ಬ ನಾಯಿ—ಅವನಂದಿದ್ದು. ದಾರಿಯಲ್ಲಿ ನಿಂತ್‌ಕೊಂಡು ಯಾರತ್ರನೋ ಕೊಚ್ಚಿಕೊಳ್ತಿದ್ದ. ನನ್ನ ಕಂಡಾಗ—ಅಮ್ಮ ಚಂದಾ ಕೊಡೊದಿಕ್ಕೆ ಒಪ್ಕೊಂಡಿದಾರೇಂತಂದ. ವಸೂಲಿಗೆ ಈವತ್ತೆ ಬಾಂತಂದು ಈ ಕಡೆ ಬಂದೆ.

ಪಾರ್ವತಮ್ಮ: ನಾನೆಲ್ಲಿಂದ ಕೊಡ್ಲಿ? ಇಲ್ಲಿ—ಅಕ್ಕಿ ತರೋದಿಕ್ಕೂ ದುಡ್‌ಗ ಚಾಪೆ ಹೊಸೆದಾಗ್ಬೇಕು!

ರಾಜು: ಅದ್‌ಕೇನೆ ನಾನ್ ಬಂದಿರೋದು-- ಅವ ವಸೂಲಿಗೆ ಬರ್‍ವಾಗ ನಾನೇ ಇರ್ಬೇಕೂಂತ. ನಿನ್ ಮುಂದೇನೆ ಕಪಾಲಕ್ಕೆ ನಾಲ್ಕು ಚಂಡಾ ಕೊಟ್ಟು ಕಳ್ಸೋಣಾಂತಿದೀನಿ!

ಪಾರ್ವತಮ್ಮ: (ಭಯದಿಂದಲೂ ಕೋಪದಿಂದಲೂ) ಇಲ್ಲಿ ನಿನ್ನ ಹೊಡ್‌ದಾಟ ಏನೂ ಬೇಕಾಗಿಲ್ಲ—ನಾನೀಗ್ಲೆ ಹೇಳ್ತೀನಿ ನೋಡು!

ಸೋಮಪ್ಪ: (ರಾಜುವಿನೊಡನೆ) ಅಗತ್ಯ ಇಲ್ಲದ ಗಲಾಟೆ ಯಾಕೆ ಮಾಡ್ತೀರಿ? ಇಲ್ಲಿ ನೀವೇನಾದ್ರೂ ಮಾಡಿದ್ರೆ—ಅಮ್ಮಾವ್ರಿಗೆ ತೊಂದ್ರೆ ಮತ್ತೆ.

ರಾಜು: (ಕೋಪದಿಂದ ಗಟ್ಟಿಯಾಗಿ) ಯಾರೋ ನೀನು—ನಂಗೆ ಬುದ್ಧಿ ಹೆಳೋಕೆ? ಆಚೆ ನಡೀತೀಯೋ...ಏನಾದ್ರೂ ಬೇಕೋ - ನನ್ ಕೈಯಿಂದ?

ಪಾರ್ವತಮ್ಮ: (ರಾಜುವಿನೊಡನೆ) ಅವನನ್ನ ಅನ್ಬೇಡ ನೋಡು—ರಾಜು! ನನ್ ಕಷ್ಟ ನೋಡಿ ಒಂದಿಷ್ಟು ಸಹಾಯಾ ಮಾಡ್ತಿರ್‌ತಾರೆ ಈ ಹುಡುಗ್ರು. ಅವರನ್ನು ಹೊಡ್ಡು ಓಡ್ಸಿ ಬುಟ್ಟೀಂದ್ರೆ ನಾನೂ ಶಾರದೇನೂ ಬಾವೀಗೆ ಬೀಳ್ಬೇಕಾಗುತ್ತೆ ಮತ್ತೆ!

ಸೋಮಪ್ಪ: ಅಮ್ಮಾವ್ರನ್ನ ಎಣ್ಸೆ ನಾವಿದೆಲ್ಲ ನುಂಗೋತೇವೆ.

ರಾಜು: (ಕೋಪದಿಂದ) ಅಲ್ದಿದ್ರೆ?

ಸೋಮಪ್ಪ: ಅಲ್ದಿದ್ರೆ? ಅದೀಗ ಹೇಳೋದಿಲ್ಲ.

ಶಾರದೆ: (ಒಳಗಿನಿಂದ) ಅಮ್ಮಾ! ಗಂಜಿ ಆಯ್ತು.

ಪಾರ್ವತಮ್ಮ: (ಒಳಗಡೆ ನೋಡಿ) ಒಂದ್ ತಟ್ಟೆಯಲ್ಲಿ ರಾಜಣ್ಣಂಗೆ ಬಡ್ಸಿಡು. (ಸೋಮಪ್ಪನೊಡನೆ) ಹೋಗಪ್ಪ ಸೋಂಪ—ಹಿತ್ಲಿಂದ ಒಂದೆಲೆ ತಗೊಂಬಾ - ನಿಂಗೂ ಬಡ್ಸಿ ಬಿಡ್ತೀನಿ.

(ಸೋಮಪ್ಪ ಹೋಗುತ್ತಾನೆ.)

ಪಾರ್ವತಮ್ಮ: ನಿನ್ನಿಂದ ನಾನು ಕೆಟ್ಟೆ ರಾಜೂ!

ರಾಜು: ನಾನು ಪೋಲಿ! ಅದ್ರೆ ನಿನ್ ದೊಡ್ಡ ಮಗನಂಗೆ ಎಲ್ರಿಗೂ ಮೋಸಾಮಾಡಿ ಭಲೇ ಮನುಷ್ಯಾಂತ ನಾ ಹಾರಾಡ್ತಿಲ್ಲ. ಅವ ಇದ್ದಾನಲ್ಲಾ—ನಿನ್ನನ್ನು ಶಾರದೇನ್ನೂ ನೋಡ್ಕೊಳ್ಳೋದಿಕ್ಕೆ!

ಪಾರ್ವತಮ್ಮ: ಬೇರೆಯವರ ತಪ್ಪು ಹೇಳ್‌ಬೇಕಾದ್ರೆ—ನೀನ್ ಒಳ್ಳೆಯನಾಗಿರ್ಬೇಕು.

ರಾಜು: ನಾ ಕಿಲಾಡಿಂತ ಒಪ್ಕೊಂಡೆ! ಒಳ್ಳೆಯವಾಂತ ಅನ್ನಿಸಿಕೊಂಡಿದಾನಲ್ಲಾ—ಅವ ಮಾಡಿರೋದೇನು?

ಪಾರ್ವತಮ್ಮ: ಸ್ವಂತ ಕಾರ್ಯದಲ್ಲಾದ್ರೂ ಅವ ಬುದ್ಧಿವಂತ. ನೀನೆಲ್ಲ ಮೂರ್‌ಕಾಸಿಗೆ ಮಾರಿ ಮುಗಿಸ್ದೆ.

ರಾಜು: (ಕೋಪದಿಂದ) ನಂಗೆ ಕೋಪಾ ಬರಿಸ್‌ಬೇಡಮ್ಮಾ—ಹೇಳ್ತೀನಿ.

ಪಾರ್ವತಮ್ಮ: (ಸಿಡುಕಿನಿಂದ) ಓ ಹೋ! ಕೋಪಾ ಬಂದ್ರೆ ಇಲ್ಲಿರೋ ಮುಡಿಕೇನೆಲ್ಲಾ ಒಡ್ಡಾಕ್ತಿದ್ದೀಯೇನೊ? ಅಲ್ಲ ನಂಗೇ ಎರಡ್ ಏಟು ಕೊಟ್ರೂ ಕೊಟ್ಟೀಯಾ!

ರಾಜು: ಈ ಕುಟುಂಬಾನ ಹಾಳ್ಮಾಡಿ ತಾನು ಹಣ ಸಂಪಾದಿಸ್ಕೊಂಡ—ನಿನ್ ದೊಡ್ಡ ಮಗ! ಹತ್ತು ವರ್ಷ ಕಾರ್‌ಭಾರು ನಡ್ಸಿ—ಆಸ್ತಿಯೆಲ್ಲ ತನ್ನ ಹೆಸ್ರಿಗೆ ಮಾಡ್ಕೊಂಡ! ಅದನ್ನೆ ಹಾಯಾಗಿ ಕೆಂಡು ತಿನ್‌ಬಹುದೂಂತ ಎಣಿಸ್ದಾನೆ. ಅದ್ ಹೆಂಗೆ ತಿನ್ತಾನೋ ನೊಡ್ತೀನಿ!

ಪಾರ್ವತಮ್ಮ: ನೀನೂ ಅವನೂ ಹೊಡ್ದಾಡಿ ಸಾಯೋದನ್ನ ನೋಡೋದೊಂದು ಉಳ್ದಿದೆ ನಂಗೆ! ದೇವ್ರು ನನ್ನ ಕರೆಸೋದೂ ಇಲ್ವಲ್ಲಾ!

(ನಾರಾಯಣಪ್ಪ ಪ್ರವೇಶಿಸುತ್ತಾನೆ.)

ನಾರಾಯಣಪ್ಪ: (ರಾಜುಗೆ) ನಮಸ್ಕಾರ ರಾಜಣ್ಣ! ತಾಯೀ ಮಗಾ ಜಗಳಾಡ್ತಾ ಇದ್ದಂಗಿದೆ?

ಪಾರ್ವತಮ್ಮ: (ರಾಜು ಏನು ಮಾಡಿಬಿಟ್ಟಾನೋ ಎಂಬ ಭಯದಿಂದ, ರಾಜುವನ್ನೊಮ್ಮೆ ನೋಡಿ, ನಾರಾಯಣಪ್ಪನೊಡನೆ) ನೀನ್ಯಾಕೆ ಬಂದ್ಯಪ್ಪ ಈ ಹೊತ್ನಾಗ? (ಬೇಡಿಕೊಳ್ಳುವಂತೆ) ಹೋರಟ್ಹೋಗಪ್ಪಾ ತಮ್ಮ! ನಾವೇನೋ ಮಾತಾಡ್ತಿದೀವಿ.

(ರಾಜು ನಾರಾಯಣಪ್ಪನನ್ನೇ ಕೋಪದಿಂದ ನೋಡುತ್ತಿದ್ದಾನೆ.)

ನಾರಾಯಣಪಪ್ಪ: ರಾಜಣ್ಣ ಕರ್‌ದ್ರೂಂತ ಬಂದೆ— ಹೋಗೂಂತಂದ್ರೆ ಹೋಗ್ಬಿಡ್ತೀನಿ ಮೆಲ್ಲಗೆ ಹೋಗಿ ರಾಜು ಕುಳಿತಿದ್ದ ಬೆಂಚಿನ ತುದಿಯಲ್ಲಿ ಕುಳಿತುಕೊಳ್ಳುತ್ತಾನೆ)

ರಾಜು: (ಗದರಿಸುವ ಸ್ವರದಲ್ಲಿ) ಏನ್‌ಲೇ ಕೂತ್ಕೋಂತ ಯಾರಂದ್ರೋ ನಿಂಗೆ?

ನಾರಾಯಣಪ್ಪ: (ಸ್ವಲ್ಪ ಗಾಬರಿಯಾದರೂ ತೋರಿಸಿಕೊಳ್ಳದೆ) ಈ ಮನೆಯಲ್ಲಿ ನಂಗೆ ಯಾರೂ ಉಪಚಾರ ಮಾಡ್ಬೇಕೆ?

(ಬೆರಳಿಂದ ತಿವಿಯುವುದಕ್ಕೆ ಕೈಮುಂದೆ ಮಾಡಿ ಪಕ್ಕನೆ ಹಿಂದೆ ಎಳೆದುಕೊಳ್ಳುತ್ತಾನೆ.) ಏನಂತೀರಾ—

ರಾಜು: ಉಪಚಾರ ಮಾಡ್ತೀನಿ! (ಗಟ್ಟಿಯಾಗಿ) ಎದ್ದು ನಿಲ್ಲೋ—ಬೇವರ್ಸಿ!

ಪಾರ್ವತಮ್ಮ: (ರಾಜುವನ್ನು ತಡೆಯುವಂತೆ) ರಾಜೂ?—

(ನಾರಾಯಣಪ್ಪ ಗಲಿಬಿಲಿಯಾಗುತ್ತಾನೆ.)

ರಾಜು: (ಗಟ್ಟಿಯಾಗಿ) ಏಳ್ತಿಯೋ ಇಲ್ಲೊ?

(ನಾರಾಯಣಪ್ಪ ಮೆಲ್ಲಗೆ ಏಳುತ್ತಾನೆ)

ಪಾರ್ವತಮ್ಮ: ರಾಜೂ—

ರಾಜು: (ಪಾರ್ವತಮ್ಮನೊಡನೆ) ನೀ ಒಳಗೆ ಹೋಗು!

ನಾರಾಯಣಪ್ಪ: (ಗಲಿಬಿಲಿಯಿಂದ) ರಾಜಣ್ಣ - ನಾ

ರಾಜು: ಬಾಯಿ ಮುಚ್ಕೋ—ಹಲ್ಕಟ್ ನಾಯಿ!

ನಾರಾಯಣಪ್ಪ: (ಹೆದರಿಕೊಂಡು) ನನ್ನ-ಬರ್ಲಿಕ್ಕೆ—ಹೇಳಿದ್ದು.

ರಾಜು: (ನಡುವೆ ಬಾಯಿ ಹಾಕಿ) ಚಂದಾ ಕೊಡೋದಿಕ್ಕೆ—ನಿನ್ನ ಕೋತೀ ಮೂತಿಗೆ! ಅಲ್ಲೋ—ಕೊಡದಿದ್ರೆ ಕಿಟ್ಟು ಮನೆಯಿಂದ ಚೊಂಬು ಚರಿಗೆ ಎಲ್ಲಾ ಹೊತ್ಕೊಂಡು ಹೋದಂಗೆ ನಮ್ ಮನೆಯಿಂದ್ಲೂ ಒಯಿತೀಯೇನೋ? ಬಹಿಷ್ಕಾರ ಹಾಕಿಸ್ತಿಯೇನೊ? ಬೊಗಳೋ ಸನ್ಮಗನೆ!

ನಾರಾಯಣಪ್ಪ: (ಪಾರ್ವತಮ್ಮನ ಕಡೆ ನೋಡಿ) ನಾ—ಹೋಗ್ತೀನಮ್ಮ!

ರಾಜು: ಚಂದ ತಗೊಂಡ್ ಹೋಗೋ! (ಗಟ್ಟಿಯಾಗಿ) ಸೋಂಪಾ ಅಲ್ಲಿಂದ ಒಂದು ಕಟ್ಟಿಗೆ ತಗೊಂಬಾ— ಈ ನಾಯಿಗೆ ಚಂದಾ ಕೊಡೋದಕ್ಕೆ (ಏಳುತ್ತಾನೆ)

ಪಾರ್ವತಮ್ಮ: ರಾಜೂ! ಕುಂತ್ಕೊ ಅಲ್ಲೆ.

ನಾರಾಯಣಪ್ಪ: ನಾ—ಹೋಗಿಬಿಡ್ತೀನಿ!

ರಾಜು: ಅದೆಂಗೆ ಹೋಗ್ತೀಯಾ ನೋಡ್ತೀನಿ (ಮುಂದೆ ಬರ್ತಾನೆ)

ಪಾರ್ವತಮ್ಮ: (ರಾಜುವನ್ನು ತಡೆದು, ನಾರಾಯಣಪ್ಪನೊಡನೆ) ನೀನೊಮ್ಮೆ ಹೋಗಿ ಬಿಡಪ್ಪ—ಇಲ್ಲಿಂದ (ಗಟ್ಟಿಯಾಗಿ) ಸೋಂಪಾ ಏ ಸೋಂಪಾ ಬೇಗ ಬಾರೋ ಈ ಕಡೆ!

(ನಾರಾಯಣಪ್ಪ ಹಿಂದೆ ಹಿಂದೆ ಸರಿಯುತ್ತ ಮರೆಯಾಗುತ್ತಾನೆ. ಮತ್ತೊಂದು ಕಡೆಯಿಂದ ಸೋಮಪ್ಪ ಪ್ರವೇಶಿಸುತ್ತಾನೆ. ಕೈಯಲ್ಲೊಂದು ಎಲೆ ಇದೆ.)

ಪಾರ್ವತಮ್ಮ: (ಅಳುತ್ತ) ನಾ ಸತ್ರೆ ಹೊರೋದಕ್ಕೂ ಜನ ಸಿಗ್ಬಾರ್ದೂಂತ ಹಿಂಗೆ ಮಾಡ್ತಿದಿಯೇನೋ ರಾಜೂ?

ರಾಜು: ನೀ ಸತ್ರೆ ಯಾರೂ ಬರ್ಬೇಕಾಗಿಲ್ಲ. ನಾನೇ ಒಂದು ಗುಳಿ ತೋಡಿ ಇಟ್ಟಿದೀನಿ. ಹೊರೋದಿಕ್ಕೆ ನಾನೊಬ್ಬನೆ ಸಾಕು.

ಪಾರ್ವತಮ್ಮ: (ಅಳುತ್ತ) ದೇವರೇ! ಒಳ್ಳೆಯವರನ್ನೆಲ್ಲಾ ಕರೆಸಿಕೊಳ್ತೀ—ನನ್ನನ್ಯಾಕೆ ಬಿಟ್ಟಿದೀಯಾ ಪರಮಾತ್ಮಾ!

ರಾಜು: ಕಾಲನನ್ನ ಮೊಖತಾ ನೋಡಿ ಏರ್ಪಾಡು ಮಾಡಿದೀನಿ—ನಮ್ಮಮ್ಮನ್ನ ಒಯ್‌ಬಾರ್ದೂಂತ!

ಸೋಮಪ್ಪ: ಇದೆಂಥಾ ಆಟ ಇದು? ಎಲ್ಲದಕ್ಕೂ ಒಂದು ಮಿತಿ ಇರ್ಬೇಕು!

ರಾಜು: ಅವನ ಹಿಂದೆ ನೀನೂ ಓಡ್ತೀಯೇನೊ? ಅಲ್ಲಾ ಬಾಯಿ ಮುಚ್ಕೊಂಡು ಬಿದ್ದಿರ್ತಿಯೊ?

ಸೋಮಪ್ಪ: ಓಡೋದೂ ಇಲ್ಲ—ಬಾಯೀನೂ ಮುಚ್ಕೋದಿಲ್ಲ.

ಪಾರ್ವತಮ್ಮ: ಸೋಂಪಾ! ನಿಂಗೂ ತಿಳಿಯೋದಿಲ್ವೆ? ನೀನ್ ಸುಮ್ನಿರಪ್ಪಾ!

ರಾಜು: ನೀ ಓಡ್ಹೋಗೋದಿಲ್ಲ!

ಸೋಮಪ್ಪ: (ಗಟ್ಟಿಯಾಗಿ) ಇಲ್ಲ.

ರಾಜು: ಹಂಗಾದ್ರೆ ಅದೊಮ್ಮೆ ನೋಡೇಬಿಡಾನ (ಮುಷ್ಟಿ ಬಿಗಿದು ಸೋಮಪ್ಪನ ಹತ್ತಿರ ಹೋಗುತ್ತಾನೆ.)

ಸೋಮಪ್ಪ: (ಧೈರ್ಯವಾಗಿ ನಿಂತು) ಮೈಗೆ ಕೈಹಾಕಿದ್ರೆ ಜಾಗ್ರತೆ!

(ಪಾರ್ವತಮ್ಮ ಓಡಿ ಅವರಿಬ್ಬರ ನಡುವೆ, ರಾಜುನ ಕಡೆ ಮುಖಮಾಡಿ ನಿಲ್ಲುತ್ತಾಳೆ)

ರಾಜು: (ಪಾರ್ವತಮ್ಮನೊಡನೆ ನೀ ಸರಿ) ಆ ಕಡೆ!

ಸೋಮಪ್ಪ: ನೀವು ಸರೀರಿ ಅಮ್ಮಾವ್ರೆ ಏನ್ಮಾಡ್ತಾರೇಂತ ನೋಡ್ತೀನಿ!

ಪಾರ್ವತಮ್ಮ: (ದುಃಖವೂ ಕೋಪವೂ ಒಟ್ಟಿಗೆ ಉಕ್ಕಿ ಬಂದು, ನಡುಗುವ ಸ್ವರದಿಂದ ರಾಜುವಿನೊಡನೆ ಹೇಳುತ್ತಾಳೆ) ನಡಿ ಇಲ್ಲಿಂದ! ನಿಂಗದ್ದಿದ್ದು—ನಡೀಂತ!

ರಾಜು: (ತಾಳಲಾರದ ಕೋಪದಿಂದ ತಾಯಿಯ ಮುಖ ನೋಡುತ್ತ) ಹುಂ! ನಂಗೆ ಅಡ್ಡ ಬರ್ಬೇಡ!

ಪಾರ್ವತಮ್ಮ: (ಹಿಂದಿನಂತೆಯೆ) ಇಲ್ಲ— ನಾನಿನ್ನು ತಾಳೋದಿಲ್ಲ—ನಾನೂ ನನ್ ಮಗಳೂ ದಾರೀಲಿ ಬಿದ್ದು ಸಾಯ್ಬೇಕೂಂತ ನೀ ಹಿಂಗೆ ಮಾಡ್ತಿದೀಯ—ನಿನ್ನಿಂದಾಗಿ ಒಂದ್ ಹುಡ್‌ಗೀ ಬಾಳ್ವೆ ದಿಕ್ಕಿಲ್ಲದಂಗಾಗ್ತದೆ. ನಾನಿನ್ನು ಸಹಿಸೋಕಾಗಲ್ಲ—ನೀನು ಇನ್ನು ಈ ಮನೆಗೆ ಬರಕೂಡ್ದು!

ರಾಜು: (ಮುಖಕ್ಕೆ ಹೊಡೆದಂತಾಗಿ) ಹೇಂ?

ಪಾರ್ವತಮ್ಮ: ಹೇಂನೂ ಬೇಡ—ಹಾಂನೂ ಬೇಡ! ಇದ್ದಿದ್ದನ್ನೆಲ್ಲ ಮಾರಿ ಮುಗ್ಸಿದಿ—ಕುಡ್ದು ಬೇವಾರ್ಸಿಯಾಗಿ ಅಲೆದಾಡ್ತಿ—ಕಂಡವರಿಗೆ ಹೊಡೀತಿ—ಕಂಡವರಿಂದ ಏಟ್ ತಿನ್ತಿ. ಮನೇ ಕಡೆ ನೋಡಂಗಿಲ್ಲ! ಅದ್ರೂನೂ— ನೀ ಬಂದ್ರೆ ನಾನೂ ನಿನ್ ತಂಗೀನೂ ನೀರ್ ಕುಡ್ದು ನಿಂಗೆ ಕೂಳ್ ಹಾಕ್ಬೆ! ನಿನ್ನಿಂದ ನಾ

(೩ನೇ ಪುಟ ನೋಡಿ)

ಯಶವಂತಪುರದ ಪಾರ್ಟಿ ಕಾರ್ಯಕರ್ತರ ಮೇಲೆ ಪೋಲೀಸರು—ಪೋಲಿಗಳ ಧಾಳಿ

ಬೆಂಗಳೂರು ಉತ್ತರ ತಾಲೂಕಿನಲ್ಲಿ ಕಳೆದ ಬಾರಿ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಉಮೇದುವಾರರನ್ನು ನಿಲ್ಲಿಸಿತ್ತು. ಆವಾಗಿನಿಂದಲೇ ಕಾಂಗ್ರೆಸ್ಸಿಗರು ತಮ್ಮ ಗೂಂಡಾ ಹಸ್ತಕರಿಂದಲೂ, ಪೋಲೀಸರ ಸಹಾಯದಿಂದಲೂ ಅಲ್ಲಲ್ಲಿ ನಮ್ಮ ಪಾರ್ಟಿ ಕಾರ್ಯಕರ್ತರ ಮೇಲೆ ಧಾಳಿಗಾರಂಭಿಸಿರುವುದು ನಮಗೆ ತಿಳಿದುಬಂದಿದೆ.

ಈ ಹಿಂದೆ ಜಾಲಹಳ್ಳಿಯಲ್ಲಿ ಕೆಲವು ಪಾರ್ಟಿ ಹಿತೈಷಿಗಳಿಗೆ ಹೊಡೆದು, ಅಲ್ಲಿ ಹೊಟೇಲು ಪುಡಿಮಾಡಿದ ವರದಿಯನ್ನು 'ಜನಶಕ್ತಿ'ಯಲ್ಲಿ ಹಿಂದೆಯೇ ಹಾಕಲಾಗಿತ್ತು. ಆ ಮೇಲೆ ಕೆಲವು ತಿಂಗಳೀಚೆಗೆ, ಕಳೆದ ಚುನಾವಣೆಯಲ್ಲಿ ರಿಸರ್ವ್ ಸ್ಥಾನಕ್ಕೆ ಕಮ್ಯೂನಿಸ್ಟ್ ಪಾರ್ಟಿಯ ಉಮೇದುವಾರರಾಗಿ ಸ್ಪರ್ಧಿಸಿದ್ದ, ಶ್ರೀ. ಆನಂದರವರ ಮೇಲೆ ಗೂಂಡಾಗಳ ಧಾಳಿ ನಡೆದು ಅವರು ತೀವ್ರ ಜಖಂ ಹೊಂದಿದ್ದರು. ಚೂರಿಯ ಇರಿತದಿಂದ, ಬದುಕು-ಸಾವಿನ ನಡುವೆ ತೊಳಲಾಡಿದ್ದರು. ಇದೀಗ ಯಶವಂತಪುರವು ಈ ಎಲ್ಲಾ ಗೂಂಡಾಗಿರಿಗೆ ಕೇಂದ್ರವಾದಂತಿದೆ. ಇದರ ಸುತ್ತಮುತ್ತಲ ಹಳ್ಳಿಗಳಲ್ಲಿ ರೈತಸಂಘದ ಚಳವಳಿಯು ಬೆಳೆಯುತ್ತಿದ್ದು, ಅಲ್ಲಿ ರೈತರನ್ನು ಸಂಘ ಸೇರದಂತೆ ಪೋಲೀಸರು ಹೆದರಿಸುತ್ತಿದ್ದಾರೆ. ಆದರೆ ಇದಕ್ಕಿಂತಲೂ ಮಿಗಿಲಾಗಿ ಯಶವಂತಪುರದಲ್ಲಿ ಟ್ರೇಡ್‌ಯೂನಿಯನ್ ಕಾರ್ಯಕರ್ತರ ಮೇಲೂ, ಪಾರ್ಟಿ ಸಂಘಟಕರ ಮೇಲೂ, ಪೋಲೀಸರೂ ಹಾಗೂ ಅಲ್ಲಿನ ಪಂಚಾಯತ್ ಸದಸ್ಯರ ನೇತೃತ್ವದಲ್ಲಿ ಗೂಂಡಗಳೂ ಧಾಳಿ ನಡೆಸುವ ನಿತ್ಯ ಅಭ್ಯಾಸವನ್ನು ಮಾಡಿದಂತಿದೆ.

ಇದೇ ತಾ 29—1-58ರಂದು, ಮೈಸೂರು ಕಮರ್ಶಿಯಲ್ ಯೂನಿಯನ್ ಎಂಪ್ಲಾಯೀಸ್ ಸ್ವಯಂಸೇವಕ ದಳದ ನಾಯಕರಾದ ವೆಂಕಟಪ್ಪ ಎಂಬವರನ್ನು ಪೋಲೀಸರು ಅಡ್ಡಗಟ್ಟಿ, ಥಳಿಸಿದ ವರದಿಯಾಗಿದೆ. ಇವರ ತಲೆ ಭುಜ ಮೊದಲಾಡೆಡೆ ತೀವ್ರಗಾಯವಾಗಿದೆ. ಅಲ್ಲದೆ ಮೆಜಿಸ್ಟ್ರೇಟರ ಅಪ್ಪಣೆ ಇಲ್ಲದೆ, ಅಕ್ರಮವಾಗಿ ಮನೆಹೊಕ್ಕು ಮನೆಯವರಿಗೂ ಹೊಡೆದ ಪೋಲೀಸರ ದುರ್ವರ್ತನೆ ಮಿತಿಮೀರಿದೆ.

ಈ ಗೂಂಡಾಗಿರಿ ನಡೆದ ಕೆಲವೇ ದಿನಗಳಲ್ಲಿ ನಮ್ಮ ಯಶವಂತಪುರ ಶಾಖೆಯ ಕಾರ್ಯಕರ್ತರಾದ ಶ್ರೀ ವೆಂಕಟರಾಜು ಮತ್ತವರ ತಮ್ಮ ಕೃಷ್ಣಪ್ಪರೆಂಬವರ ಮೇಲೆ ಪೋಲಿಗಳು ಬಿದ್ದು ಅವರ ತಲೆ ಒಡೆದು ಹಾಕಿದ್ದಾರೆ. ತಲೆ ಒಡೆದು ರಕ್ತ ಸೋರುತ್ತಿದ್ದರೂ, ಪೋಲೀಸರು ಇವರ ದೂರು ತೆಗೆದುಕೊಳ್ಳದೆ, ಗಂಟೆಗಟ್ಲೆ ಕಾಯಿಸಿದ್ದಾರೆ. ಈ ಆಕ್ರಮಣದ ಹಿಂದೆ ಯಶವಂತಪುರದ ಪಂಚಾಯತು ಸದಸ್ಯರ ಕೈವಾಡವಿದೆಯೆಂದು ಹೇಳಲಾಗಿದೆ.

ಪೋಲಿಗಳ ಗೂಂಡಾಗಿರಿಯೇ ಆಗಲೀ ಪೋಲೀಸರ ದಬ್ಬಾಳಿಕೆಯೇ ಆಗಲಿ ನಮ್ಮ ಪಾರ್ಟಿ ಕಾರ್ಯಕರ್ತರನ್ನು ಬೆದರಿಸಲು ಶಕ್ತವಾಗಿಲ್ಲ, ಇದರಿಂದ ಬರೇ ನಾಗರಿಕರ ಶಾಂತಿ ಕದಡಲ್ಪಡುತ್ತದೆ ಎಂಬ ಸತ್ಯಾಂಶವನ್ನು ತಿಳಿದು, ಪೋಲೀಸುಖಾತೆ ಯಶವಂತಪುರದಲ್ಲಿ ಶಾಂತಿ ಹಾಗೂ ಕಾನೂನು ಪರಿಪಾಲನೆ ಮಾಡಲು ಮುಂಬರಲಿ. ಈ ಅತಿಕ್ರಮ-ಅತ್ಯಾಚಾರಗಳನ್ನು ನಿಲ್ಲಿಸಲಿ.

ನಗರದ ಕಾರ್ಪೊರೇಷನ್:

ಸಂಯುಕ್ತ ನಾಗರಿಕ ಪಕ್ಷದ ಸಭಾತ್ಯಾಗ

ಫೆಬ್ರವರಿ ನಾಲ್ಕರಂದು ಕಾರ್ಪೊರೇಷನ್ ಕೌನ್ಸಿಲ್ ಸಭೆ ಸೇರಿತ್ತು. ವಿವಿಧ ಸಮಿತಿಗಳಿಗೆ ಚುನಾವಣೆ ನಡೆಯಬೇಕಾಗಿದ್ದು, ಕಾಂಗ್ರೆಸ ಪಕ್ಷ ತನ್ನ ಅಲ್ಪ ಬಹುಮತವ ದುರುಪಯೋಗಪಡಿಸಿಕೊಂಡದ್ದೇ ಕಾರಣವಾಗಿ, ವಿರೋಧ ಪಕ್ಷವಾದ ಸಂಯುಕ್ತ ನಾಗರಿಕ ಪಕ್ಷವು ಸಭಾತ್ಯಾಗ ಮಾಡಬೇಕಾದ ಅವಶ್ಯಕತೆ ಬಂತೆಂದು, ಪಕ್ಷದ ನಾಯಕ ಶ್ರೀ ಎಸ್. ಆರ್. ಮೂರ್ತಿಯವರು ಹೇಳಿದ್ದಾರೆ.

ಲೋಕಸಭೆ, ರಾಜ್ಯಸಭೆಗಳಲ್ಲೂ ಕೂಡಾ ಈ ಸಮಿತಿಗಳ ಆಯ್ಕೆಯಲ್ಲಿ ಸಂಖ್ಯಾನುಗತ ಪ್ರಾತಿನಿಧ್ಯ ಕೊಡುತಿದ್ದುದೇ ರೂಢಿ. ಬೆಂಗಳೂರು ಕಾರ್ಪೊರೇಷನಿನಲ್ಲೂ ಈ ಪರಂಪರೆ ಇತ್ತು. ಆದರೆ ಈ ಭಾರಿ ಕಾಂಗ್ರೆಸ್ ತನ್ನ ಸರ್ವಾಧಿಕಾರದ ಪೂರ್ಣ ಸ್ವರೂಪವನ್ನು ತೋರಿದೆ. ಎಂದಿನಿಂದಲೂ ಇಂದು ಸಂಖ್ಯಾನುಗತ ಪ್ರಾತಿನಿಧ್ಯ ಕೊಡಬೇಕಾದುದು ನ್ಯಾಯ. ಕಾರ್ಪೊರೇಷನ್ ಚುನಾವಣೆಗಳಲ್ಲಿ 55 ಸ್ಥಾನಗಳಲ್ಲಿ ಕಾಂಗ್ರೆಸ್ ಪಡೆದಿರುವುದು 26 ಸ್ಥಾನಗಳನ್ನೆಂದು ಇಲ್ಲಿ ಹೇಳಬೇಕು. 29 ಸ್ಥಾನಗಳನ್ನು ವಿರೋಧ ಪಕ್ಷಗಳವರು ಪಡೆದಿದ್ದರೂ, ಆಲ್ಡರ ಮೇನ್ ಚುನಾವಣೆಯಲ್ಲಿ, ಇವರಲ್ಲಿ ಅಷ್ಟಾಗಿ ಒಗ್ಗಟ್ಟು ಇರದ ಕಾರಣ ಕಾಂಗ್ರೆಸ್ ಅಲ್ಪ ಬಹುಮತ ಪಡೆಯುವಂತಾಗಿದೆ. ಇದನ್ನು ಉಪಯೋಗಿಸಿ, ನಾಗರಿಕರ ಹಿತರಕ್ಷಣೆಗಾಗಿರುವ ಸಮಿತಿಗಳಲ್ಲಿ ವಿರೋಧ ಪಕ್ಷಗಳವರಿಗೆ ಸ್ಥಾನ ಕೊಡದೆ ಇರುವುದು, ಕಾಂಗ್ರೆಸ್ಸಿನ ಜನವಿರೋಧಿ ನೀತಿಯ ಅಚ್ಚ ಪ್ರತೀಕವೆನ್ನದೆ ವಿಧಿಯಿಲ್ಲ.

ಸಂಯುಕ್ತ ನಾಗರಿಕ ಪಕ್ಷದ ನಾಯಕರಾದ ಶ್ರೀ. ಎಸ್. ಆರ್. ಮೂರ್ತಿಯವರು ಪತ್ರಿಕೆಗಳಿಗಿತ್ತ ಹೇಳಿಕೆಯೊಂದರಲ್ಲಿ, "ಕಾಂಗ್ರೆಸ್ಸಿನ ಈ ತಾಂತ್ರಿಕ ಬಹುಮತದ ದುರುಪಯೋಗದ ವಿರುದ್ಧ, ಘಟನಾರೀತ್ಯ ಹೋರಾಡಿ, ಸಂಖ್ಯಾನುಗತ ಪ್ರಾತಿನಿಧ್ಯಗಳನ್ನು ಪಡೆಯಲು ಸರ್ವಪ್ರಯತ್ನ ಮಾಡುವೆವೆಂದು" ನಾಗರಿಕರಿಗೆ ಭರವಸೆ ಇತ್ತಿದ್ದಾರೆ.

ಪ್ರಾಂತೀಯ ಸುದ್ದಿ ಸಂಗ್ರಹ

ಮಂಗಳೂರು

ಮುನಿಸಿಪಲ್ ಮಜೂರರ ಮಹಾ ವಿಜಯ

ಮಂಗಳೂರು ನಗರಸಭೆಯ ತೋಟಿಗಳು, ಜಾಢಮಾಲಿಗಳು ಮತ್ತು ದೀಪ ಉರಿಸುವವರು ತಾ· 8—2—58ರಿಂದ ಮುಷ್ಕರ ಹೂಡುವ ನೋಟೀಸನ್ನು ನಗರ ಸಭೆಗೂ ಸರಕಾರಕ್ಕೂ ಕೊಟ್ಟಿರುವುದು ಸರ್ವರಿಗೂ ತಿಳಿದ ಸಂಗತಿ.

ಇತ್ತ ಮುನ್ಸಿಪಲ್ ಮಜೂರರು ಮುಷ್ಕರಕ್ಕೆ ಸರ್ವಸಿದ್ಧತೆಯನ್ನು ನಡೆಸುತ್ತಿರುವಾಗಲೇ ತಾ| 24—1—58ರಂದು ಸೇರಿದ ಮುನ್ಸಿಪಲ್ ಕೌನ್ಸಿಲ್ ಸಭೆಯು ಅಂಗೀಕರಿಸಿರುವ ಠರಾವಿನಲ್ಲಿ, ಸರಕಾರಿ ಸ್ಕೇಲಿನಂತೆ ಸಂಬಳ ಕೊಡಲು ಒಪ್ಪಿದೆ. ತಾತ್ಕಾಲಿಕ ಪರಿಹಾರವಾಗಿ ಈ ಮಜೂರರು ಇಂದು ಪಡೆಯುತ್ತಿರುವ ರೂ. 20 ತುಟ್ಟಿಭತ್ತೆಯನ್ನು ರೂ. 25ಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ. ಮತ್ತು ಹೆಚ್ಚಿಸಲ್ಪಟ್ಟ ಸಂಬಳವನ್ನು 1957ನೇ ಎಪ್ರಿಲ್ ತಿಂಗಳಿಂದ ಕೂಡಿಸಿ ಕೊಡಲು ನಿರ್ಧರಿದೆ. ಮುನ್ಸಿಪಲ್ ಕೌನ್ಸಿಲ್ ಮಾಡಿರುವ ಮೇಲಿನ ನಿರ್ಣಯದ ಪತ್ರವೊಂದು ಮುನ್ಸಿಪಲ್ ಮಜೂರ ಸಂಘಕ್ಕೂ ಬಂದಿದ್ದು ಈ ಪತ್ರದ ಕುರಿತು ಆಲೋಚಿಸಲು ತಾ. 2—2—58ರಂದು ದ. ಕ. ಮುನ್ಸಿಪಲ್ ಎಂಡ್ ಲೋಕಲ್ ಬೋರ್ಡು ವರ್ಕರ್ಸ್ ಯೂನಿಯನಿನ ಮಹಾಸಭೆಯು ಶ್ರೀ ಎ. ಕೆ. ಕೃಷ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಪತ್ರದ ಕುರಿತು ದೀರ್ಘ ಚರ್ಚೆಯಾದ ಬಳಿಕ ನಗರ ಸಭೆಯು ಕೊಡಲು ತೀರ್ಮಾನಿಸಿರುವ ತಾತ್ಕಾಲಿಕ ಪರಿಹಾರವನ್ನು ಸ್ವೀಕರಿಸಿ ಮುಷ್ಕರದ ನೋಟೀಸನ್ನು ಹಿಂತೆಗೆಯಲು ಸರ್ವಾನುಮತದಿಂದ ನಿರ್ಣಯವಾಗಿದೆ. ಮುಷ್ಕರದ ನೋಟೀಸನ್ನು ಹಿಂತೆಗೆಯುವ ನಿರ್ಣಯ ಮಾಡುವಾಗಲೇ ಇನ್ನು ಹೆಚ್ಚಿನ ಕಾಲಹರಣವಿಲ್ಲದೆ ಸರಕಾರಿ ಸ್ಕೇಲಿನಂತೆ ವೇತನಕೊಡಲು ಕೂಡಲೇ ಕ್ರಮ ಕೈಕೊಳ್ಳಬೇಕೆಂದು ನಗರಸಭೆಯನ್ನು ಒತ್ತಾಯಿಸಿದೆ.

ಬೀಡಿ ಮಜೂರರ ವಿಜಯ

ಮಂಗಳೂರಿನ ಹ್ಯೊಗೆಬಜಾರ್ ಎಂಬಲ್ಲಿ ಮಂಗಳೂರು ಗಣೇಶ್ ಬೀಡಿಯ ಕಂಟ್ರಾಕ್ಟ್ ಬ್ರಾಂಚಿನಲ್ಲಿ ಕಳೆದ ದಶಂಬರ ತಿಂಗಳ ತಾ. 28ರಂದು ಪ್ರಾರಂಭವಾದ ಧರಣಿ ಮುಷ್ಕರವು 39 ದಿನಗಳ ನಂತರ ತಾ. 5-2-58ರಂದು ಯಶಸ್ವಿಯಾಗಿ ಕೊನೆಗೊಂಡಿತು.

ಈ ಬ್ರಾಂಚಿನಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 50 ಮಂದಿ ಮಜೂರರು-ಇವರಲ್ಲಿ 20ಕ್ಕೂ ಮಿಕ್ಕಿ ಸ್ತ್ರೀಮಜೂರರಿರುವರು—ಸಂಘಟಿತರಾಗಿ ಕೆಲವು ವರ್ಷಗಳಿಂದ ಕಂಟ್ರಾಕ್ಟ್‌ದಾರನ ಅನ್ಯಾಯವನ್ನು ವಿರೋಧಿಸುತ್ತಾ ಬಂದಿದ್ದಾರೆ. ತನ್ನ ಯಾವ ಕುತಂತ್ರವೂ ಈ ಮಜೂರರಲ್ಲಿ ನಡೆಯುವುದಿಲ್ಲವೆಂದರಿತ ಸದ್ರಿ ಕಂಟ್ರಾಕ್ಟದಾರರು ಈ ಮಜೂರರನ್ನು ಕೆಲಸದಿಂದ ತೆಗೆಯುವ ಉದ್ದೇಶದಿಂದ ಬ್ರಾಂಚನ್ನು ಮಜೂರರಿಗೆ ಕೆಲಸಕ್ಕೆ ಬರಲು ಸಾಧ್ಯವಿಲ್ಲದ ಪ್ರದೇಶಕ್ಕೆ ಬದಲಾಯಿರುವ ನಿರ್ಣಯವನ್ನು ಮಾಡಿದುದನ್ನು ಅನುಸರಿಸಿ ಈ ಹೋರಾಟವು ನಡೆದುದಾಗಿದೆ.

ಈ ಮಜೂರರಿಗೆ ಹಿಂದಿನ ಪ್ರದೇಶದಲ್ಲೇ ಕೆಲಸಕೊಡುವ ವ್ಯವಸ್ಥೆಯನ್ನು ಮಂಗಳೂರು ಗಣೇಶ್ ಬೀಡಿಯ ಮೆನೆಜ್‌ಮೆಂಟಿನವರು ಮಾಡಿರುವುದರಿಂದ 39ದಿನಗಳ ಹೋರಾಟದ ನಂತರ ಈ ಮುಷ್ಕರವು ಅತ್ಯಂತ್ಯ ಯಶಸ್ವಿಯಾಗಿ ಕೊನೆಗೊಂಡಿತು.

ತೂದೂರಿನಲ್ಲಿ ಕಮ್ಯೂನಿಸ್ಟ್ ಕಾರ್ಯಕರ್ತರ ಸಭೆ

ತೀರ್ಥಹಳ್ಳಿತಾಲ್ಲೂಕಿನಲ್ಲಿ ಪ್ರಪ್ರಥಮವಾಗಿ ತೂದೂರಿನಲ್ಲಿ ಕಮ್ಯೂನಿಸ್ಟ್ ಕಾರ್ಯಕರ್ತರ ಸಭೆಯು ಸೇರಿದ್ದಿತು. ಸಂಘಟನಾ ಸಮಿತಿಯ ಸದಸ್ಯರುಗಳನ್ನಾಗಿ ಸರ್ವ ಶ್ರೀ ಜಿ. ಡಿ. ಆರ್. ರಾಮಯ್ಯ, ಜಿ. ಟಿ. ಪುರುಷೋತ್ತಮ, ಎಚ್. ಎನ್. ಕೃಷ್ಣಪ್ಪ, ಪಿ ಎಚ್. ವಿಜಯನ್, ಟಿ. ಎಸ್. ಅನಂತಭಟ್, ಕೆ. ಎನ್. ಕಷ್ಣಮೂರ್ತಿ ಇವರುಗಳನ್ನು ಚುನಾಯಿಸಲಾಯಿತು.

ಇನ್ನೂ ಒಂದು ತಿಂಗಳೊಳಗಾಗಿ ತೂದೂರಿನಲ್ಲಿ ಬಹಿರಂಗ ಸಭೆಯನ್ನು ಕರೆಯಬೇಕೆಂದು ತೀರ್ಮಾನಿಸಲಾಯಿತು.

ಕೊನೆಯದಾಗಿ ವಕೀಲ್ ಬಿ. ಎನ್. ಎ. ಹೆಗ್ಡೆಯವರು ಮಾತನಾಡಿ ಪಾರ್ಟಿಯ, ಧ್ಯೇಯ, ಧೋರಣೆಗಳನ್ನು ತಿಳಿಸಿ ಸರ್ವರ ಸಹಕಾರ ಮತ್ತು ಬೆಂಬಲ ಕೋರಿದರು. ಶ್ರೀ ಟಿ. ಡಿ. ಆರ್. ರಾಮಯ್ಯನವರು ಸರ್ವರನ್ನೂ ವಂದಿಸಿದ ನಂತರ ಸಭೆ ಮುಕ್ತಾಯವಾಯಿತು.

ಮೋಟಾರು ಕಾರ್ಮಿಕರ 'ಬೇಡಿಕೆಗಳ ವಾರ'

ರಸ್ತೆ ಸಾರಿಗೆ ಕಾರ್ಮಿಕರ ಏಕೈಕ ಸಂಸ್ಥೆಯಾದ ನ್ಯಾಷನಲ್ ಫೆಡರೇಷನ್ ಆಫ್ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಆಫ್ ಇಂಡಿಯಾ (ಎ.ಎಫ್.ಆರ್. ಟಿ.ಡಬ್ಲ್ಯು.ಐ) ಸಂಸ್ಥೆಯ ಕರೆಯ ಮೇರೆಗೆ, ಫೆಬ್ರವರಿ 6ರಿಂದ 13ರವರೆಗೆ ದೇಶಾದ್ಯಂತ ಮೋಟಾರು ಕಾರ್ಮಿಕರು **ಬೇಡಿಕೆಗಳ ವಾರವನ್ನು** ಆಚರಿಸುತ್ತಲಿದ್ದಾರೆ. ಇವರ ಕೇಳಿಕೆಗಳು ಈ ಕೆಳಗಿನ ಎಂಟು ಅಂಶಗಳನ್ನೊಳಗೊಂಡಿವೆ.

ಕೇಳಿಕೆಗಳು

- ಮೋಟಾರು ಕಾರ್ಮಿಕರ ಸ್ಥಿತಿಗತಿಗಳ ಪರಿಶೀಲನೆಗೆ ತ್ರಿಪಕ್ಷೀಯ ವಿಚಾರಣಾ ಸಮಿತಿ ಸರಕಾರ ರಚಿಸಬೇಕು.
- ದೇಶದಾದ್ಯಂತ ಸಮಾನ ರೀತಿಯ ಶಾಸನ ಜಾರಿಗೆ ಬರಬೇಕು.
- ಮೋಟಾರು ವೆಹಿಕಲ್ಸ್ ಆ್ಯಕ್ಟ ತಿದ್ದುಪಡಿಯಾಗಬೇಕು.
- ನ್ಯಾಯವಾದ ಕೂಲಿ ನಿಗದಿಗೆ ಎ. ಎಫ್. ಆರ್. ಟಿ. ಡಬ್ಲ್ಯು. ಐ. ಸಂಸ್ಥೆಯ ಪ್ರತಿನಿಧಿಗಳನ್ನೊಳಗೊಂಡ ವೇಜ್ ಬೋರ್ಡ್ ನೇಮಿಸಬೇಕು.
- ಹಾಲಿ ವೇತನದಲ್ಲಿ ಶೇ॥ 25ರಷ್ಟು ಬಡ್ತಿ.
- ಪೋಲೀಸ್ ಜುಲುಮೆ ಕೊನೆಗಾಣಬೇಕು.
- ಕಳೆದ 6 ವರ್ಷಗಳಿಂದ ಜಾರಿಯಲ್ಲಿರುವ ಕನಿಷ್ಠ ಕೂಲಿ ಶಾಸನದ ಅನಿರ್ಬಂಧ ಕಾರ್ಯಾಚರಣೆಗೆ ಯೋಗ್ಯ ಆಡಳಿತ ಸಿಬ್ಬಂದಿನೇಮಕವಾಗಬೇಕು.
- ಪ್ರಯಾಣಿಕರಿಗೆ ಅನಾನುಕೂಲ ತಪ್ಪಿಸಲು ಟ್ಯಾಕ್ಸಿ ಮತ್ತು ಆಟೋ ರಿಕ್ಷಾ ಮಾಲಿಕರಿಗೆ ಪೂರ್ತಾ ಮೀಟರ್ ಹೈರ್ ಮಾತ್ರ ಕೊಡಬೇಕು.

ಇಂದು ದೇಶದ ಆರ್ಥಿಕ ಜೀವನದಲ್ಲಿ ರಸ್ತೆ ಸಾರಿಗೆ ಉದ್ಯೋಗವು, ರೈಲ್ವೆಯ ನಂತರ ಎರಡನೆಯ ಪ್ರಮುಖ ಸ್ಥಾನವನ್ನು ಪಡೆದಿದೆ. ಪ್ರಯಾಣಿಕರ ಹಾಗೂ ಹೆಚ್ಚುತ್ತಿರುವ ಉತ್ಪತ್ತಿಯ ಸಾಗಾಣಿಕೆಯಲ್ಲಿ ರೈಲ್ವೆಯನ್ನು ಬಿಟ್ಟರೆ ಈ ಉದ್ಯಮವೇ ಪ್ರಮುಖವಾದುದು.

ಕಾನೂನಿನ ಉಲ್ಲಂಘನೆ—ಸರಕಾರದ ಮೌನ

ಆದರೂ ಸರಕಾರ ಈ ಉದ್ಯಮದತ್ತ ಏನೊಂದು ಆಸಕ್ತಿಯನ್ನು ತೋರಿಲ್ಲ. ತಾನೇ ಜಾರಿಗೆ ತಂದ ಕನಿಷ್ಠ ವೇತನ ಶಾಸನ ಸೌಲಭ್ಯ ಮೊದಲಾದ ಕಾರ್ಮಿಕ ಕಾನೂನುಗಳ ಸಾರ್ವತ್ರಿಕ ಉಲ್ಲಂಘನೆಯನ್ನು ಮಾಲಿಕರು ನಡೆಸುತ್ತಾ ಬಂದಿದ್ದರೂ, ಸರಕಾರ ಇದನ್ನು ತಡೆಯಲು ಏನೊಂದೂ ಕ್ರಮ ವಹಿಸಿಲ್ಲ. ಈ ಕ್ಷೇತ್ರದಲ್ಲಿ ಸರ್ವಸಾಧಾರಣವಾಗಿ ಟ್ಯಾಕ್ಸಿ ಹಾಗೂ ಆಟೋ ರಿಕ್ಷಾ ಡ್ರೈವರುಗಳಿಂದ 12 16 ಗಂಟೆಗಳ ದುಡಿತ, ವಿಶೇಷವಾಗಿ ಲಾರಿ ಡ್ರೈವರು, ಕ್ಲೀನರುಗಳಿಂದ ಒಂದೇ ಸಮನೆ 36–42 ಗಂಟೆಗಳಷ್ಟು ದುಡಿತವನ್ನು ಪಡೆಯಲಾಗುತ್ತಿದೆ.

ಒಂದು ಕಡೆ ಮಾಲಿಕರು ಇನ್ನೊಂದೆಡೆ ಪೋಲೀಸರ ನಿತ್ಯ ಕಿರುಕುಳ, ಲೈಸೆನ್ಸ್ ರದ್ದಿಯಾತಿ, ಕೋರ್ಟುಗಳ ಅಲೆದಾಟ ಇವೆಲ್ಲಾ ಈ ಕ್ಷೇತ್ರದ ಕಾರ್ಮಿಕರ ಜೀವನದ ಸ್ಥಿತಿಗತಿಗಳ ಮೇಲೆ ಬಲವಾದ ಪೆಟ್ಟನ್ನಿತ್ತಿದೆ. ಇತ್ತ ಸಾರ್ವಜನಿಕರಿಂದಲೂ ಅವರ ಮೇಲೆ ಹೆಚ್ಚು ಹಣ ಕೇಳುವರೆಂಬ ಅಪವಾದ ಬರುತ್ತಿದೆ. ಆದರೆ ಇದಕ್ಕೆ ಕಾರಣ, ಮಾಲಿಕರೇ. ಪ್ರಯಾಣಿಕರಿಲ್ಲದೆ ಓಡಿದ ಮೈಲುಗಳಿಗೂ ಹಣ ಕೇಳುವ ಮಾಲಿಕರಿಂದಾಗಿ ಡ್ರೈವರುಗಳು ಸಾರ್ವಜನಿಕರ ಕ್ರುದ್ಧ ಟೀಕೆಗೆ ಒಳಗಾಗಬೇಕಾಗಿದೆ.

ಈ ಎಲ್ಲಾ ಪರಿಸ್ಥಿತಿಗಳನ್ನೂ ಗಮನಿಸಿ, ಮೋಟಾರು ಕಾರ್ಮಿಕರು ಬೆಂಗಳೂರಿನಲ್ಲಿ ಬಲವಾದ ಸಂಘಟನೆಯಲ್ಲಿ ಒಂದಾಗಲು ಮುಂದೆ ಬಂದಿರುತ್ತಾರೆ. ಸಧ್ಯದಲ್ಲೇ ಮೈಸೂರು ರಾಜ್ಯಕ್ಕೆ ಸಂಬಂಧಿಸಿದ ಮೋಟಾರು ಕಾರ್ಮಿಕರ ಫೆಡರೇಷನ್ ಸ್ಥಾಪಿಸಲು ಸರ್ವ ಪ್ರಯತ್ನಗಳನ್ನೂ ನಡೆಸಲಾಗುತ್ತಿದೆ. ಇದಕ್ಕಾಗಿ ಒಂದು ಸಮ್ಮೇಳನ ಕರೆಯುವ ಸಿದ್ಧತೆಗಳು ಆಗುತ್ತಿವೆ. ನಗರದ ಹಾಗೂ ಇಡೀ ಕರ್ನಾಟಕದ ಮೋಟಾರು, ಲಾರಿ, ಆಟೋ ರಿಕ್ಷಾ ಕಾರ್ಮಿಕರು ತಮ್ಮ ಹಕ್ಕು ಹಿತಗಳ ರಕ್ಷಣೆಗೆ ತಾವೇ ಟೊಂಕ ಕಟ್ಟಿ ಮುಂದೆ ಬಂದು ಹೋರಾಡುವ ಸಂದರ್ಭ ಇದೀಗ ಬಂದಿದೆ. ಈ ದಿಶೆಯತ್ತ ಮೊದಲ ಹೆಜ್ಜೆಯಾಗಿ, ಅಖಿಲ ಭಾರತಾದ್ಯಂತ ನಡೆಯುತ್ತಿರುವ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಕೇಳಿಕೆ **ವಾರಾಚರಣೆ** ಅಂಗವಾಗಿ ನಗರದ ಮೋಟಾರು ಕಾರ್ಮಿಕರು **ಕೇಳಿಕೆಯ ವಾರ**ವನ್ನು ಆಚರಿಸುತ್ತಿದ್ದಾರೆ. ಅವರ ನ್ಯಾಯಬದ್ಧವಾದ ಕೇಳಿಕೆಗಳನ್ನು ಗಮನಿಸಿ, ಸರಕಾರ ಕೂಡಲೆ ಈ ಪ್ರಧಾನ ಉದ್ಯಮವೊಂದರಲ್ಲಿ ದುಡಿಯುವ ಕಾರ್ಮಿಕರ ಹಿತರಕ್ಷಣೆಗಾಗಿ ಕ್ರಮವಹಿಸುವುದರಲ್ಲಿ ಇನ್ನು ವಿಳಂಬ ಮಾಡಕೂಡದು.

ಮದರಾಸಿನಲ್ಲಿ ಮತ್ತೊಂದು ಹೊಸ ಪಕ್ಷ!

(೩ನೇ ಪುಟದಿಂದ)

"ದೆಹಲಿಯ ಹಿಡಿತದಿಂದ ಸ್ವತಂತ್ರವಾಗಿರುವ" ಹಾಗೂ "ಜಗತ್ತಿನ ಸ್ವತಂತ್ರ ರಾಷ್ಟ್ರಗಳ ಸಾಲಿನಲ್ಲಿ ಸ್ಥಾನವನ್ನು ಪಡೆಯುವ" ಸ್ವತಂತ್ರ ತಮಿಳುನಾಡನ್ನು ಸ್ಥಾಪಿಸುವುದೇ ಈ ಪಕ್ಷದ ಮೂಲ ಧ್ಯೇಯ. ಪ್ರತ್ಯೇಕವಾದಿಗಳಿಂದ ಕೂಡಿದ ಈ ಪಕ್ಷವನ್ನು ರಾಜಕೀಯ ಪಕ್ಷವೆಂದು ಕರೆಯುವುದರ ಬದಲು 'ಸಂಕುಚಿತ ಪ್ರತ್ಯೇಕವಾದಿ'ಗಳ ಮತ್ತೊಂದು ಗುಂಪು ಎಂದು ಕರೆಯುವುದು ಸೂಕ್ತವೆನಿಸುತ್ತದೆ. ಉತ್ತರ-ದಕ್ಷಿಣ ಭಾರತಗಳ ವೈಮನಸ್ಯವನ್ನು ಸ್ಥಾಪಿಸಿ ಅಂಥ ಪ್ರತ್ಯೇಕತಾ ಭಾವನೆಯನ್ನು ಹುಟ್ಟಿಸಲು ಯತ್ನಿಸುವ ಈ ಪಕ್ಷಗಳಿಗೆ ಜನತೆಯ ಬೆಂಬಲ ದೊರಕಲಿಕ್ಕಿಲ್ಲ. ಈ ಪಕ್ಷದ ಸಂಕುಚಿತ ಪ್ರವೃತ್ತಿಯನ್ನೂ ಅಂಥ ಮನೋವೃತ್ತಿಯನ್ನೂ ಬಯಲಿಗೆಳೆಯುವುದು ಎಲ್ಲ ಪ್ರಜಾಪ್ರಭುತ್ವವಾದಿಗಳ ಕರ್ತವ್ಯವಾಗಿದೆ.

ತುಮಕೂರು ಯುವಕ ಸಂಘದ ಆಶ್ರಯದಲ್ಲಿ ಪ್ರೀ ಯುನಿವರ್ಸಿಟಿ ವಿದ್ಯಾರ್ಥಿಗಳಿಗೆ ಪಾಠ ಪ್ರವಚನ

ತಾರೀಖು 9-2-58ರ ಭಾನುವಾರ ಸಂಜೆ 5 ಘಂಟೆಗೆ ತುಮಕೂರು ಪುರಸಭಾ ಭವನದಲ್ಲಿ ಶ್ರೀ ಬಿ. ಸಿ. ಈಶ್ವರ ಮೂರ್ತಿ ಎಮ್. ಎ. ಅವರಿಂದ ಸುಮಾರು 500 ಜನ ವಿದ್ಯಾರ್ಥಿಗಳನ್ನುದ್ದೇಶಿಸಿ, ಪ್ರೀಯೂನಿವರ್ಸಿಟಿ ಪಾಠ್ಯಪುಸ್ತಕದಿಂದ ಮಹಾಕವಿಗಳಾದ ವರ್ಡ್ಸ್‌ವರ್ತ್‌ರವರ, "Resolution Indipendence," ಟೆನ್ನಿಸನ್‌ರವರ "Crossing the bar" ವಿಲಿಯಂ ಬ್ಲೇಕ್‌ರವರ "The Tiger" ಮತ್ತು ಜಾನ್‌ಫೇಯವರ The Fox at the point of death" ಈ ನಾಲ್ಕು ಪದ್ಯಗಳ ಮೇಲೆ ಸುಮಾರು 1॥ ಘಂಟೆಗಳ ಕಾಲ ಉಪನ್ಯಾಸ ನಡೆಯಿತು. ಆ ಮುನ್ನ ಶ್ರೀ ಕೆ. ಮಲ್ಲಣ್ಣನವರು ಉಪನ್ಯಾಸಕಾರಕರನ್ನು ಪರಿಚಯ ಮಾಡಿಕೊಟ್ಟರು. ನಂತರ ಶ್ರೀ ಈಶ್ವರ ಮೂರ್ತಿಗಳು "ಯುವಕ ಸಂಘ"ದ ಪರವಾಗಿ ಇಂತಹ ಉಪನ್ಯಾಸವನ್ನು ವ್ಯವಸ್ಥೆಗೊಳಿಸುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗುತ್ತದೆ. ಇನ್ನು ಮುಂದೂ ಉತ್ಸಾಹದಿಂದ ನಮ್ಮ ಕೈಲಾದಷ್ಟು ನಿಮ್ಮೊಡನೆ ಸಹಕರಿಸಲು ಸಿದ್ಧರಿದ್ದೇವೆ. ಎಂದು ಭರವಸೆ ಇತ್ತರು.

ಉಪನ್ಯಾಸ ಮುಗಿದ ನಂತರ ಯುವಕ ಸಂಘದ ಪರವಾಗಿ ಕೆ. ಮಲ್ಲಣ್ಣ ಬಿ. ಎ.ಎಲ್. ಎಲ್. ಬಿ. ಇವರು ಉಪನ್ಯಾಸಕಾರರನ್ನು ವಂದಿಸುತ್ತಾ ಈ ಯುವಕ ಸಂಘವು ಸುಮಾರು 1 ವರ್ಷದಿಂದ ಕೆಲಸಮಾಡುತ್ತಲಿದೆ. ಈಗ ವಿದ್ಯಾರ್ಥಿಗಳ ಅಭಿಲಾಷೆಯ ಮೇರೆಗೆ ಇಂತಹ ತರಗತಿಗಳನ್ನು ಸಹ ನಡೆಸಬೇಕೆಂದಿದ್ದೇವೆ. ಇದರಲ್ಲಿ ನಮ್ಮ ಉಪಾಧ್ಯಾಯರುಗಳು ನಮಗೆ ಹೆಚ್ಚಿನ ಸಹಕಾರವನ್ನೀಯುವ ಭರವಸೆಯನ್ನಿತ್ತಿದ್ದಾರೆ. ಇದರ ಜತೆಗೆ ಕಲೆ, ಸಾಹಿತ್ಯ, ಕ್ರೀಡೆ ಮತ್ತು ಚರ್ಚಾಕೂಟಗಳು ಮುಂತಾದ ಸಾಮಾಜಿಕ ಚಟುವಟಿಕೆಗಳನ್ನು ಏರ್ಪಡಿಸಲಾಗುತ್ತದೆ. ಈ ಒಂದು ಅವಕಾಶವನ್ನು ವಿದ್ಯಾರ್ಥಿಗಳಾದ ತಾವು ಉಪಯೋಗಿಸಿಕೊಳ್ಳಬೇಕು. ವಿಶ್ವವಿದ್ಯಾನಿಲಯದಲ್ಲಿ ಹಿಂದೆ ಇದ್ದ ಕಾಲೇಜು ಯೂನಿಯನನ್ನು ಈಗ ತೆಗೆದುಹಾಕಿದ್ದಾರೆ. ಇದರಿಂದ ನಿಜವಾಗಿಯೂ ವಿದ್ಯಾರ್ಥಿಗಳ ಚಟುವಟಿಕೆಗೆ ಧಕ್ಕೆ ಬಂದಿದೆ ಎಂಬುದರಲ್ಲಿ ಸಂಶಯವಿಲ್ಲ. ಆ ಕಾರಣ ಇಂತಹ ಸಂಘಟನೆಗಳನ್ನು ಮುಂದುವರಿಸಬೇಕು. ಆದ್ದರಿಂದ ತಾವುಗಳು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಿ—ಈ ಸಂಘವನ್ನು ಬಲಪಡಿಸಬೇಕೆಂದು ಕೇಳಿಕೊಂಡರು. ಅಂದಿನ ಉಪನ್ಯಾಸದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಯುವಕ ಸಂಘದ ಇಂತಹ ಚಟುವಟಿಕೆಗಳಿಗೆ ಮೆಚ್ಚಿಗೆಯನ್ನು ಸೂಚಿಸಿದರು.

ಓದುಗರ ಓಲೆ

(೬ನೇ ಪುಟದಿಂದ)

ಕಾಂಗ್ರೆಸ್ ಸಮಿತಿಗೆ ರಾಜೀನಾಮೆ ಇತ್ತು ಕಮ್ಯೂನಿಸ್ಟ್ ಪಾರ್ಟಿಗೆ!

ಚಿಕ್ಕಮಗಳೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೆ ಕಾಂಗ್ರೆಸ್ಸಿಗರೊಬ್ಬರು ಈ ರೀತಿ ಬರೆದಿರುತ್ತಾರೆ: ನಾನು ಈಗ್ಯೆ ಹಲವಾರು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸದಸ್ಯನಾಗಿರುತ್ತೇನೆ. ನಾನು ವಿದ್ಯಾರ್ಥಿದೆಶೆಯಲ್ಲಿದ್ದಾಗ, ಕಾಂಗ್ರೆಸ್ಸ್, ಜನಾಂಗಗಳ ಐಕ್ಯಮತ್ಯಕ್ಕಾಗಿ ಮತ್ತು ದೇಶದ ಮೇಲ್ಮೆಗಾಗಿ ಕೆಲಸ ಮಾಡುವುದೆಂದು ಭಾವಿಸಿದ್ದೆ. ಆದ್ದರಿಂದಲೇ ನಾನು ವಿದ್ಯಾಭ್ಯಾಸ ಮುಗಿಸಿ ಬಂದ ತಕ್ಷಣ ಕಾಂಗ್ರೆಸ್ಸ್ ಪಕ್ಷದ ಸದಸ್ಯನಾದೆ. ಅಲ್ಲದೆ ಮೊನ್ನೆ ನಡೆದ ಮಂಡಲ ಸಮಿತಿಯ ಸದಸ್ಯನಾಗಿಯೂ ಸಹ ಮಾಡಿದರು. ದೇಶಸೇವೆ ಮಾಡಬೇಕೆಂದಿದ್ದ ನನಗೆ ಇತ್ತೀಚೆಗೆ ಕಾಂಗ್ರೆಸ್ಸಿನಲ್ಲಿ ಜಿಗುಪ್ಸೆ ಉಂಟಾಗುತ್ತಿದೆ. ಕಾಂಗ್ರೆಸ್ ಪಕ್ಷದ ಮುಖಂಡರೆನಿಸಿಕೊಂಡವರು, ದೇಶದ ಮತ್ತು ಜನತೆಯ ಹಿತದೃಷ್ಟಿಯಿಂದ ಕೆಲಸಮಾಡುತ್ತಿದ್ದಾರೆಯೋ, ಅಥವಾ ಅಧಿಕಾರ ಮತ್ತು ಐಶ್ವರ್ಯ ಸಂಪಾದನೆಗಾಗಿ ತಮ್ಮ ತಮ್ಮಲ್ಲಿಯೇ ಕಸರತ್ತು ಮಾಡುತ್ತಿದ್ದಾರೆಯೋ, ಎಂಬ ವಿಶಯದ ಬಗ್ಗೆ ನನಗೆ ಅನುಮಾನಬಂದಿದೆ.

ಸ್ವಾರ್ಥ, ಜಾತೀಯತೆ, ಲಂಚಕೋರತನಗಳು ಕಾಂಗ್ರೆಸ್ಸಿನ ಧ್ಯೇಯ ಧೋರಣೆ ಎನಿಸಹತ್ತಿದೆ, ಈ ವಿಶಯದ ಬಗ್ಗೆ ನಾನು ಬಹಳ ದಿವಸಗಳಿಂದ ವಿಚಾರ ಮಾಡಿ, ಸಮಾಜಸೇವೆ ಮಾಡಬೇಕೆಂದಿರುವ ನನ್ನಂಥಾ ಯುವಕನಿಗೆ ಕಾಂಗ್ರೆಸ್ಸ್ ಪಕ್ಷ ಹೇಳಿಸಿದ್ದಲ್ಲಾ ಎಂಬ ತೀರ್ಮಾನಕ್ಕೆ ಬಂದಿರುತ್ತೇನೆ ಆದ್ದರಿಂದ ಮಂಡಲ ಕಾಂಗ್ರೆಸ್ ಸದಸ್ಯತನಕ್ಕೂ, ಮತ್ತು ನಾಲ್ಕಾಣೆ ಸದಸ್ಯತನಕ್ಕೂ ರಾಜೀನಾಮೆ ಕೊಟ್ಟಿರುತ್ತೇನೆ. ಈ ಪತ್ರವೇ ರಾಜೀನಾಮೆ ಪತ್ರವೆಂದು ತಿಳಿಯತಕ್ಕದ್ದಲ್ಲದೆ ಇದನ್ನು ತಾವು ಅಂಗೀಕರಿಸುವಿರಾಗಿ ನಂಬಿರುತ್ತೇನೆ.

ಇತಿ, **"ಚಿದಂಬರ"**

(ಈ ಕಾಗದ ಬರೆದ ಶ್ರೀ ಚಿದಂಬರರವರು ಇದೀಗ ಕಮ್ಯೂನಿಸ್ಟ್ ಪಾರ್ಟಿಗೆ ಸೇರಿ ದುಡಿಯ ಬೇಕೆಂದು ಮುಂದೆ ಬಂದಿರುತ್ತಾರೆ.)

ಸಂಯುಕ್ತ ಮಹಾರಾಷ್ಟ್ರ ಸಮಿತಿಗೆ ಇನ್ನೊಂದು ಜಯ

ಮಹಾರಾಷ್ಟ್ರ ಮತ್ತು ಗುಜರಾತುಗಳ ಜನತೆಯ ಭಾಷಾವಾರು ರಾಜ್ಯರಚನೆಯ ಹೆಬ್ಬಕೆಯನ್ನು ಮೆಟ್ಟಿ, ಮುಂಬಾಯಿ ದ್ವಿಭಾಷಾ ಪ್ರಾಂತರಚನೆಯನ್ನು, ಈ ಎರಡು ಜನಾಂಗಗಳ ಮೇಲೆ ಬಲಾತ್ಕಾರದಿಂದ ಹೇರಿದೆ—ಕಾಂಗ್ರೆಸ್ ಸರಕಾರ. ಕಾಂಗ್ರೆಸ್ಸಿನ ಮಟ್ಟಿಗೆ, ಈ ಒಂದು ಸರ್ವಾಧಿಕಾರ ಧೋರಣೆ ಅದರ ರಾಜಕೀಯ ಆತ್ಮಹತ್ಯೆಯೋ ಎಂಬ ಸ್ಥಿತಿಗೆ ಬಂದು ಮುಟ್ಟಿದೆ ಮಹಾರಾಷ್ಟ್ರ ಗುಜರಾತಿನಲ್ಲಿ.

ಕಳೆದ ಮಹಾಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಪ್ರಚಂಡ ಸೋಲಿನ ಔತಣವನ್ನಿತ್ತ ಸಂಯುಕ್ತ ಮಹಾರಾಷ್ಟ್ರ ಸಮಿತಿ, ಆ ಮೇಲೆ ನಡೆದ ಉಪಚುನಾವಣೆಗಳಲ್ಲೂ, ಕಾಂಗ್ರೆಸ್ಸನ್ನು ಮಹತ್ತಾದ ಸೋಲಿಗೆ ತುತ್ತಾಗಿಸಿದೆ.

ಈಗ ಮಝಗಾಂವ್‌ನಲ್ಲಿ ನಡೆದ ಉಪಚುನಾವಣೆಯಲ್ಲಿ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಉಮೇದುವಾರರು ಪುನಃ ವಿಜಯ ಸಾಧಿಸಿದ್ದಾರೆ. ಇಲ್ಲಿ ನೇರವಾದ ಸ್ಪರ್ಧೆ ನಡೆದಿದ್ದು, ಕಾಂಗ್ರೆಸ್ಸಿನ ಉಮೇದುವಾರ ಹಾಗೂ ರಾಷ್ಟ್ರೀಯ ಮಿಲ್ ಮಜ್ದೂರ್ ಸಂಘದ ಅಧ್ಯಕ್ಷರಾದ ಶ್ರೀ ಪಿ. ಕೆ. ಸಾವಂತರ ಮೇಲೆ ಸುಮಾರು 6,210 ರಷ್ಟು ಬಹುಮತದ ವಿಜಯವನ್ನು ಸಮಿತಿಯ ಉಮೇದುವಾರರಾದ ಡಾ॥ ಡಿ. ಎಲ್. ಆನಂದೆ ಸಾಧಿಸಿದ್ದಾರೆ. ಇವರು ಹಿಂದೆ ಇದೇ ಕ್ಷೇತ್ರದಿಂದ ಚುನಾಯಿತರಾಗಿದ್ದು, ಇಲೆಕ್ಷನ್ ಟ್ರಿಬ್ಯೂನಲ್ ಇವರ ಆಯ್ಕೆಯ ವಿರುದ್ಧ ತೀರ್ಪಿತ್ತು, ಪುನರ್ ಚುನಾವಣೆ ಆಗಬೇಕೆಂದು ಹೇಳಿತ್ತು.

ಈ ಉಪಚುನಾವಣೆಯೂ ಕೂಡಿ ಕಳೆದ ವರುಷದಲ್ಲಿ ನಡೆದ ಉಪಚುನಾವಣೆಯಲ್ಲೂ, ಕಾಂಗ್ರೆಸ್ ಎರಡು ಬಾರಿ ಸೋಲನ್ನುಂಡಂತಾಗಿದೆ. ಅಲ್ಲದೆ ಮರಾಠವಾಡದಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲೂ ಸಂಯುಕ್ತ ಮಹಾರಾಷ್ಟ್ರ ಸಮಿತಿ ಕಾಂಗ್ರೆಸ್ಸನ್ನು ಅಪಮಾನಕಾರಕವಾಗಿ ಸೋಲಿಸಿದೆ.

ಪಾರ್ಲಿಮೆಂಟ್ ಅಧಿವೇಶನ ಆರಂಭ

(ಪ್ರಥಮ ಪುಟದಿಂದ)

ತಿಳಿದು ಬಂದಿದೆ. ವರದಿಯು ಮಂತ್ರಿಮಂಡಲದಲ್ಲಿಡಲ್ಪಟ್ಟ ನಂತರದಲ್ಲಿ ಹಣಕಾಸಿನ ಸಚಿವ ಟಿ.ಟಿ.ಕೆ. ರವರು ವರದಿಯ ಆಧಾರದ ಮೇಲೆ ತಾವು ಅಧಿಕಾರದಲ್ಲಿರುವುದು ಸಮಂಜಸವಾಗಿ ಕಾಣುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಗೊಳಿಸಿರುವರೆಂದು ತಿಳಿದು ಬಂದಿದೆ.

ವರದಿಯು ಇನ್ನೂ ಪ್ರಕಟವಾಗಿರದಿದ್ದರೂ ಅನೇಕ ಅಂಶಗಳು ತಿಳಿದಿವೆ. ಕಾಂಗ್ರೆಸ್ ಪಕ್ಷದಲ್ಲಿ ವರದಿಯನ್ನು ಹಾಗೆಯೆ ಒಪ್ಪಿಕೊಳ್ಳಕೂಡದೆಂಬ ಅಭಿಪ್ರಾಯವಿದೆ ಎಂದು ವರದಿಯೊಂದು ತಿಳಿಸುತ್ತದೆ. ಚಾಗ್ಲಾ ಸಮಿತಿಯ ವರದಿಯ ಮೇಲೆ ಪಾರ್ಲಿಮೆಂಟ್ ಸದಸ್ಯರುಗಳ ನಡುವೆ ಬಹಳ ಆಸಕ್ತಿ ಮೂಡಿದೆ. ವರದಿಯು ಹಸ್ತಗತವಾಗುವುದನ್ನು ಕಾತರದಿಂದ ಕಾಯಲಾಗುತ್ತಿದೆ ಎಂದು ವರದಿಯೊಂದು ತಿಳಿಸುತ್ತದೆ.

ವರದಿಯನ್ನು ಕುರಿತಾಗಿ ಟಿ. ಟಿ. ಕೆ. ಯವರು ಮಂಗಳವಾರವಂದು ಲೋಕಸಭೆಯ ಮುಂದೆ ಹೇಳಿಕೆಯೊಂದನ್ನು ಕೊಡುವರೆಂದೂ, ಈ ಬಾರಿಯ ಬಜೆಟ್ಟನ್ನೂ ಪಂಡಿತ ನೆಹರೂರವರೇ ಮಂಡಿಸುವರೆಂದೂ ತಿಳಿದು ಬಂದಿದೆ.

ಹಕ್ಕುಬಾಧ್ಯತೆಯ ಪ್ರಶ್ನೆ

ಅರ್ಥಸಚಿವ ಟಿ. ಟಿ. ಕೃಷ್ಣಮಾಚಾರಿಯವರು ಮುಂಧ್ರ ಪ್ರಕರಣದ ಬಗ್ಗೆ ಲೋಕಸಭೆಯಲ್ಲಿ ಹೇಳಿದುದಕ್ಕೂ ಮತ್ತು ಆಗಾಗ್ಗೆ ಅವರು ಕೊಡುತ್ತಿದ್ದ ಹೇಳಿಕೆಗಳಿಗೂ ಮತ್ತು ಚಾಗ್ಲಾ ಸಮಿತಿಯ ಮುಂದೆ ಸಾಕ್ಷ್ಯ ನೀಡುವಾಗ ಮಾಡಿರುವ ಹೇಳಿಕೆಗಳಿಗೂ ಬಹಳ ವ್ಯತ್ಯಾಸವಿರುವುದರಿಂದ ಅವರು ಪಾರ್ಲಿಮೆಂಟಿನ ನಿಯಮಾವಳಿಗಳಿಗೆ ಬದ್ಧರಾಗಿಲ್ಲದಿರುವುದರಿಂದ ಹಕ್ಕುಬಾಧ್ಯತೆಯ ಪ್ರಶ್ನೆ ಎದ್ದಿದೆಯೆಂದು ಲೋಕಸಭೆಯ ಕಮ್ಯೂನಿಸ್ಟ ಸದಸ್ಯರು ಹಕ್ಕುಬಾಧ್ಯತೆಯ ಪ್ರಶ್ನೆಯನ್ನು ಎತ್ತಿದ್ದಾರೆ.

ಲೋಕಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಉಪನಾಯಕರುಗಳಾದ ಎ. ಕೆ. ಗೋಪಾಲನ್ ಮತ್ತು ಹಿರೇನ್ ಮುಖರ್ಜಿಯವರು ಹಕ್ಕುಬಾಧ್ಯತೆ ಪ್ರಶ್ನೆಯನ್ನು ಎತ್ತಿದ್ದಾರೆ. ಅಲ್ಲದೆ ಚಾಗ್ಲಾ ಸಮಿತಿಯ ಮುಂದೆ ನೀಡಲಾದ ಸಾಕ್ಷ್ಯವೆಲ್ಲವನ್ನೂ ಸದಸ್ಯರಿಗೆ ಒದಗಿಸಿಕೊಡಬೇಕೆಂದು ಒತ್ತಾಯಪಡಿಸಿದ್ದಾರೆ.

ಪಂಡಿತ ನಹರೂರವರು ಉತ್ತರ ಕೊಡುತ್ತ, ಸಾಕ್ಷಿಗಳೆಲ್ಲವೂ ಈಗಾಗಲೇ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗಿದೆಯೆಂದೂ, ಸದಸ್ಯರಿಗೆ ಅದನ್ನು ಬೇರೆ ದೊರಕಿಸಿಕೊಡಬೇಕಿದ್ದಲ್ಲಿ ಕಡೆಯ ಪಕ್ಷ ಎರಡು ವಾರಗಳಾದರೂ ಆದೀತೆಂದು ತಿಳಿಸಿದ್ದಾರೆ.

ಕಮ್ಯೂನಿಸ್ಟ ಸದಸ್ಯರು ಮಂಡಿಸಿರುವ ಹಕ್ಕುಬಾಧ್ಯತೆ ಪ್ರಶ್ನೆಯ ಬಗ್ಗೆ ಲೋಕಸಭೆಯಲ್ಲಿ ಬಿಸಿ ಬಿಸಿ ಚರ್ಚೆ ನಡೆದಿದೆ. ಸಭಾಧ್ಯಕ್ಷರು ಮತ್ತು ಕಮ್ಯೂನಿಸ್ಟ ಸದಸ್ಯರ ನಡುವೆ ಈ ಪ್ರಶ್ನೆಯ ಅರ್ಹತೆಯ ಬಗ್ಗೆ ಚರ್ಚೆ ನಡೆದಿದೆ. ಕಮ್ಯೂನಿಸ್ಟ್ ಸದಸ್ಯರಾದ ಎ. ಕೆ. ಗೋಪಾಲನ್‌ರವರು ಹಕ್ಕು ಬಾಧ್ಯತೆ ಪ್ರಶ್ನೆಯನ್ನು ಸಭೆಯ ಮುಂದೆ ತಂದಿರುವುದರಿಂದ ಅದರ ಬಗ್ಗೆ ಮಾಹಿತಿಯನ್ನು ಸಭಾಧ್ಯಕ್ಷರಿಗೆ ಕೊಡಬೇಕೆಂದು ಕೇಳಲಾಗಿದೆ.

ಲಂಚ-ಋಷುವತ್ತುಗಳಿಗೆ ಕಾರಾಗೃಹ ಶಿಕ್ಷೆ

ಸರಕಾರಿ ಅಧಿಕಾರಿಗಳು ಲಂಚ ತೆಗೆದುಕೊಂಡಲ್ಲಿ ಮತ್ತು ಲಂಚದ ಆಪಾದನೆಯ ಮೇಲೆ ಶಿಕ್ಷೆಗೊಳಪಟ್ಟಲ್ಲಿ, ಮುಂದೆ ಅವರನ್ನು ಕಾರಾಗೃಹಕ್ಕೆ ಕೂಡ ಕಳಿಸಲಾಗುವುದೆಂದು ಮಸೂದೆಯೊಂದನ್ನು ಲೋಕ ಸಭೆಯಲ್ಲಿ ತರಲಾಗಿದೆ. ಮಸೂದೆಯು ಮಂಡಿಸಲ್ಪಟ್ಟ ನಂತರದಲ್ಲಿ ಚರ್ಚೆ ನಡೆದು ಅನುಮೋದನೆಯು ಆಗಿದೆ.

ರೈತರ ಪ್ರತಿಭಟನಾ ವಾರ

ಫೆಬ್ರುವರಿ ತಾ. 16ರಿಂದ 22ರ ತನಕ

ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ಕರ್ನಾಟಕದ ಆದ್ಯಂತವಾಗಿ ಫೆಬ್ರುವರಿ ತಾ. 16ರಿಂದ 22ರ ತನಕ ಮೈಸೂರು ಸರಕಾರದ ರೈತ ವಿರೋಧಿ ನೀತಿಯನ್ನು ಪ್ರತಿಷೇಧಿಸಲು ಪ್ರತಿಭಟನಾ ವಾರ ಆಚರಿಸಬೇಕೆಂದು ಎಲ್ಲ ರೈತ ಸಂಘಗಳನ್ನು ಕೇಳಿಕೊಳ್ಳುತ್ತೇವೆ.

● ರೈತರಿಂದ ಜಮೀನ್ದಾರರು ಜಮೀನು ಕಸಿದುಕೊಳ್ಳುವುದನ್ನು ಸರಕಾರ ತಡೆಯುವುದಿಲ್ಲ. ಅದಕ್ಕೆ ಅವಕಾಶ ಕೊಡುತ್ತದೆ. ಕೆಲವು ಸಂದರ್ಭಗಳಲ್ಲಿ ಬೆಂಬಲವನ್ನೂ ನೀಡುತ್ತದೆ.

● ಈಗ ಜಾರಿಯಲ್ಲಿರುವ ನ್ಯಾಯಗೇಣಿ ನಿರ್ಣಯ ಕಾಯಿದೆಗಳು ಬಹಳ ಮಟ್ಟಿಗೆ ಇದ್ದೂ ಇಲ್ಲದಂತಾಗಿವೆ. ಒಕ್ಕಲು ತಪ್ಪಿಸುವುದನ್ನು ಸ್ವಲ್ಪ ಮಟ್ಟಿಗಾದರೂ ತಡೆಯುವ ಕಾನೂನುಗಳು ಕೂಡಾ ಪ್ರಯೋಗಕ್ಕೆ ಬರುತ್ತಿಲ್ಲ. ಇದಕ್ಕೆ ಸರಕಾರದ ಜಮೀನ್ದಾರ ಪಕ್ಷಪಾತತನವೇ ಮುಖ್ಯ ಕಾರಣವಾಗಿದೆ.

● ಸರಕಾರದ ವಶದಲ್ಲಿರುವ ಬಂಜರು ಜಮೀನುಗಳನ್ನು ಜಮೀನಿಲ್ಲದ ಕೃಷಿ ಕೂಲಿಗಾರರಿಗೂ ಬಡರೈತರಿಗೂ ಹಂಚಲು ಸರಕಾರ ಕ್ರಮ ವಹಿಸುವುದಿಲ್ಲ. ಅದರ ಬದಲು ಅಂಥ ಜಮೀನುಗಳನ್ನು ಬೇರೆ ಬೇರೆ ನೆಪಗಳಿಂದ ಜಮೀನ್ದಾರರುಗಳಿಗೆ ಬಿಟ್ಟುಕೊಡಲಾಗುತ್ತದೆ.

● ಗುಲ್ಬರ್ಗ ಜಿಲ್ಲೆಯಲ್ಲಿ ಹಿಂದೆ ಎರಡು ಮೂರು ವರ್ಷಗಳಿಂದ ಬೆಳೆ ಕೆಟ್ಟಾಗ ಮನ್ನಾ ಮಾಡಲಾಗಿದ್ದ ಕಂದಾಯವನ್ನು ಈ ವರ್ಷ ಬೆಳೆ ಕೆಟ್ಟಿದ್ದರೂ ಕಡ್ಡಾಯವಾಗಿ ವಸೂಲು ಮಾಡಲಾಗುತ್ತಿದೆ. ಈ ಕುರಿತು ಸರಕಾರಕ್ಕೆ ರೈತರ ಪರವಾಗಿ ಮಾಡಿಕೊಂಡಿರುವ ಮನವಿಗಳನ್ನು ಸರಕಾರ ಕಡೆಗಣಿಸಿದೆ

● ಕೋಲಾರ ಜಿಲ್ಲೆಯಲ್ಲಿ ಬರಗಾಲದ ಸ್ಥಿತಿ ಕಂಡು ಬಂದಿದೆಯಾದರೂ ಅಲ್ಲಿ ಜನರಿಗೆ ಪರಿಹಾರ ಒದಗಿಸಲು ಸರಕಾರ ಕ್ರಮ ವಹಿಸುತ್ತಿಲ್ಲ. ಜನರ ಕಷ್ಟವನ್ನು ಸರಕಾರ ಉಲಕ್ಷಿಸುತ್ತಿದೆ

● ದಕ್ಷಿಣ ಕನ್ನಡ ಜಿಲ್ಲೆಯ ಸಿಹಿ ಹೆಂಡ ಇಳಿಸುವ ಮೂರ್ತೆದಾರರಿಗೆ ಯಾವ ರೀತಿಯಲ್ಲೂ ನೆರವಾಗದ ಸಹಕಾರ ಸಂಘಗಳ ಹೆಸರಲ್ಲಿ ಕಡ್ಡಾಯವಾಗಿ ಕಮಿಶನ್ ಮತ್ತು ಹುಂಡಿ ಮಸೂಲು ಮಾಡಲಾಗುತ್ತದೆ. ಅದನ್ನು ತೆರದವರಿಗೆ ಲೈಸನ್ಸ್ ನಿರಾಕರಿಸಲಾಗುತ್ತದೆ. ಈ ಬಗ್ಗೆ ಸರಕಾರಕ್ಕೆ ಮಾಡಿಕೊಂಡಿರುವ ಮನವಿಗೆ ಸರಕಾರ ಗಮನ ಕೊಟ್ಟಿಲ್ಲ.

● ಜೋಡಿ - ಇನಾಂ ರದ್ಧತಿ ಕಾಯಿದೆಯಂತೆ ಗ್ರಾಮಗಳನ್ನು ಸರಕಾರ ವಶಕ್ಕೆ ತೆಗೆದುಕೊಂಡು ರೈತರಿಗೆ ಹಂಚಲು ಕ್ರಮ ತೆಗೆದುಕೊಳ್ಳುವುದಿಲ್ಲ. ಬಾಗೆಪಳ್ಳಿಯ ಜೋಡಿ ಮುದ್ದಲ ಪಳ್ಳಿಯಲ್ಲಾದಂತೆ ಅನೇಕ ಜೋಡಿ ಗ್ರಾಮಗಳಲ್ಲಿ ರೈತರ ಮೇಲೆ ಜೋಡಿದಾರರ ಬಲಾತ್ಕಾರ ನಡೆಯುತ್ತದೆ. ರೈತರು ಬೆಳೆಸಿದ ಮರಮಟ್ಟುಗಳನ್ನು ಜೋಡಿದಾರರು ಅಕ್ರಮವಾಗಿ ಕಡಿದು ಸಾಗಿಸುತ್ತಾರೆ. ಇದನ್ನೆಲ್ಲ ಸರಕಾರದ ಗಮನಕ್ಕೆ ತಂದರೂ ಸರಕಾರ ಗಮನಿಸುವುದಿಲ್ಲ.

● ಕೊಡಗು, ದ. ಕನ್ನಡ, ಬಳ್ಳಾರಿ, ಮೈಸೂರು, ಮಂಡ್ಯ, ಬಿಜಾಪುರ, ಕೋಲಾರ, ಗುಲ್ಬರ್ಗ ಮುಂತಾದ ಎಲ್ಲ ಜಿಲ್ಲೆಗಳಲ್ಲೂ ರೈತ ಸಂಘಟನೆಗಳ ಕಾರ್ಯಕರ್ತರ ಮೇಲೆ ಸರಕಾರ ದಬ್ಬಾಳಿಕೆ ನಡೆಸುತ್ತಿದೆ, ಭಯೋತ್ಪಾದಕ ಕ್ರಮ ವಹಿಸುತ್ತಿದೆ.

● ಜತ್ತಿ ಸಮಿತಿಯ ವರದಿಯ ಪ್ರಕಟನೆಯ ನಂತರ ಭೂಸುಧಾರಣೆಯನ್ನು ವಿರೋಧಿಸುವ ಜಮೀನ್ದಾರರು ಸರಕಾರದ ಮೇಲೆ ಬಲವಾದ ಒತ್ತಾಯ ತರುತ್ತಿದ್ದಾರೆ. ಭೂಸುಧಾರಣೆಯನ್ನು ಮಾಡದಂತೆ ತಡೆಯುವ ಮತ್ತು ಒಂದು ವೇಳೆ ಕಾನೂನು ಆದರೂ ಅದರಿಂದ ರೈತರಿಗೆ ರಕ್ಷಣೆ ಮತ್ತು ಪ್ರಯೋಜನ ಸಿಕ್ಕದಂತೆ ಮಾಡುವ ಪ್ರಯತ್ನ ನಡೆಯುತ್ತಿದೆ. ಅದಕ್ಕೆ ಸರಕಾರ ತಲೆಬಾಗುವ ಅಪಾಯವಿದೆ.

ಆದುದರಿಂದ ಪ್ರಾಂತದ ಆದ್ಯಂತವಾಗಿ ಸಭೆ–ಮೆರವಣಿಗೆ–ಮತಪ್ರದರ್ಶನ ನಡೆಸಿ ಸರಕಾರದ ಈ ನೀತಿಗಳನ್ನು ಖಂಡಿಸಬೇಕು. ರೈತರ ಹಿತ ರಕ್ಷಣೆಗೆ ಯೋಗ್ಯ ಕ್ರಮ ವಹಿಸಲು ಸರಕಾರವನ್ನು ಒತ್ತಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ತಾ. 22ರಂದು ಎಲ್ಲ ಜಿಲ್ಲಾ ರೈತ ಸಂಘಗಳ ಪ್ರತಿನಿಧಿಗಳನ್ನು ಒಳಗೊಂಡ ಶಿಷ್ಟಮಂಡಲವು ಮಾನ್ಯ ಮುಖ್ಯ ಮಂತ್ರಿ, ರೆವಿನ್ಯೂ ಮಂತ್ರಿ, ಗೃಹಮಂತ್ರಿ ಮುಂತಾದವರನ್ನು ಕಂಡು ರೈತರ ಬೇಡಿಕೆಗಳನ್ನು ಅರಿಕೆ ಮಾಡಿಕೊಳ್ಳಲಿದೆ. ಎಲ್ಲಾ ಜಿಲ್ಲೆಗಳಿಂದಲೂ ಪ್ರತಿನಿಧಿಗಳು ಶಿಷ್ಟಮಂಡಲವನ್ನು ಸೇರಿಕೊಳ್ಳಬೇಕೆಂದು ವಿನಂತಿಸುತ್ತೇವೆ.

ಕಾರ್ಯಕಾರಿ ಸಮಿತಿ
ಕರ್ನಾಟಕ ಪ್ರಾಂತ ರೈತ ಸಂಘ

ರೈತ ರಂಗ

ಶಂಭೂರು

ಇದೇ ತಾ. 3-2-58ರಂದು ಶಂಭೂರು ಶಾಲೆಯ ಬಳಿ ಆಸುಪಾಸಿನ ರೈತರ ಸಭೆಯು ಶ್ರೀ ನಾಗಮಾರು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ರೈತರ ಮತ್ತು ಮೂರ್ತೆಯವರ ಸಮಸ್ಯೆಗಳ ಕುರಿತು ಶ್ರೀಗಳಾದ ಎಂ. ಎಚ್. ಕೃಷ್ಣಪ್ಪ, ಬಿ. ವೀರಪ್ಪ ಸಾಲಿಯಾನ್, ಮತ್ತು ಕೆ. ಗಣೇಶ ಭಟ್ಟರು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ನೆರೆಕೆರೆಯ ಭೂಮಾಲಕರ ಉಪಟಳವನ್ನು ತಡೆಹಿಡಿಯಲು ಗ್ರಾಮದಲ್ಲಿ ರೈತ ಸಂಘವನ್ನು ಬಲಪಡಿಸುವಂತೆ ಕರೆಕೊಟ್ಟರು. ಬಂಟ್ವಾಳಕೆ ವೀರಪ್ಪ ಪೂಜಾರಿಯವರು ಧನ್ಯವಾದಗಳನ್ನರ್ಪಿಸಿದ ಬಳಿಕ ರೈತ ಸಂಘದ ಗ್ರಾಮ ಸಮಿತಿಯನ್ನು ರಚಿಸಿ ಶಂಭೂರು ಲೋಕಯ ಪೂಜಾರಿಯವರನ್ನು ಅಧ್ಯಕ್ಷರಾಗಿ ಆರಿಸಲಾಯಿತು.

ಕೈರಂಗಳ

ತಾರೀಕು 27-1-58ರಂದು ಕೈರಂಗಳ ಗ್ರಾಮದ ದುಗ್ಗಜ್ಜರ ಕಟ್ಟೆಯಲ್ಲಿ ಶ್ರೀ ಪಜೀರು ನೇಮು ಶೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ನಚ್ಚ ವಿಶ್ವನಾಥ ಶೆಟ್ಟಿ, ಇರಾ ರಾಮ ಪೂಜಾರಿ, ಹೋಟೇಲ್ ಹಮ್ಮಬ್ಬ ಬ್ಯಾರಿ, ಕೆ. ಮದನಾಳ್ವ. ಎಂ. ಎಚ್. ಕೃಷ್ಣಪ್ಪನವರು ಮಾತನಾಡಿ ಸುತ್ತುಮುತ್ತಲಿನ ಭೂಮಾಲಿಕರ ಉಪಟಳಗಳನ್ನು ಖಂಡಿಸಿ ರೈತರು ರೈತ ಸಂಘದಡಿಯಲ್ಲಿ ಒಗ್ಗಟ್ಟಾಗಬೇಕೆಂದು ಕರೆಕೊಟ್ಟರು. ಶ್ರೀ ಸುಬ್ಬಸಪಲ್ಯರು ಧನ್ಯವಾದಗಳನ್ನರ್ಪಿಸಿದ ಬಳಿಕ ಸಭೆ ಮುಕ್ತಾಯವಾಯಿತು.

ಶ್ರೀ ಬಿ. ವೀರಪ್ಪ ಸಾಲಿಯಾನ್ ಮೊದಲಾದವರ ಬಂಧನ !

ಬಂಟ್ವಾಳ ಸರ್ಕಲ್ ರೈತ ಸಂಘದ ಕಾರ್ಯದರ್ಶಿ ಶ್ರೀ ಬಿ. ವೀರಪ್ಪ ಸಾಲಿಯಾನ್ ಮತ್ತಿತರ 8 ಮಂದಿಯನ್ನು ಕಳೆದ ತಾ. 7ರಂದು ಬಂಟ್ವಾಳದ ಪೋಲೀಸರು ಬಂಧಿಸಿರುವರೆಂದೂ, ತಾ. 8ರಂದು ಅವರನ್ನು ಜಾಮೀನಿನಲ್ಲಿ ಬಿಡಲು ನಿರಾಕರಿಸಲಾಗಿದೆಯೆಂದೂ ತಿಳಿದುಬಂದಿದೆ. ಬಂಧನದ ನಿಜವಾದ ಕಾರಣವಿನ್ನೂ ತಿಳಿದುಬಂದಿಲ್ಲ. ರೈತ ಭೂಮಾಲಿಕರ ವಿವಾದವೊಂದರ ಸಂಬಂಧದಲ್ಲಿ ಈ ಬಂಧನ ನಡೆದಿರಬೇಕೆಂದು ಹೇಳಲಾಗಿದೆ.

ಸಬ್ ರಿಜಿಸ್ಟ್ರಾರರ ವರದಿ........

(೩ನೇ ಪುಟದಿಂದ)

ಮಂತ್ರಿ ಮಂಡಲ ತಿಳಿದು ಯೋಗ್ಯ ರೀತಿಯಲ್ಲಿ ವರ್ತಿಸುವುದೇ !

ಸಹಕಾರಿ ಚಳವಳಿಯ ಕತ್ತು ಹಿಸುಕುವ ಬದಲು, ಅದರಲ್ಲಿರುವ ನ್ಯೂನತೆಗಳನ್ನು ತೊಡೆದು ಕೇಂದ್ರದ ಆಣತಿಯನ್ನು ಶಿರಸ್ಸಾವಹಿಸಿ, ಈ ಚಳವಳಿಯನ್ನು ಪ್ರೋತ್ಸಾಹಿಸುವುದೆ?

ಹಾಗೂ, ಸರಕಾರ ಈ ದಿಶೆಯಲ್ಲಿ ಮುಂಬರದಲ್ಲಿ, ಅಸೆಂಬ್ಲಿಯಲ್ಲಿರುವ ಸಾರ್ವಜನಿಕರ ಪ್ರತಿನಿಧಿಗಳು, ಈ ವಿಷಯವಾಗಿ–ಸಾರ್ವಜನಿಕ ಹಣದ ಈ ದುರುಪಯೋಗದ ಬಗ್ಗೆ–ಸರಕಾರದ ಕಣ್ಣು ಹರಿಸುವ ಯತ್ನವನ್ನು ಮಾಡುವರೆಂದು ನಾವು ನಂಬಿರುತ್ತೇವೆ. —"ಪಾಲ್"

REG. No. M. 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone- 3810